ಸಂಪುಟ: 06 ಸಂಚಿಕೆ: 234 ಪುಟಗಳು: 08 ಸೋಮವಾರ 09 ನವೆಂಬರ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833 9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ದೀಪಾವಳಿ ವಿಶೇಷಾಂಕ



ನಾಡಿನ ಸಮಸ್ತ ಜನತೆಗೆ ಹಾಗೂ ಪತ್ರಿಕಾ ಓದುಗಾರರು, ವರದಿಗಾರರು, ಜಾಹೀರಾತುದಾರರಿಗೆ ಪತ್ರಿಕಾ ಬಳಗದಿಂದ

ನರಕ ಚತುರ್ದಶಿ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು

ಸೂಚನೆ: ಹಬ್ಬದ ನಿಮಿತ್ಯ ಸೋಮವಾರ ಕಚೇರಿಗೆ ಬಿಡವು ಇರುವ ಕಾರಣದಿಂದ ಮಂಗಳವಾರ ಪತ್ರಿಕೆ ಮುಂದ್ರಣವಾಗುವುದಿಲ್ಲ.
ಸಂಪಾದಕರು ಉದಯವಾಹಿನಿ

ಸರ್ಕಾರ ಹಾಲಿನ ದರ 4-5 ರೂ. ಇಳಿಸಬೇಕು: ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು

ಸರ್ಕಾರ ಹಾಲಿನ ದರವನ್ನು 4-5 ರೂ. ಇಳಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಆಗ್ರಹಿಸಿದ್ದಾರೆ. ಧವಳಗಿರಿ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಹಳ ನೋವಿನಿಂದ ಈ ಸುದ್ದಿಗೋಷ್ಠಿ ಮಾಡುತ್ತಿದ್ದೇನೆ.

ರಾಜ್ಯ ಸರ್ಕಾರಕ್ಕೆ ಜನ ಶಾಪ ಹಾಕುತ್ತಿದ್ದಾರೆ. ಡಿಕೆಶಿ ಅವರು ರಾಜ್ಯದಲ್ಲಿ ಬೆಲೆ ಏರಿಕೆ ಮಾಡಿ ಜನ ಸಾಮಾನ್ಯರ ಮೇಲೆ ಬರೆ ಹಾಕಿದ್ದಾರೆ. ಅವೈಜ್ಞಾನಿಕವಾಗಿ ದರ ಏರಿಕೆ ಮಾಡಲಾಗಿದೆ. ಕಳೆದ ಮೂರೂವರೆ ವರ್ಷದ ಇವರ ಸಾಧನೆ ದರ ಏರಿಕೆ ಮಾತ್ರ. ಪೆಟ್ರೋಲ್ ಮೇಲೆ, ಆಲ್ಕೋಹಾಲ್ ಮೇಲೆ, ಹಾಲಿನ ಮೇಲೆ, ನೀರಿನ ಮೇಲೆ, ಜಂಗಲ್ ಸಫಾರಿ ಮೇಲೆ, ವಿವಿಧ ಶುಲ್ಕಗಳು, ಆಸ್ಪತ್ರೆಗಳಲ್ಲಿ ಶುಲ್ಕ, ಬಸ್ ಟಿಕೆಟ್ ಮೇಲೆ ಸೇರಿ ಹಲವಾರು ವಸ್ತುಗಳ ಮೇಲೆ ದರ ಏರಿಸಿದ್ದಾರೆ. ಬಸ್ ಟಿಕೆಟ್ 45%ರಷ್ಟು, ಹಾಲಿನ ಮೇಲೆ 8 ರೂ, ಮೊಸರು 14 ರೂ, ತುಪ್ಪದ ದರ 180 ರೂ ಏರಿಸಿದ್ದಾರೆ. ಒಂದು ಲೋಟ ಹಾಲು ಕುಡಿಯಲು ಸಹ ಜನ ಯೋಚನೆ ಮಾಡುವಂತಾಗಿದೆ ಎಂದು ಕಿಡಿಕಾರಿದರು. ರೈತರಿಗೆ ಸಹಾಯ ಧನ ಕೊಡಲಿ, ಅದರ ಬದಲು ಜನರ ಮೇಲೇಕೆ ಹೊರೆ ಹಾಕುತ್ತೀರಿ ಬಸ್ ಟಿಕೆಟ್ ದರ ಇಳಿಸಿ. ದರ ಏರಿಕೆಗೆ ಕಾರಣ ಶಕ್ತಿ ಯೋಜನೆ ಬಾಕಿ ಕೊಡುವುದು. ಸಾರಿಗೆ ನಿಗಮಗಳಿಗೆ ಹಣ ಕೊಡದೇ ಬಸ್‌ಗಳಿಗೆ ಡೀಸಲ್ ಸಹ ಹಾಕಿಸಲು ಆಗುತ್ತಿರಲಿಲ್ಲ. ಸಿಎಂ ಅವರೇ ಡೀಸೆಲ್ ಹಾಕಿಸಲೂ ಹಣ ಇಲ್ಲ ಅಂತ ಒಪ್ಪಿಕೊಂಡಿದ್ದಾರೆ.

ಹಾಸನಾಂಬೆ ದೇವಾಲಯದಲ್ಲಿ ತಹಶೀಲ್ದಾರ್, ಡಿವೈಎಸ್‌ಪಿ ನಡುವೆ ವಾಗ್ವಾದ ಕಣ್ಣೀರಿಟ್ಟ ಮಹಿಳಾ ಅಧಿಕಾರಿ

• ಉದಯವಾಹಿನಿ, ಬೆಂಗಳೂರು

ಹಾಸನಾಂಬ ಜಾತ್ರಾ ಮಹೋತ್ಸವದಲ್ಲಿ ಹಾಸನ ತಹಶೀಲ್ದಾರ್ ಗೀತಾ ಹಾಗೂ ಡಿವೈಎಸ್‌ಪಿ ಮಾಲತೇಶ್ ಅವರ ನಡುವೆ ತೀವ್ರ ವಾಗ್ವಾದ ನಡೆದಿದೆ. ಈ ವೇಳೆ ಗೀತಾ ಅವರು ಕಣ್ಣೀರಿಟ್ಟಿದ್ದಾರೆ. ಪ್ರೋಟೋಕಾಲ್ ವಾಹನ ಹೋಗುತ್ತಿದೆ. ನನ್ನ ವಾಹನ ತೆಗಿಸಿಕೊಡಿ ಎಂದು ತಹಶೀಲ್ದಾರ್ ಹೇಳಿದ್ದಾರೆ. ಇದೇ ವಿಚಾರಕ್ಕೆ ತಹಶೀಲ್ದಾರ್ ಹಾಗೂ ಡಿವೈಎಸ್‌ಪಿ ನಡುವೆ ವಾಗ್ವಾದ ಆರಂಭವಾಗಿದೆ. ದೇವಾಲಯದ ಮುಂಭಾಗ ಭಕ್ತರ ಎದುರಲ್ಲಿ ಅಧಿಕಾರಿಗಳು ಏಕವಚನದಲ್ಲೇ ಪರಸ್ಪರ ನಿಂದಿಸಿಕೊಂಡಿದ್ದಾರೆ. ಈ ವೇಳೆ ತಹಶೀಲ್ದಾರ್ ಕಣ್ಣೀರಿಟ್ಟಿದ್ದಾರೆ. ಭಾನುವಾರ ರಜಾ ದಿನವಾಗಿದ್ದರಿಂದ ದೇವಸ್ಥಾನದಲ್ಲಿ ಭಕ್ತರ ಸಂಖ್ಯೆ ಹೆಚ್ಚಿದೆ. ಧರ್ಮದರ್ಶನದ ಸಾಲಿನಲ್ಲಿ ಭಕ್ತರು ತುಂಬಿ ತುಳುಕುತ್ತಿದ್ದಾರೆ. 1000, 300 ರೂ. ವಿಶೇಷ ದರ್ಶನದ ಸಾಲಿನಲ್ಲಿ ಭಕ್ತರ ಸಂಖ್ಯೆ ಕಡಿಮೆ ಇದೆ. ದೇವಿ ದರ್ಶನ ಪಡೆದು ವಾಪಾಸ್ ಹೋಗುವವರಿಗೆ ಹೆಚ್ಚಿನ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರಿಗೆ ಹೆಚ್ಚಿನ ಬಸ್ ವ್ಯವಸ್ಥೆ ಮಾಡಲಾಗಿದೆ. ಹಾಸನ ನಗರದ ಚನ್ನಪಟ್ಟಣದಲ್ಲಿರುವ ಸಾರಿಗೆ ಬಸ್ ನಿಲ್ದಾಣ ಬಸ್‌ಗಳಿಂದ ತುಂಬಿಹೋಗಿದೆ.

ದೇವಿರಮ್ಮ ದರ್ಶನಕ್ಕೆ ಭಕ್ತಸಾಗರ! ಬೆಟ್ಟದ ತುದಿಯಲ್ಲಿ ಕಂಬಿ ಮುರಿದು ದುರಂತ

• ಉದಯವಾಹಿನಿ, ಬೆಂಗಳೂರು

ಚಿಕ್ಕಮಗಳೂರು ತಾಲ್ಲೂಕಿನ ಚಂದ್ರದ್ರೋಣ ಪರ್ವತದ ಸಾಲಿನಲ್ಲಿರುವ ಬಿಂಡಿಗ ದೇವಿರಮ್ಮ ದರ್ಶನಕ್ಕೆ ನಿರೀಕ್ಷೆಗೂ ಮೀರಿ ಭಕ್ತಸಾಗರ ಹರಿದು ಬರುತ್ತಿದೆ. ಶನಿವಾರ ಬೆಟ್ಟದಿಂದ ಜಾರಿಬಿದ್ದು ಯುವಕನೋರ್ವ ಗಾಯಗೊಂಡಿದ್ದ.

ಭಾನುವಾರ ಬೆಟ್ಟ ಏರುವಾಗ ಹೃದಯಾಘಾತದಿಂದ ಓರ್ವ ಸಾವನ್ನಪ್ಪಿದ್ದಾರೆ. ಇದೆಲ್ಲದರ ಮಧ್ಯೆ ಇದೀಗ ಮತ್ತೊಂದು ಅವಘಡ ಸಂಭವಿಸಿದೆ. ಬೆಟ್ಟದ ಮೇಲೆ ಹಾಕಿದ್ದ ಕಬ್ಬಿಣದ ಕಂಬಿ ಮುರಿದ ಪರಿಣಾಮ ಒಬ್ಬರ ಮೇಲೆ ಮತ್ತೊಬ್ಬರು ಬಿದ್ದು, ಓರ್ವ ಬಾಲಕ ಸೇರಿದಂತೆ 20ಕ್ಕೂ ಹೆಚ್ಚು ಜನರು ಗಂಭೀರ ಗಾಯಗೊಂಡಿದ್ದಾರೆ. ಗಾಯಗೊಂಡ ಭಕ್ತರನ್ನು ಚಿಕ್ಕಮಗಳೂರು ಮಲ್ಲೇಗೌಡ ಆಸ್ಪತ್ರೆಗೆ ರವಾನಿಸಲಾಗಿದೆ.

ವಿಮಾನ ಕ್ಯಾನ್ಸಲ್‌ಗೆ ಪ್ರಯಾಣಿಕರು ಗರಂ, ಸಿಬ್ಬಂದಿಗೆ ತರಾಟೆ

• ಉದಯವಾಹಿನಿ, ಬೆಂಗಳೂರು

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ಸ್ಪೈಸ್ ಜೆಟ್ ವಿಮಾನ ರದ್ದಾದ ಹಿನ್ನೆಲೆಯಲ್ಲಿ ಪ್ರಯಾಣಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಘಟನೆಯ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿದೆ. ದೆಹಲಿಗೆ ತೆರಳಲು ಸ್ಪೈಸ್‌ಜೆಟ್ ವಿಮಾನದಲ್ಲಿ ಟಿಕೆಟ್ ಕಾಯ್ದಿರಿಸಿದ್ದ ಮಹಿಳೆಯೊಬ್ಬರು ಸೇರಿದಂತೆ ಹಲವು ಪ್ರಯಾಣಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಏರ್‌ಲೈನ್ಸ್ ಕೊನೆಯ ಕ್ಷಣದಲ್ಲಿ ವಿಮಾನವನ್ನು ರದ್ದುಗೊಳಿಸಿದ್ದು, ಪ್ರಯಾಣಿಕರಿಗೆ ಯಾವುದೇ ಸಮರ್ಪಕ ಮಾಹಿತಿಯನ್ನು ನೀಡಿಲ್ಲ ಎನ್ನಲಾಗಿದೆ.

ಮಾಹಿತಿ ಕೊರತೆಯಿಂದಾಗಿ ಹಾಗೂ ವಿಮಾನ ರದ್ದಾದ ಕಾರಣ ಸುಮಾರು 35 ಮಂದಿ ಪ್ರಯಾಣಿಕರು ಸ್ಪೈಸ್‌ಜೆಟ್ ಕೌಂಟರ್ ಬಳಿ ಜಮಾಯಿಸಿದ್ದಾರೆ.

ಆಕ್ರೋಶಗೊಂಡ ಪ್ರಯಾಣಿಕರು ಏರ್‌ಲೈನ್ಸ್ ಸಿಬ್ಬಂದಿಯೊಂದಿಗೆ ವಾಗ್ವಾದಕ್ಕಿಳಿದಿದ್ದು, ಕೆಲವು ಪ್ರಯಾಣಿಕರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಈ ಸಂದರ್ಭದಲ್ಲಿ ಓರ್ವ ಮಹಿಳೆ ಸ್ಪೈಸ್‌ಜೆಟ್‌ನ ಮಹಿಳಾ ಸಿಬ್ಬಂದಿಯ ಮೇಲೆ ಹಲ್ಲೆಗೂ ಯತ್ನಿಸಿದ್ದಾರೆ ಎಂದು ಹೇಳಲಾಗಿದೆ.

ಎಥೆನಾಲ್ ವಿಶ್ರಣ ವಿವಾದ: ಮೊದಲು ನಿಮ್ಮ ತಟ್ಟೇಲಿ ಹೆಗ್ಗಣ ಬಿದ್ದಿದೆ, ಅದು ನೋಡಿ ಎಂದ ಅಶೋಕ್

• ಉದಯವಾಹಿನಿ, ಬೆಂಗಳೂರು



ಎಥೆನಾಲ್ ಎಷ್ಟು ಮಿಕ್ಸ್ ಮಾಡಬೇಕು ಅನ್ನೋದು ಕೇಂದ್ರ ನಿರ್ಧಾರ ಮಾಡುತ್ತೆ. ದೇಶಕ್ಕೆ ಉಳಿತಾಯ ಮಾಡಲು ಎಥೆನಾಲ್ ಮಿಕ್ಸ್ ಮಾಡಲಾಗುತ್ತದೆ. ನಿಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದೆ, ಅದು ನೋಡಿ ಎಂದು ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದರು. ಸೆವೆನ್ ಮಿನಿಸ್ಟರ್ ಕ್ವಾಟ್ರಸ್‌ನಲ್ಲಿಂದು ಛಲವಾದಿ ನಾರಾಯಣಸ್ವಾಮಿ ಭೇಟಿ ಮಾಡಿ ಬಳಿಕ ಮಾತನಾಡಿದ ಅವರು, ಎಥೆನಾಲ್ ಬ್ಲೆಂಡಿಂಗ್ ಜಟಾಪಟಿ ವಿಚಾರವಾಗಿ ಪ್ರತಿಕ್ರಿಯಿಸಿ, ನಮ್ಮ ಬಳಿ ಎಥೆನಾಲ್ ಚೆಕ್ ಮಾಡೋ ಹೈಕ್ವಾಲಿಟಿ ಎಲ್ಲಿದೆ? ಪೆಟ್ರೋಲ್ ಬಂಕ್‌ನವನೇ ಎಥೆನಾಲ್ ಮಿಕ್ಸ್ ಮಾಡಿದ್ರೆ ಏನು ಮಾಡೋದು? ಹೆಚ್ಚಿನ ಎಥೆನಾಲ್ ಮಿಕ್ಸ್ ಮಾಡಿರೋದಕ್ಕೆ ಗ್ಯಾರಂಟಿ ಏನು? ಹಬ್ಬ ಇದೆ ಚೆಕ್ ಮಾಡೋಕೆ ಆಗಲ್ಲ ಅಂತಾರೆ. ಗೋಕುಲಾಷ್ಟಮಿಗೂ ಮುಲ್ಲಾಸಾಬಿಗೂ ಏನು ಸಂಬಂಧ ಸರ್ಕಾರದ ಬಳಿ ಅಂಕಿಅಂಶ ಇದ್ದರೆ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದರು. ಹಾಲು ತಮಿಳುನಾಡಿನಿಂದ ಚಿಕ್ಕಪೇಟೆಗೆ ಬರ್ತಿದೆ. ಅದು ಚೆಕ್ ಮಾಡಿ ಮೊದಲು. ಅಕ್ಕಿಗೆ ಕಲ್ಲು ಬೆರೆಸ್ತಿದ್ದಾರೆ, ಅದು ಚೆಕ್ ಮಾಡಿ. ಡ್ರಗ್ ಫ್ಯಾಕ್ಟರಿನೇ ಇಟ್ಟಿದಾರೆ, ಅದು ಚೆಕ್ ಮಾಡಿ. ಎಥೆನಾಲ್ ಎಷ್ಟು ಮಿಕ್ಸ್ ಮಾಡಬೇಕು ಅನ್ನೋದು ಕೇಂದ್ರ ನಿರ್ಧಾರ ಮಾಡೋದು. ದೇಶಕ್ಕೆ ಉಳಿತಾಯ ಮಾಡೋಕೆ ಎಥೆನಾಲ್ ಮಿಕ್ಸ್ ಮಾಡೋದು. ಕಾವೇರಿ ನೀರು ಎಷ್ಟು ಮಲಿನ ಆಗಿದೆ, ಅದು ನೋಡಿ. ತಮಿಳುನಾಡು ಅದರ ವರದಿ ಬಿಡುಗಡೆ ಮಾಡಿದೆ ಎಂದು ವಾಗ್ದಾಳಿ ನಡೆಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪ್ರತಿವರ್ಷವೂ ದೀಪಾವಳಿಯನ್ನು ಭಾರತೀಯ ಸೇನೆ, ನೌಕಾಸೇನೆ ಮತ್ತು ವಾಯುಸೇನೆ ಹಾಗೂ ವಿವಿಧ ಭದ್ರತಾ ಪಡೆಗಳ ಯೋಧರೊಂದಿಗೆ ಆಚರಿಸುತ್ತಾರೆ. ಅದರಂತೆ ಈ ವರ್ಷವೂ ತಾವು ಬಸ್ತರ್‌ನಲ್ಲಿ ನಿಯೋಜನೆಗೊಂಡಿರುವ ಭದ್ರತಾ ಸಿಬ್ಬಂದಿ ಜೊತೆ ದೀಪಾವಳಿ ಆಚರಿಸುವುದಾಗಿ ಪ್ರಧಾನಿ ಮೋದಿ ತಿಳಿಸಿದ್ದರು. ಛತ್ತೀಸ್‌ಗಢದ ಬಸ್ತರ್ ಜಿಲ್ಲೆ ಎಡಪಂಥೀಯ ಉಗ್ರವಾದವನ್ನು ನಿರ್ಮೂಲನೆ ಮಾಡುವ ಸರ್ಕಾರದ ಅಭಿಯಾನದ ಕೇಂದ್ರಬಿಂದು. ಇಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಗಳಲ್ಲಿ ಸೆಂಟ್ರಲ್ ರಿಸರ್ವ್ ಪೊಲೀಸ್ ಫೋರ್ಸ್ (ಸಿಆರ್‌ಪಿಎಫ್) ಮತ್ತು ಛತ್ತೀಸ್‌ಗಢ ಪೊಲೀಸರು ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಕಳೆದ ಮಾರ್ಚ್ 31 ರಂದು, ನಕ್ಸಲ್ ಸಂಘಟನೆಯ ಹಲವು ಹಿರಿಯ ನಾಯಕರು ಹಾಗೂ ಕಾರ್ಯಕರ್ತರ ನಿರ್ಮೂಲನೆ ಮಾಡಲಾಗಿತ್ತು. ಇದಾದ ಬಳಿಕ ನೂರಾರು ನಕ್ಸಲೀಯರು ಸರ್ಕಾರದ ಮುಂದೆ ಶರಣಾಗಿದ್ದರು. ಇದಾದ ಬಳಿಕ ಕೇಂದ್ರ ಸರ್ಕಾರ ನಕ್ಸಲ್ ಮುಕ್ತ ಭಾರತ ಘೋಷಣೆ ಮಾಡಿತು. ಸಿಆರ್‌ಪಿಎಫ್ ಕಳೆದ 12 ತಿಂಗಳುಗಳಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಯಾವುದೇ ಸಾವು-ನೋವುಗಳನ್ನು ಎದುರಿಸಿಲ್ಲ. ಅದರ ಮಹಾನಿರ್ದೇಶಕ ಜಿಪಿ ಸಿಂಗ್ ಸುಧಾರಿತ ಉಪಕರಣಗಳು, ತರಬೇತಿ, ಕಾರ್ಯತಂತ್ರದ ಯೋಜನೆ ಮತ್ತು ವೇಗದ ವೈದ್ಯಕೀಯ ಸ್ಥಳಾಂತರಿಸುವಿಕೆಗೆ ಮನ್ನಣೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು, 2026ರ ದೀಪಾವಳಿಯನ್ನು ಬಸ್ತರ್‌ನಲ್ಲಿರುವ ಭದ್ರತಾ ಸಿಬ್ಬಂದಿ ಜೊತೆ ಆಚರಿಸಿರುವುದು ದೇಶದ ಗಮನ ಸೆಳೆದಿದೆ.







ಬಸ್ತರ್‌ನಲ್ಲಿ ಹೊಸ ಇತಿಹಾಸ, ಯೋಧರೊಂದಿಗೆ ದೀಪಾವಳಿ ಆಚರಿಸಿದ ಮೋದಿ

ರಾಜಕೀಯ ಗುರುವಿಗೆ **ಅಕ್ಷರ ನಮನ**



ದೇಶದ ಭದ್ರತೆಗಾಗಿ ನಕ್ಸಲ್ ಮನಸ್ಥಿತಿಯವರನ್ನು ಗುರುತಿಸಿ ಸೋಲಿಸಿ

ಯೋಧರೊಂದಿಗೆ ದೀಪಾವಳಿ ಆಚರಿಸಿದ ಪ್ರಧಾನಿ ಮೋದಿ

ಸೈನಿಕರರಿಗೆ ನಮೋ ಸಲಾಂ

1 ಛತ್ತೀಸ್‌ಗಢ ರಾಜ್ಯದ ಬಸ್ತರ್‌ನಲ್ಲಿ ಯೋಧರೊಂದಿಗೆ ದೀಪಾವಳಿ ಆಚರಿಸಿದ ಪ್ರಧಾನಿ ಮೋದಿ.

2 ನಕ್ಸಲೀಯರನ್ನು ಮಟ್ಟಹಾಕಿದ ಭದ್ರತಾ ಪಡೆ ಯೋಧರನ್ನು ಗೌರವಿಸಿದ ಪ್ರಧಾನಿ ಮೋದಿ.

3 ಬಸ್ತರ್‌ನಲ್ಲಿ ನಕ್ಸಲ್ ವಾದದ ಅಂತ್ಯವನ್ನು ಘೋಷಿಸಿದ ಪ್ರಧಾನಿ ಮೋದಿ.

ಒಂದು ಕಾಲದಲ್ಲಿ ಗುಂಡಿನ ಸದ್ದು, ಪಟಾಕಿಗಳ ಬೆಳಕು

ನಾವು ಬಡತನ ನಿರ್ಮೂಲನೆ, ಮಾದಕವಸ್ತು ಮುಕ್ತ ಭಾರತ, ವಿಕಸಿತ ಭಾರತ ಮತ್ತು ಆತ್ಮನಿರ್ಭರ ಭಾರತದ ಬಗ್ಗೆ ಮಾತನಾಡುತ್ತೇವೆ.

ನಾವು ಖಂಡಿತವಾಗಿಯೂ ಈ ಗುರಿಗಳನ್ನು ಸಾಧಿಸುತ್ತೇವೆ. ಈ ಕನಸುಗಳು ನಮ್ಮ ಕಣ್ಣಮುಂದೆಯೇ ನನಸಾಗುವುದನ್ನು ನಾವು ಕಾಣಬೇಕು. ನನ್ನ ದೇಶದ ಯುವಶಕ್ತಿಯ ಮೇಲೆ ಮತ್ತು ನಮ್ಮ ರಾಷ್ಟ್ರದ ಜನರ ಮೇಲೆ ನನಗೆ ನಂಬಿಕೆಯಿದೆ ಎಂದರು. ಪ್ರಧಾನಿ ಮೋದಿ ಅವರು ಸೈನಿಕರು ಮತ್ತು ಭದ್ರತಾ ಸಿಬ್ಬಂದಿಯೊಂದಿಗೆ ದೀಪಾವಳಿಯನ್ನು ಆಚರಿಸುವುದನ್ನು ಒಂದು ಸಂಪ್ರದಾಯವನ್ನಾಗಿ ಮಾಡಿಕೊಂಡಿದ್ದಾರೆ. ಇದಕ್ಕಾಗಿ ಅವರು ಸಾಮಾನ್ಯವಾಗಿ ಗಡಿ ಭಾಗದ ನೆಲೆಗಳಿಗೆ ಅಥವಾ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಪ್ರದೇಶಗಳಿಗೆ ಭೇಟಿ ನೀಡುತ್ತಾರೆ. ಕಳೆದ ವರ್ಷ, ಅವರು ಗೋವಾದಲ್ಲಿ 'ಐಎನ್‌ಎಸ್ ವಿಕ್ರಾಂತ್' ನೌಕೆಯಲ್ಲಿ ಸಶಸ್ತ್ರ ಪಡೆಗಳ ಸಿಬ್ಬಂದಿಯೊಂದಿಗೆ ದೀಪಾವಳಿ ಹಬ್ಬವನ್ನು ಆಚರಿಸೋದು ಸಂತಸ ಎಂದರು.

• ಉದಯವಾಹಿನಿ, ಬಸ್ತಾರ್ (ಛತ್ತೀಸ್‌ಗಢ)

ದಿಮಾಗಿ ನಕ್ಸಲರ ಬಗ್ಗೆ ಎಚ್ಚರಿಕೆ ನೀಡಿದ ಪ್ರಧಾನಿ ನರೇಂದ್ರ ಮೋದಿ, ದೇಶದ ಭದ್ರತೆಗಾಗಿ ಇವರನ್ನು ಗುರುತಿಸಿ, ಸೋಲಿಸಬೇಕಾದ ಅಗತ್ಯವಿದೆ ಎಂದು ಕರೆ ಕೊಟ್ಟರು. ಛತ್ತೀಸ್ ಗಢದ ಬಸ್ತರ್ ಜಿಲ್ಲೆಯಲ್ಲಿರುವ ಸಿಆರ್‌ಪಿಎಫ್ ಶಿಬಿರದಲ್ಲಿ ಇಂದು ಭದ್ರತಾ ಸಿಬ್ಬಂದಿಯೊಂದಿಗೆ ದೀಪಾವಳಿ ಆಚರಿಸಿ ಅವರು ಮಾತನಾಡಿದರು. ನಕ್ಸಲಿಸಂ ಅಂತ್ಯಗೊಂಡಿರಬಹುದು, ಆದರೆ ಅದರ ಬೆದರಿಕೆ ಇನ್ನೂ ಸಂಪೂರ್ಣವಾಗಿ ಮಾಯವಾಗಿಲ್ಲ. ಕಾಡುಗಳಿಂದ ಸಶಸ್ತ್ರ ನಕ್ಸಲರನ್ನು ನಿರ್ಮೂಲನೆ ಮಾಡಿರಬಹುದು. ಆದರೆ 'ಬೌದ್ಧಿಕ ನಕ್ಸಲರು' ಅನೇಕ ಸಂಘಟನೆಗಳ ಮೇಲೆ ಹಿಡಿತ ಸಾಧಿಸಿದ್ದಾರೆ. ಇಂದು ಅವರು ದೇಶದ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ವಿರುದ್ಧ ಜನರನ್ನು ಪ್ರಚೋದಿಸುತ್ತಿದ್ದಾರೆ. ಇಂತಹ 'ಬೌದ್ಧಿಕ ನಕ್ಸಲರು' ಅನೇಕ ರಾಜಕೀಯ ಸಂಘಟನೆಗಳು ಮತ್ತು ಸಂಸ್ಥೆಗಳೊಳಗೆ ನುಸುಳಿದ್ದಾರೆ. ನಾವು ಅವರನ್ನು ಗುರುತಿಸಿ, ಸೋಲಿಸುವ ಮೂಲಕ ದೇಶದ ಭದ್ರತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಪ್ರಧಾನಿ ಮೋದಿ ಹೇಳಿದರು.

ಈ ಬಾರಿಯ ದೀಪಾವಳಿ ನಿಜಕ್ಕೂ ವಿಶೇಷವಾಗಿದೆ. ಸುಮಾರು 40-50 ವರ್ಷಗಳ ನಂತರ ಇಂತಹ ಸಂದರ್ಭ ಬಂದಿದೆ. ನಕ್ಸಲಿಸಂ ಮತ್ತು ಮಾವೋವಾದಿ ಭಯೋತ್ಪಾದನೆಯ ವಿರುದ್ಧದ ದಶಕಗಳ ಸುದೀರ್ಘ ಹೋರಾಟದಲ್ಲಿ ದೇಶ ಗೆಲುವು ಸಾಧಿಸಿದ ನಂತರ ಬರುತ್ತಿರುವ ಮೊದಲ ದೀಪಾವಳಿ ಇದಾಗಿದೆ. ದೇಶ ನಕ್ಸಲಿಸಂನಿಂದ ಮುಕ್ತವಾಗಿದ್ದು, ದೇಶವಾಸಿಗಳು ನಕ್ಸಲಿಸಂನ ಭಯದಿಂದ ಹೊರಬಂದಿರುವ ಮೊದಲ ದೀಪಾವಳಿ ಇದು. ಇದೊಂದು ಅಸಾಧಾರಣ ಸಾಧನೆ. ಇದರ ಬಹುಪಾಲು ಶ್ರೇಯಸ್ಸು ನಿಮಗೆ ಸಲ್ಲುತ್ತದೆ. ನಿಮ್ಮಂತಹ ಲಕ್ಷಾಂತರ ಧೈರ್ಯಶಾಲಿ ಪುರುಷರು ಮತ್ತು ಮಹಿಳೆಯರಿಗೆ, ಅಂದರೆ ನಮ್ಮ ಸೈನಿಕರು ಮತ್ತು ಭದ್ರತಾ ಸಿಬ್ಬಂದಿಗೆ ಈ ಶ್ರೇಯಸ್ಸು ಸಲ್ಲಬೇಕು. ಅದಕ್ಕಾಗಿಯೇ ನಾನು ನಿಮ್ಮೊಂದಿಗೆ ದೀಪಾವಳಿ ಆಚರಿಸಲು ಇಲ್ಲಿಗೆ ಬಂದಿದ್ದೇನೆ ಎಂದರು.

ನಕ್ಸಲಿಸಂ ವಿರುದ್ಧ ಹೋರಾಡಲು ಹಿಂದಿನ ಸರ್ಕಾರ ಏನನ್ನೂ ಮಾಡಲಿಲ್ಲ ಎಂದು ಟೀಕಿಸಿದ ಪ್ರಧಾನಿ ಮೋದಿ, ನಕ್ಸಲಿಸಂ ವಿರುದ್ಧದ ಹೋರಾಟ ಸುಲಭವಾಗಿರಲಿಲ್ಲ. 2004 ಮತ್ತು 2013ರ ನಡುವೆ, ಹತರಾದ ನಕ್ಸಲೈಟ್‌ಗಳ ಸಂಖ್ಯೆಗಿಂತ ಹುತಾತ್ಮರಾದ ಸೈನಿಕರ ಸಂಖ್ಯೆಯೇ ಹೆಚ್ಚಿತ್ತು. ವರ್ಷಕ್ಕೆ ಸುಮಾರು 2,000 ನಕ್ಸಲ್ ದಾಳಿಗಳು ವರದಿಯಾಗುತ್ತಿದ್ದವು. 2010ರಲ್ಲಿ ದಂತೇವಾಡದಲ್ಲಿ ನಕ್ಸಲರೊಂದಿಗಿನ ಸಂಘರ್ಷದ ವೇಳೆ, ಸಿಆರ್‌ಪಿಎಫ್‌ನ (76 ಯೋಧರು ಮತ್ತು 44 ನಾಗರಿಕರು ಸಾವನ್ನಪ್ಪಿದ್ದರು. ಇಂತಹ ದಾಳಿಗಳು ಪ್ರತಿ ವರ್ಷವೂ ಮುಂದುವರಿದರೂ ಅಂದಿನ ನಮ್ಮ ನಾಯಕರು ಕನಿಷ್ಠ ಕಣ್ಣೀರನ್ನೂ ಸುರಿಸಲಿಲ್ಲ. ಅಂದಿನ ಸರ್ಕಾರಗಳು ನಕ್ಸಲಿಸಂ ಗುಣಪಡಿಸಲಾಗದ ಕಾಯಿಲೆ ಎಂದು ಪರಿಗಣಿಸಿ, ಅದನ್ನು ನಿರ್ಲಕ್ಷಿಸಿದ್ದವು ಎಂದು ಟೀಕಿಸಿದರು. ನಿಮ್ಮ ತ್ಯಾಗ, ಸಮರ್ಪಣೆ ಮತ್ತು ಸೇವಾ ಮನೋಭಾವಕ್ಕೆ ಕೃತಜ್ಞತೆ ಸಲ್ಲಿಸಲು, 140 ಕೋಟಿ ದೇಶವಾಸಿಗಳ ಪರವಾಗಿ ನಾನು ಇಂದು ಇಲ್ಲಿಗೆ ಬಂದಿದ್ದೇನೆ. ಒಂದು ರಾಷ್ಟ್ರದ ಆಂತರಿಕ ಭದ್ರತೆ ಬಲವಾಗಿದ್ದಾಗ ಬಾಹ್ಯ ಶತ್ರುಗಳು ಯಶಸ್ವಿಯಾಗಲು ಸಾಧ್ಯವಿಲ್ಲ. ಆದರೆ ಆಂತರಿಕ ಭದ್ರತೆ ದುರ್ಬಲಗೊಂಡಾಗ, ಬಾಹ್ಯ ಶತ್ರುಗಳು ತಲೆ ಎತ್ತಲು ಪ್ರಾರಂಭಿಸುತ್ತಾರೆ ಎಂದು ಹೇಳಿದರು.



ಯೋಧರೇ ನನ್ನ ಕುಟುಂಬ

ಮೋದಿ ''ದೇಶದ ಪ್ರತಿಯೊಬ್ಬ ಯೋಧನೂ ನನ್ನ ಕುಟುಂಬದ ಸದಸ್ಯ. ನೀವು ನಿಮ್ಮ ಕುಟುಂಬದಿಂದ ದೂರವಿದ್ದು ದೇಶದ ರಕ್ಷಣೆಗಾಗಿ ಕರ್ತವ್ಯ ನಿರ್ವಹಿಸುತ್ತಿದ್ದೀರಿ. ನಿಮ್ಮ ತ್ಯಾಗ ಮತ್ತು ಸೇವೆಗೆ ನಾನು ತಲೆಬಾಗುತ್ತೇನೆ'' ಎಂದು ಮೋದಿ ಹೇಳಿದ್ದಾರೆ. ಯಾವುದೇ ತಾಯಿಯ ಮಡಿಲು ಖಾಲಿಯಾಗಬಾರದು, ಯಾವುದೇ ಯುವಕನ ಭವಿಷ್ಯ ಹಾಳಾಗಬಾರದು ಎಂಬುದು ಸರ್ಕಾರದ ಗುರಿ ಎಂದು ಅವರು ತಿಳಿಸಿದ್ದಾರೆ. ನಕ್ಸಲಿಸಂ ವಿರುದ್ಧದ ಹೋರಾಟದಲ್ಲಿ ಭದ್ರತಾ ಪಡೆಗಳ ಪಾತ್ರವನ್ನು ಸ್ಮರಿಸಿ, ಶಾಂತಿ ಮತ್ತು ಅಭಿವೃದ್ಧಿಯ ಹಾದಿಯಲ್ಲಿ ಬಸ್ತರ್ ಮುನ್ನಡೆಯಬೇಕು ಎಂದು ಆಶಯ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮೋದಿ 2014ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಪ್ರತಿ ವರ್ಷ ದೀಪಾವಳಿಯನ್ನು ಸೈನಿಕರು ಮತ್ತು ಭದ್ರತಾ ಪಡೆಗಳ ಸಿಬ್ಬಂದಿಯೊಂದಿಗೆ ಆಚರಿಸುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. 2025ರಲ್ಲಿ ಗೋವಾ ಮತ್ತು ಕಾರವಾರದ ಸಮುದ್ರ ಪ್ರದೇಶದಲ್ಲಿ ಐಎನ್‌ಎಸ್ ವಿಕ್ರಾಂತ್‌ನಲ್ಲಿ ನೌಕಾಪಡೆ ಸಿಬ್ಬಂದಿಯೊಂದಿಗೆ ಹಬ್ಬ ಆಚರಿಸಿದ್ದರು. ಈ ಬಾರಿ ನಕ್ಸಲ್ ಹೋರಾಟದ ಪ್ರಮುಖ ಕೇಂದ್ರವಾಗಿದ್ದ ಬಸ್ತರ್ ಆಯ್ಕೆ ಮಾಡಿಕೊಂಡಿರುವುದು ವಿಶೇಷವಾಗಿದೆ.

ಬೆಲೆ ಏರಿಕೆಯ ನಡುವೆ ಬೆಳಕಿನ ಹಬ್ಬಕ್ಕೆ ಖರೀದಿ ಭರಾಟೆ: ಬರಗಾಲದಿಂದ ಹೂವು, ಹಣ್ಣುಗಳ ಪೂರೈಕೆಗೆ ಹೊಡೆತ

• ಉದಯವಾಹಿನಿ, ಬೆಂಗಳೂರು

ಮಾರುಕಟ್ಟೆಗಳಲ್ಲಿ ದೀಪಾವಳಿ ಹಬ್ಬದ ಸಂಭ್ರಮ ಮನೆಮಾಡಿದೆ. ಹಬ್ಬಕ್ಕಾಗಿ ಹೂವು, ಹಣ್ಣು ಮತ್ತು ಇತರ ವಸ್ತುಗಳನ್ನು ಖರೀದಿಸಲು ನಗರದ ಕೆ.ಆರ್. ಮಾರ್ಕೆಟ್‌ಗೆ ಇಂದು ಮುಂಜಾನೆ 3 ಗಂಟೆಯಿಂದಲೇ ಸಾವಿರಾರು ಜನರು ಲಗ್ಗೆ ಇಟ್ಟಿದ್ದರು. ಕೃಷಿ ಉತ್ಪನ್ನಗಳ ಪೂರೈಕೆಯಲ್ಲಿನ ಕೊರತೆ ಮತ್ತು ಹೆಚ್ಚಿದ ಬೇಡಿಕೆಯಿಂದಾಗಿ ಬೆಲೆಗಳು ಗಗನಕ್ಕೇರಿದ್ದರೂ ಅನಿವಾರ್ಯವಾಗಿ ಹಬ್ಬಕ್ಕಾಗಿ ಜನರು ಖರೀದಿಯಲ್ಲಿ ನಿರತರಾಗಿದ್ದರು. ಕೆ.ಆರ್.ಮಾರ್ಕೆಟ್ ಮತ್ತು ಅವೆನ್ಯೂ ರಸ್ತೆ ಸುತ್ತಮುತ್ತ ಜನದಟ್ಟಣೆ ಎದ್ದು ಕಾಣುತ್ತಿತ್ತು. ನಗರದ ವಿವಿಧ ಭಾಗಗಳಿಂದ ಬಂದ ಜನರು ಹೂವುಗಳು, ಬಾಳೆ ಕಂದುಗಳು, ತೋರಣ ಕಟ್ಟಲು ಮಾವಿನ ಎಲೆಗಳು, ಹಣ್ಣುಗಳು, ತರಕಾರಿಗಳು, ದೀಪಗಳು ಮತ್ತು ಪೂಜಾ ಸಾಮಗ್ರಿ ಖರೀದಿಸಿದರು. ಮುಂಜಾನೆಯೇ ಜನಸಂದಣಿ ಹೆಚ್ಚಾಗಿದ್ದರಿಂದ, ಪಾದಚಾರಿಗಳ ಓಡಾಟ ಮತ್ತು ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು. ಬೆಳಕಿನ ಹಬ್ಬವಾದ ದೀಪಾವಳಿಯನ್ನು ಕತ್ತಲೆಯ ವಿರುದ್ಧ ಬೆಳಕಿನ ವಿಜಯದ ಮತ್ತು ಹೊಸ ಆರಂಭದ ಸಂಕೇತವಾಗಿ ಆಚರಿಸಲಾಗುತ್ತದೆ. ಜನರು ದೀಪಗಳನ್ನು ಬೆಳಗಿಸಿ, ಲಕ್ಷ್ಮೀ ದೇವಿಗೆ ಪ್ರಾರ್ಥನೆ ಸಲ್ಲಿಸಿ ಮತ್ತು ತಮ್ಮ ಮನೆಗಳನ್ನು ಅಲಂಕರಿಸುವ





ಮೂಲಕ ಈ ಹಬ್ಬವನ್ನು ಸಂಭ್ರಮಿಸುತ್ತಾರೆ. ರಾಜ್ಯದ ಹಲವೆಡೆ ಅನಿಶ್ಚಿತ ಮಳೆ ಮತ್ತು ಬರಗಾಲದ ಪರಿಸ್ಥಿತಿಯಿಂದಾಗಿ ಈ ವರ್ಷ ಹೂವು, ಹಣ್ಣು ಮತ್ತು ತರಕಾರಿಗಳ ಪೂರೈಕೆ ಕಡಿಮೆಯಾಗಿದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ. ಹಬ್ಬದ ಹಿನ್ನೆಲೆಯಲ್ಲಿ ಬೇಡಿಕೆ ಹೆಚ್ಚಾಗಿರುವುದರಿಂದ ಬೆಲೆಗಳು ಏರಿಕೆಯಾಗಿದ್ದು, ಇದು ಸಾಮಾನ್ಯ ಜನರ ಮೇಲೆ ಆರ್ಥಿಕ ಹೊರೆ ಹೆಚ್ಚಿಸಿದೆ. ಸೇವಂತಿಗೆ ಹೂ ಪ್ರತಿ ಕೆಜಿಗೆ 250ರಿಂದ 300 ರೂ., ಗುಲಾಬಿ ಸುಮಾರು 300 ರೂ., ಮಲ್ಲಿಗೆ 1,500 ರಿಂದ 1,700 ರೂ ಮತ್ತು ಕನಕಾಂಬರ ಹೂವು ಪ್ರತಿ ಕೆ.ಜಿಗೆ ಸುಮಾರು 2,000 ರೂ.ಗೆ ಮಾರಾಟವಾಗುತ್ತಿದೆ. ಹಬ್ಬದ ಅಲಂಕಾರ ಮತ್ತು ಧಾರ್ಮಿಕ ವಿಧಿವಿಧಾನಗಳಿಗೆ ಬಳಸುವ ಬಾಳೆ ಕಂದುಗಳು ಒಂದು ಜೊತೆಗೆ 100ರಿಂದ 150 ರೂ.ಗಳಂತೆ ಮಾರಾಟವಾಗುತ್ತಿವೆ. ಸಾಮಾನ್ಯ ದಿನಗಳಿಗೆ ಹೋಲಿಸಿದರೆ ಹೂವುಗಳ ಬೆಲೆ ಪ್ರತಿ ಕೆ.ಜಿಗೆ 100ರಿಂದ 200 ರೂ.ಗಳಷ್ಟು ಹೆಚ್ಚಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಪಟಾಕಿಗಳ ಬೆಲೆಯೂ ಸುಮಾರು ಶೇ.15ರಷ್ಟು ಏರಿಕೆಯಾಗಿದ್ದು, ಪ್ರತಿ ಬಾಕ್ಸ್‌ಗೆ 1,000 ರೂ.ಗಳಿಂದ 15,000 ರೂ.ಗಳವರೆಗೆ ಇದೆ ಎಂದು ವರದಿಯಾಗಿದೆ. ಬೆಲೆ ಏರಿಕೆಯ ಹೊರತಾಗಿಯೂ, ಹಬ್ಬಕ್ಕೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸಲೇಬೇಕಾಗಿದೆ.

ಸಂಚಾರ ನಿರ್ಬಂಧ

ಹೆಚ್ಚಿನ ಜನದಟ್ಟಣೆಯಿಂದಾಗಿ ಕೆ.ಆರ್. ಮಾರುಕಟ್ಟೆಯ ಸುತ್ತಲೂ ಸಂಚಾರ ದಟ್ಟಣೆ ಉಂಟಾಗಿದ್ದು, ಮೆಜೆಸ್ಟಿಕ್ ಮತ್ತು ಟೌನ್ ಹಾಲ್‌ನತ್ತ ವಿಸ್ತರಿಸಿತ್ತು. ಹಬ್ಬದ ಖುತುಗಳಲ್ಲಿ ಕೆ.ಆರ್.ಮಾರುಕಟ್ಟೆ ಫ್ಲೈಓವರ್‌ನಲ್ಲಿ ವಾಹನಗಳನ್ನು ನಿಲ್ಲುವುದರಿಂದ ಉಂಟಾಗುವ ಅಪಘಾತಗಳನ್ನು ತಡೆಗಟ್ಟಲು, ಸಂಚಾರ ಪೊಲೀಸರು ಕೆಲ ನಿರ್ಬಂಧಗಳನ್ನು ವಿಧಿಸಿದ್ದರು. ದಟ್ಟಣೆ ತಡೆಯಲು ಮತ್ತು ಸುರಕ್ಷತೆಗಾಗಿ ಮೈಸೂರು ರಸ್ತೆಯನ್ನು ಮೆಜೆಸ್ಟಿಕ್‌ಗೆ ಸಂಪರ್ಕಿಸುವ ಫ್ಲೈಓವರ್ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ಭಾರತೀಯರಿಗೆ ದೀಪಾವಳಿ ಶುಭಾಶಯ ತಿಳಿಸಿದ ಇರಾನ್ ಸರ್ವೋಚ್ಚ ನಾಯಕ ಖಮೇನಿ ಪ್ರತಿನಿಧಿ

• ಉದಯವಾಹಿನಿ, ಟೆಹ್ರಾನ್

ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಮೊಜ್ತಬಾ ಖಮೇನಿ ಅವರ ಭಾರತದ ಪ್ರತಿನಿಧಿಯಾದ ಡಾ. ಅಬ್ದುಲ್ ಮಜೀದ್ ಹಕೀಮ್ ಇಲಾಹಿ, ಭಾರತದ ಜನರಿಗೆ ದೀಪಾವಳಿಯ ಹೃತ್ಪೂರ್ವಕ ಶುಭಾಶಯಗಳನ್ನು ತಿಳಿಸಿದ್ದಾರೆ.

ಆಗ್ರಾದಲ್ಲಿರುವ 'ಶಹೀದ್-ಎ-ಸಾಲಿಸ್' ಅವರ ಪುಣ್ಯಕ್ಷೇತ್ರಕ್ಕೆ ನಾಲ್ಕು ದಿನಗಳ ಭೇಟಿ ನೀಡಿದ್ದ ಸಂದರ್ಭದಲ್ಲಿ, ಡಾ. ಇಲಾಹಿ ಅವರು ಈ ಹಬ್ಬದ ಶುಭಾಶಯಗಳನ್ನು ವ್ಯಕ್ತಪಡಿಸುವುದರ ಜೊತೆಗೆ, ಎಲ್ಲಾ ಭಾರತೀಯರು ಸದಾ ಸುಖವಾಗಿರಲಿ ಎಂದು ಪ್ರಾರ್ಥಿಸಿದ್ದಾರೆ.

ದೀಪಾವಳಿಯು ಸಂತೋಷ ಮತ್ತು ಬೆಳಕಿನ ಹಬ್ಬವಾಗಿದೆ ಎಂದು ಬಣ್ಣಿಸಿದ ಅವರು, ಪ್ರತಿಯೊಬ್ಬ ಭಾರತೀಯರು ಸಮೃದ್ಧಿಯಿಂದಿರಲಿ. ಭಾರತ ಮತ್ತು ಇರಾನ್ ಎರಡೂ ರಾಷ್ಟ್ರಗಳು ನಿರಂತರವಾಗಿ ಅಭಿವೃದ್ಧಿ ಹೊಂದಲಿ ಎಂದು ಆಶಿಸಿದ್ದಾರೆ. ಆಗ್ರಾದಲ್ಲಿ ಶಹೀದ್-ಎ-ಸಾಲಿಸ್' ಅವರ ಸಮಾಧಿ ಸ್ಥಳವಿದೆ. ಇವರು ಮೊಘಲ್ ಕಾಲದಲ್ಲಿ ಹುತಾತ್ಮರಾಗಿದ್ದರು. ಸಾವಿರಾರು ಜನರು ಈ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಇಲ್ಲಿ ನಾಲ್ಕು ದಿನಗಳ 'ಮಜ್ಲಿಸ್' ಕಾರ್ಯಕ್ರಮವನ್ನೂ ಆಯೋಜಿಸಲಾಗುತ್ತದೆ.

ಶಹೀದ್-ಎ-ಸಾಲಿಸ್ ದರ್ಗಾದಲ್ಲಿ ಆಯೋಜಿಸಲಾಗಿದ್ದ ಆಗ್ರಾ ಮಜ್ಲಿಸ್‌ನ ಸಂಯೋಜಕ ಮಿರ್ಜಾ ಶಫೀಕ್ ಹಸನ್ ಶಫಾಕ್ ಅವರು, ವಿದೇಶದಿಂದ ಬಂದ ಅತಿಥಿಯೊಬ್ಬರು ಭಾರತದ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿರುವುದು ತಮಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ ಎಂದು ಮಾತನಾಡಿದ್ದಾರೆ.

ಈ ದಿನದ ದರ | ಪೆಟ್ರೋಲ್: 111.68 ₹/L | ಡೀಸೆಲ್ : 99.56₹/L | ಬಂಗಾರ: ₹14,357 /Gram24ct ₹13,160/Gram22ct | ಬೆಳ್ಳಿ: ₹205.00/Gram

ಎಥೆನಾಲ್ ವಿಷಯದಲ್ಲಿ ಕೇಂದ್ರ ಸರ್ಕಾರ ಜನರನ್ನು ದಾರಿತಪ್ಪಿಸುತ್ತಿದೆ

• ಉದಯವಾಹಿನಿ, ಬೆಂಗಳೂರು

ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುವ ವಿಷಯದಲ್ಲಿ ಕೇಂದ್ರ ಸರ್ಕಾರ ಜನರನ್ನು ದಾರಿ ತಪ್ಪಿಸುತ್ತಿದೆ ಎಂದು ಐಟಿ-ಬಿಟಿ ಮತ್ತು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು. ಸಾರ್ವಜನಿಕ ಹಿತಾಸಕ್ತಿಗಿಂತ ಹೆಚ್ಚಾಗಿ, ಕೇಂದ್ರ ಸಚಿವರಿಗೆ ಸಂಬಂಧಿಸಿದ ಕಂಪನಿಗಳಿಗೆ ಲಾಭ ಮಾಡಿಕೊಡುವ ಉದ್ದೇಶದಿಂದಲೇ ಈ ನೀತಿಯನ್ನು ಜಾರಿಗೆ ತರಲಾಗುತ್ತಿದೆ ಎಂದು ಅವರು ದೂರಿದರು. ಸಿದ್ಧಾರ್ಥ ವಿಹಾರ ಟ್ರಸ್ಟ್' ವಿರುದ್ಧ ಮಾಡಲಾದ ಆರೋಪಗಳಿಗೆ ಸಾಕ್ಷ್ಯ ಒದಗಿಸುವಂತೆ ಬಿಜೆಪಿ ಮತ್ತು ಜೆಡಿ(ಎಸ್) ಪಕ್ಷಗಳಿಗೆ ಇದೇ ವೇಳೆ ಸವಾಲು ಹಾಕಿದ ಅವರು, ತಮ್ಮ ಕುಟುಂಬದ ಆರ್ಥಿಕ ದಾಖಲೆಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲು ತಾನು ಸಿದ್ಧ ಎಂದು ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, 'ನ್ಯಾಷನಲ್ ಅಕ್ರೆಡಿಟೇಶನ್ ಬೋರ್ಡ್ ಫಾರ್ ಟೆಸ್ಟಿಂಗ್ ಅಂಡ್ ಕ್ಯಾಲಿಬ್ರೇಷನ್ ಲ್ಯಾಬೊರೇಟರೀಸ್' ಮಾನ್ಯತೆ ಪಡೆದ ಪ್ರಯೋಗಾಲಯಗಳ ವರದಿಗಳ ಪ್ರಕಾರ, ಕೆಲವು ಮಾದರಿಗಳಲ್ಲಿ 35 ರಿಂದ 40 ಪ್ರತಿಶತದಷ್ಟು ಎಥೆನಾಲ್ ಅಂಶ ಪತ್ತೆಯಾಗಿದೆ. ಇದು ಕೇಂದ್ರ ಸರ್ಕಾರ ನಿಗದಿಪಡಿಸಿದ ಮಿತಿಗಿಂತ ಹೆಚ್ಚಾಗಿದೆ ಎಂದು ಅವರು ಹೇಳಿದರು.

ಭಾರತ ಸರ್ಕಾರ ಜನರಿಗೆ ಹಸಿ ಸುಳ್ಳುಗಳನ್ನು ಹೇಳುತ್ತಿದೆ. ನೀವು 130 ಕೋಟಿ ಜನರ ಮೇಲೆ ಪ್ರಯೋಗ ನಡೆಸುತ್ತಿದ್ದೀರಿ. ಇದು ಹೇಗೆ ಸಾಧ್ಯ ಎಂದು ಅವರು ಪ್ರಶ್ನಿಸಿದರು.

ಸುಪ್ರೀಂ ನಲ್ಲಿ ಕೇಂದ್ರ ಸರ್ಕಾರ ಸಲ್ಲಿಸಿದ ವಿವರಣೆಗಳನ್ನು ಉಲ್ಲೇಖಿಸಿದ ಅವರು, ಸಾಲಿಸಿಟರ್ ಜನರಲ್ ಅವರು ಎಥೆನಾಲ್ ಮಿಶ್ರಣವನ್ನು ಒಂದು 'ಪ್ರಯೋಗ' ಎಂದು ಬಣ್ಣಿಸಿದ್ದರು ಮತ್ತು ಇದನ್ನು ದೇಶಾದ್ಯಂತ ಜಾರಿಗೊಳಿಸುವ ಉದ್ದೇಶವಿಲ್ಲ ಎಂದು ಸೂಚಿಸಿದ್ದರು .

ಕಣ್ಣಿಗೆ ಗಾಯವಾದರೆ ಏನು ಮಾಡಬೇಕು..? ಕಣ್ಣಿನ ತಜ್ಞರು

• ಉದಯವಾಹಿನಿ, ಬೆಂಗಳೂರು

ದೀಪಾವಳಿ ಹಬ್ಬದ ಸಂಭ್ರಮಕ್ಕೆ ಸಿದ್ಧತೆ ನಡೆಯುತ್ತಿರುವ ಬೆನ್ನಲ್ಲೇ ಪಟಾಕಿ ಸಿಡಿಸುವಾಗ ಎಚ್ಚರಿಕೆವಹಿಸುವಂತೆ ಆಸ್ಪತ್ರೆಗಳು ಮತ್ತು ಕಣ್ಣಿನ ತಜ್ಞರು ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ.

ಪಟಾಕಿ ಅವಘಡಗಳಿಂದ ಕಣ್ಣಿಗೆ ಗಂಭೀರ ಗಾಯಗಳಾಗುವ ಸಾಧ್ಯತೆಯಿದ್ದು, ಕೆಲವೊಮ್ಮೆ ಶಾಶ್ವತವಾಗಿ ದೃಷ್ಟಿಯನ್ನೇ ಕಳೆದುಕೊಳ್ಳುವ ಅಪಾಯವಿದೆ ಎಂದು ಎಚ್ಚರಿಸಿದ್ದಾರೆ. ಮಕ್ಕಳು, ವೃದ್ಧರು ಮತ್ತು ಪ್ರಾಣಿಗಳ ಸುರಕ್ಷತೆಯ ಬಗ್ಗೆಯೂ ವಿಶೇಷ ಕಾಳಜಿ ವಹಿಸುವಂತೆ ಸೂಚಿಸಿದ್ದಾರೆ.ಪಟಾಕಿಗಳನ್ನು ಜನವಸತಿ ಪ್ರದೇಶಗಳಿಂದ ದೂರವಿರುವ ತೆರೆದ ಜಾಗಗಳಲ್ಲಿ ಮಾತ್ರ ಸಿಡಿಸಬೇಕು. ಸುರಕ್ಷಿತ ಅಂತರ ಕಾಯ್ದುಕೊಳ್ಳುವುದರ ಜತೆಗೆ ರಕ್ಷಣಾತ್ಮಕ ಕನ್ನಡಕ ಧರಿಸುವುದು ಅಗತ್ಯ. ಮಕ್ಕಳು ದೊಡ್ಡವರ ಮೇಲ್ವಿಚಾರಣೆಯಲ್ಲೇ ಪಟಾಕಿ ಸಿಡಿಸಬೇಕು. ಉದ್ದನೆಯ ಊದುಬತ್ತಿ ಬಳಸಿ ಪಟಾಕಿ ಹಚ್ಚುವುದು, ಹಚ್ಚಿದ ತಕ್ಷಣ ದೂರ ಸರಿಯುವುದು ಹಾಗೂ ಸಿಡಿಯದೆ ಉಳಿದ ಪಟಾಕಿಯನ್ನು ಮತ್ತೆ ಹಚ್ಚಲು ಪ್ರಯತ್ನಿಸದಿರುವುದು ಸೇರಿದಂತೆ ಹಲವು ಮುನ್ನೆಚ್ಚರಿಕೆಗಳನ್ನು ಪಾಲಿಸಬೇಕು ಎಂದು ವೈದ್ಯರು ಸಲಹೆ ನೀಡಿದ್ದಾರೆ. ನೇತ್ರ ಕಣ್ಣಿನ ಆಸ್ಪತ್ರೆಯ ಡಾ. ಶ್ರೀಭಾರ್ಗವ ನಟೇಶ್ ಮಾತನಾಡಿ, ಪಟಾಕಿಯಿಂದ ಉಂಟಾಗುವ ಕಣ್ಣಿನ ಗಾಯಗಳು ಕೆಲವೊಮ್ಮೆ ಶಾಶ್ವತ ದೃಷ್ಟಿಹೀನತೆಗೆ ಕಾರಣವಾಗಬಹುದು ಎಂದು ಎಚ್ಚರಿಸಿದ್ದಾರೆ. ಮಕ್ಕಳು ಪಟಾಕಿ ಸಿಡಿಸುವಾಗ ರಕ್ಷಣಾತ್ಮಕ ಕನ್ನಡಕ ಧರಿಸುವಂತೆ ಮತ್ತು ಸುರಕ್ಷಿತ ಅಂತರ ಕಾಯ್ದುಕೊಳ್ಳುವಂತೆ ಪೋಷಕರು ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದ್ದಾರೆ. ಕಣ್ಣಿಗೆ ಆಗುವ ಗಾಯಗಳು ಮೇಲ್ನೋಟಕ್ಕೆ ಸಣ್ಣದಾಗಿ ಕಂಡರೂ, ಕಣ್ಣಿನ ಒಳಭಾಗದ ಸೂಕ್ಷ್ಮ ಅಂಗಾಂಶಗಳಿಗೂ ಹಾನಿ ಉಂಟುಮಾಡಬಹುದು ಎಂದು ಡಾ. ಅಗರ್ವಾಲ್ ಕಣ್ಣಿನ ಆಸ್ಪತ್ರೆಯ ವೈದ್ಯಕೀಯ ಸೇವೆಗಳ ವಿಭಾಗದ ಮುಖ್ಯಸ್ಥ ಡಾ. ಅಮೋದ್ ನಾಯಕ್ ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

ಮೃತರ ಆಭರಣಗಳನ್ನೇ ಬಳಸಿ ಶವಗಳನ್ನು ಸಾಗಿಸಿ ವಿಲೇವಾರಿ ಮಾಡಿದ ಆರೋಪಿ !



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕಾರು ಚಾಲಕ ಇಂದುಶೇಖರ್ ಎಂಬಾತ ಒಂದೇ ಕುಟುಂಬದ ಏಳು ಮಂದಿಯನ್ನು ಹತ್ಯೆಗೈದ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಮತ್ತಷ್ಟು ಮಹತ್ವದ ಸಂಗತಿಗಳು ತಿಳಿದುಬಂದಿವೆ. ಪತ್ನಿ ಹಾಗೂ ಅತ್ತೆಯ ಮೃತದೇಹಗಳ ಮೇಲಿದ್ದ ಚಿನ್ನಾಭರಣಗಳನ್ನು ಅಡವಿಟ್ಟು, ಕೆಲವು ಆಭರಣಗಳನ್ನು ಮಾರಾಟ ಮಾಡಿ ಮೃತದೇಹಗಳನ್ನು ಸಾಗಿಸಲು ಮತ್ತು ವಿಲೇವಾರಿ ಮಾಡಲು ಹಣ ಇಂದುಶೇಖರ್ ಹಣ ಹೊಂದಿಸಿದ್ದ ಎಂಬುದು ತನಿಖೆಯಿಂದ ತಿಳಿದುಬಂದಿದೆ.

ಪೊಲೀಸ್ ಮೂಲಗಳ ಪ್ರಕಾರ, ಆರೋಪಿಯು ಮೃತದೇಹಗಳ ಮೇಲಿದ್ದ ರಕ್ತಸಿಕ್ತ ಆಭರಣಗಳನ್ನು ತೆಗೆದು, ಅವುಗಳನ್ನು ತೊಳೆದಿದ್ದಾನೆ. ಬಳಿಕ ಕೆಲವು ಆಭರಣಗಳನ್ನು ಆಭರಣ ಮಳಿಗೆಗಳಲ್ಲಿ ಅಡವಿಟ್ಟಿದ್ದಾನೆ. ಈ ಮೂಲಕ ಬಂದ ಹಣವನ್ನು ಕೃತ್ಯಕ್ಕೆ ಸಂಬಂಧಿಸಿದ ಖರ್ಚುಗಳಿಗೆ ಬಳಸಿದ್ದಾನೆ ಎನ್ನಲಾಗಿದೆ. ಇನ್ನು ಕೆಲವು ಆಭರಣಗಳನ್ನು ಮಾರಾಟ ಮಾಡಿ, ಮೃತದೇಹಗಳನ್ನು ಸಾಗಿಸಲು ಬಳಸಿದ ಕಾರಿಗೆ ಡೀಸೆಲ್ ಖರೀದಿಸಿದ್ದಾನೆ. ಉಳಿದ ಆಭರಣಗಳನ್ನು ತನ್ನ ಮಗಳಿಗೆ ನೀಡಿದ್ದಾನೆ ಎಂದು ತಿಳಿದುಬಂದಿದೆ. ಮೃತದೇಹಗಳನ್ನು ವಿಲೇವಾರಿ ಮಾಡಲು ಆರೋಪಿ ಹಲವು ಪ್ರದೇಶಗಳಿಗೆ ಪ್ರಯಾಣಿಸಿದ್ದಾನೆ ಎಂಬುದೂ ತನಿಖೆಯಿಂದ ಬೆಳಕಿಗೆ ಬಂದಿದೆ. ಬೆಂಗಳೂರಿನಿಂದ ಮಂಗಳೂರಿಗೆ ಕಾರಿನಲ್ಲಿ ತೆರಳಿ ವಾಪಸಾಗಿದ್ದಾನೆ. ಬಳಿಕ ಚೆನ್ನೈಗೆ ಪ್ರಯಾಣಿಸಿ, ನಂತರ ನಂದಿ ಬೆಟ್ಟಕ್ಕೆ ತೆರಳಿದ್ದಾನೆ ಎನ್ನಲಾಗಿದೆ. ಅಕ್ಟೋಬರ್ 16ರಿಂದ ನವೆಂಬರ್ 3ರ ನಡುವೆ ತನ್ನ ಮನೆಯಲ್ಲೇ ಕುಟುಂಬದ ಏಳು ಮಂದಿಯನ್ನು ಪ್ರತ್ಯೇಕ ದಿನಗಳಲ್ಲಿ ಗ್ರೈಂಡಿಂಗ್ ಸ್ಟೋನ್‌ನಿಂದ ತಲೆಗೆ ಹೊಡೆದು ಹತ್ಯೆಗೈದಿದ್ದಾನೆ.

ಕಾರಿಗೆ 'Press' ಸ್ಟಿಕ್ಕರ್, ಪತ್ರಿಕೆ ಬ್ಯಾನರ್ ಬಳಸಿದ್ದ ಆರೋಪಿ ಇಂದುಶೇಖರ್!

• ಉದಯವಾಹಿನಿ, ಬೆಂಗಳೂರು

15 ದಿನಗಳ ಅವಧಿಯಲ್ಲಿ ಒಂದೇ ಕುಟುಂಬದ ಏಳು ಮಂದಿಯನ್ನು ಹತ್ಯೆಗೈದ ಆರೋಪ ಎದುರಿಸುತ್ತಿರುವ ಬೆಂಗಳೂರಿನ ರಾಜಾಜಿನಗರದ ಎಸ್. ಇಂದುಶೇಖರ್ ಬಳಸಿದ್ದಾನೆ ಎನ್ನಲಾದ ಕಾರಿನ ಮೇಲೆ ದೊಡ್ಡದಾಗಿ 'ಪ್ರೆಸ್' ಸ್ಟಿಕ್ಕರ್ ಅಂಟಿಸಲಾಗಿತ್ತು. ಅಷ್ಟೇ ಅಲ್ಲದೆ, ಕೃತ್ಯ ಎಸಗಿ ಮೃತದೇಹಗಳನ್ನು ಸಾಗಿಸುವಾಗ ಪೊಲೀಸರ ಕಣ್ಣಿನಿಂದ ತಪ್ಪಿಸಿಕೊಳ್ಳಲು ಕಾರಿನ ಹಿಂಭಾಗದಲ್ಲಿ, ಡಿಕ್ಕಿಯ ಮೇಲ್ಭಾಗದಲ್ಲಿ ಪತ್ರಿಕೆಯ ಬ್ಯಾನರ್‌ವೊಂದನ್ನೂ ಪ್ರದರ್ಶಿಸಲಾಗಿತ್ತು ಎಂದು ತಿಳಿದುಬಂದಿದೆ.

ಈ ಬ್ಯಾನರ್‌ನ ಮರೆಯಲ್ಲಿ ಆತ ಧೈರ್ಯವಾಗಿ ಮೃತದೇಹಗಳನ್ನು ಸಾಗಿಸುತ್ತಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮೃತದೇಹಗಳನ್ನು ಸಾಗಿಸುವಾಗ ಹಾಗೂ ವಿವಿಧ ಸ್ಥಳಗಳಲ್ಲಿ ವಿಲೇವಾರಿ ಮಾಡುವಾಗ, ವಿಶೇಷವಾಗಿ ಹೊಸೂರು ಸಮೀಪದ ಗಡಿ ದಾಟುವ ಸಂದರ್ಭದಲ್ಲಿ ಪೊಲೀಸರ ತಪಾಸಣೆಯಿಂದ ತಪ್ಪಿಸಿಕೊಳ್ಳಲು ಈ ತಂತ್ರ ಆತನಿಗೆ ಸಹಕಾರಿಯಾಗಿತ್ತು ಎನ್ನಲಾಗಿದೆ.

ಪೊಲೀಸರು ಇದೀಗ ವಶಪಡಿಸಿಕೊಂಡಿರುವ ಟೊಯೊಟಾ ಎಟಿಯೋಸ್ ಕಾರನ್ನು, ಹತ್ಯೆಗಳನ್ನು ಮುಚ್ಚಿಹಾಕುವ ಪ್ರಯತ್ನದ ಭಾಗವಾಗಿ ಮೃತದೇಹಗಳನ್ನು ಸಾಗಿಸಲು ಆರೋಪಿ ಬಳಸಿದ್ದ ಎಂದು ಶಂಕಿಸಲಾಗಿದೆ.
ಕಾರಿನ ಹಿಂಭಾಗದಲ್ಲಿ ಡಿಕ್ಕಿಯ ಮೇಲ್ಭಾಗದ ಉದ್ದಕ್ಕೂ 'ತಾನಾ ವರದಿ' ಎಂಬ ಪತ್ರಿಕೆಯ ಹೆಸರಿನ ಬ್ಯಾನರ್ ಅಳವಡಿಸಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಪ್ರೆಸ್' ಗುರುತಿನ ಚೀಟಿಯ ರೀತಿಯ ಪ್ರದರ್ಶನದಿಂದ ತಾನು ಮಾಧ್ಯಮ ಸಂಸ್ಥೆಯೊಂದಕ್ಕೆ ಸೇರಿದವನು ಎಂಬ ಭಾವನೆ ಮೂಡಿಸಿ, ಮೃತದೇಹಗಳನ್ನು ವಿಲೇವಾರಿ ಮಾಡುವಾಗ ಯಾರ ಗಮನಕ್ಕೂ ಬಾರದಂತೆ ನೋಡಿಕೊಂಡಿದ್ದಾನೆ ಎಂಬುದು ಪೊಲೀಸರ ಶಂಕೆಯಾಗಿದೆ.

ಬೆಂಗಳೂರಿನ 4 ವಿಧಾನಸಭಾ ಕ್ಷೇತ್ರಗಳಲ್ಲಿ ಹೊಸ ವ್ಯವಸ್ಥೆ ಜಾರಿ..!

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಕಸ ಸಂಗ್ರಹಣೆ ವ್ಯವಸ್ಥೆಯನ್ನು ಹೆಚ್ಚು ಪಾರದರ್ಶಕ ತಂತ್ರಜ್ಞಾನ ಆಧಾರಿತವಾಗಿಸಲು ಸರ್ಕಾರ ಮುಂದಾಗಿದೆ. ನವೆಂಬರ್ ಅಂತ್ಯದ ವೇಳೆಗೆ ನಗರದ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಹೊಸ ಘನತ್ಯಾಜ್ಯ ನಿರ್ವಹಣಾ ಗುತ್ತಿಗೆ ವ್ಯವಸ್ಥೆ ಕಾರ್ಯಾರಂಭ ಮಾಡಲಿದೆ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಗೋವಿಂದರಾಜನಗರ, ಮಹಾಲಕ್ಷ್ಮಿ ಲೇಔಟ್, ವಿಜಯನಗರ ಮತ್ತು ಚಾಮರಾಜಪೇಟೆ ಕ್ಷೇತ್ರಗಳಲ್ಲಿ ಅಡಚಣೆಯಿಲ್ಲದೆ ಜಾರಿಗೆ ಬರುವಂತೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲು ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಡಿ. ವಿಕಾಸಸೌಧದಲ್ಲಿ ನಡೆದ ಸಭೆಯಲ್ಲಿ ಹೊಸ ಪ್ರಾಥಮಿಕ ಕಸ ಸಂಗ್ರಹಣೆ ಗುತ್ತಿಗೆಗಳ ಕುರಿತು ಪರಿಶೀಲನೆ ನಡೆಸಿದ ಸಚಿವರು, ಜಿಪಿಎಸ್ ಆಧಾರಿತ ವಾಹನಗಳ ನಿಗಾ ಮತ್ತು ಪಾರದರ್ಶಕ ಪಾವತಿ ವ್ಯವಸ್ಥೆ ಇರಬೇಕು ಎಂದು ಸೂಚಿಸಿದರು.

ಕೆಲವೇ ಕ್ಷಣಗಳಲ್ಲಿ ಬೆಂಗಳೂರಿಗೆ ಮರಳಿದ ಇಂಡಿಗೋ ವಿಮಾನ..!

• ಉದಯವಾಹಿನಿ, ಬೆಂಗಳೂರು

ವಿಮಾನದ ಶೌಚಾಲಯದಲ್ಲಿ ಹೈಜಾಕ್ ಬೆದರಿಕೆ ಸಂದೇಶ ಪತ್ತೆಯಾದ ಹಿನ್ನೆಲೆಯಲ್ಲಿ ಲಖನೌಗೆ ತೆರಳುತ್ತಿದ್ದ ಇಂಡಿಗೋ ವಿಮಾನವೊಂದು ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಕೆಐಎ) ತುರ್ತು ಲ್ಯಾಂಡಿಂಗ್ ಮಾಡಿರುವ ಆತಂಕಕಾರಿ ಘಟನೆ ನಡೆದಿದೆ.

ವಿಮಾನ ನಿಲ್ದಾಣದ ಟರ್ಮಿನಲ್ 1ರಿಂದ ಹೊರಟಿದ್ದ 6ಇ-451 ಸಂಖ್ಯೆಯ ವಿಮಾನದ ಶೌಚಾಲಯದಲ್ಲಿ ಕೈಬರಹದ ಬೆದರಿಕೆ ಪತ್ರವೊಂದು ಪತ್ತೆಯಾಗಿದೆ. ಇದನ್ನು ಗಮನಿಸಿದ ವಿಮಾನದ ಸಿಬ್ಬಂದಿ ತಕ್ಷಣ ಪೈಲಟ್‌ಗಳಿಗೆ ಮಾಹಿತಿ ನೀಡಿದ್ದಾರೆ. ಪತ್ರದಲ್ಲಿ ಈ ವಿಮಾನವನ್ನು ಸಂಜೆ 6.30ಕ್ಕೆ ಅಪಹರಣ ಮಾಡಲಾಗುತ್ತದೆ. ಇದನ್ನು ನಿರ್ಲಕ್ಷಿಸಿದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬರೆಯಲಾಗಿತ್ತು ಎಂದು ವರದಿಯಾಗಿದೆ. ಬೆದರಿಕೆ ಸಂದೇಶ ಪತ್ತೆಯಾದ ಬೆನ್ನಲ್ಲೇ ವಿಮಾನದಲ್ಲಿ ಪೂರ್ಣ ಪ್ರಮಾಣದ ತುರ್ತು ಪರಿಸ್ಥಿತಿ ಘೋಷಿಸಲಾಯಿತು. ಬಳಿಕ ಪೈಲಟ್‌ಗಳು ವಿಮಾನವನ್ನು ಬೆಂಗಳೂರಿನ ಮೂಲ ವಿಮಾನ ನಿಲ್ದಾಣಕ್ಕೆ ಮರಳಿಸಲು ನಿರ್ಧರಿಸಿದರು.

ಈ ನಡುವೆ ಬೆಂಗಳೂರಿನಿಂದ ಲಖನೌಗೆ ತೆರಳುತ್ತಿದ್ದ ವಿಮಾನದಲ್ಲಿ ಭದ್ರತಾ ಬೆದರಿಕೆ ವರದಿಯಾಗಿರುವುದನ್ನು ಇಂಡಿಗೋ ವಿಮಾನಯಾನ ಸಂಸ್ಥೆ ಖಚಿತಪಡಿಸಿದೆ.

ಕಾಂಗ್ರೆಸ್ ನಾಯಕರ ಪಕ್ಷಕ್ಕೆ ಬರಮಾಡಿಕೊಂಡ ಎಚ್.ಡಿ. ಕುಮಾರಸ್ವಾಮಿ..!

ಬೆಲೆ ಏರಿಕೆ, ರೈತರ ಸಂಕಷ್ಟ, ನಿರುದ್ಯೋಗ ಹಾಗೂ ಸರ್ಕಾರದ ಆರ್ಥಿಕ ನಿರ್ವಹಣೆಯಲ್ಲಿನ ಲೋಪಗಳು ಪ್ರಸ್ತಾಪಿಸಿ ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ

• ಉದಯವಾಹಿನಿ, ರಾಮನಗರ

1 20ಕ್ಕೂ ಹೆಚ್ಚು ಪ್ರಮುಖ ಕಾಂಗ್ರೆಸ್ ನಾಯಕರು

2 ಕ್ಷೇತ್ರದಲ್ಲಿ ಕುಡಿಯುವ ನೀರು, ಒಳಚರಂಡಿ

3 250 ಕೋಟಿ ರೂ.ಗೂ ಹೆಚ್ಚು ಹಣ ಖರ್ಚು

2028ರ ವಿಧಾನಸಭೆ ಚುನಾವಣೆಗೆ ಸಿದ್ಧತೆ ನಡೆಸುತ್ತಿರುವ ಜೆಡಿಎಸ್ ಪಕ್ಷವನ್ನು ಬಲಪಡಿಸಿ, ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಕಾರ್ಯಪ್ರವೃತ್ತರಾಗಿದ್ದಾರೆ.

ರಾಜ್ಯದಲ್ಲಿ ಪಕ್ಷದ ನೆಲೆಯನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯಗಳ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಇತರ ಪಕ್ಷಗಳ ನಾಯಕರನ್ನು ಜೆಡಿಎಸ್‌ಸೇರ್ಪಡೆ ಮಾಡಿಕೊಳ್ಳುವ ಮೂಲಕ ಸಂಘಟನೆ ಬಲವರ್ಧನೆಗೆ ಮುಂದಾಗಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಪ್ರತ್ಯೇಕ ಕಾರ್ಯಕ್ರಮಗಳಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಕುಮಾರಸ್ವಾಮಿ, ಕಾಂಗ್ರೆಸ್‌ಗೆ ಪರ್ಯಾಯವಾಗಿ ಜೆಡಿಎಸ್ ಅನ್ನು ಬಿಂಬಿಸಲು ಪ್ರಯತ್ನಿಸಿದರು. ನಾಗರಿಕ ಮೂಲಸೌಕರ್ಯ, ಬೆಲೆ ಏರಿಕೆ, ರೈತರ ಸಂಕಷ್ಟ, ನಿರುದ್ಯೋಗ ಹಾಗೂ ಸರ್ಕಾರದ ಆರ್ಥಿಕ ನಿರ್ವಹಣೆಯಲ್ಲಿನ ಲೋಪಗಳು ಸೇರಿದಂತೆ ಹಲವು ವಿಚಾರಗಳನ್ನು ಪ್ರಸ್ತಾಪಿಸಿ ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ನಡೆಸಿದರು. ಪಕ್ಷ ಸಂಘಟನೆಯ ಭಾಗವಾಗಿ ಕುಣಿಗಲ್ ವಿಧಾನಸಭಾ ಕ್ಷೇತ್ರದ 20ಕ್ಕೂ ಹೆಚ್ಚು ಪ್ರಮುಖ ಕಾಂಗ್ರೆಸ್ ನಾಯಕರು ಕುಮಾರಸ್ವಾಮಿ ಮತ್ತು ಮಾಜಿ ಸಚಿವ ಡಿ. ನಾಗರಾಜಯ್ಯ ಅವರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಯಾದರು.ಪುಲಕೇಶಿನಗರದಲ್ಲಿ ಮಾಜಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮದ ವೇಳೆ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಇರ್ಫಾನ್ ಜೆಡಿಎಸ್ ಸೇರಿದರು.
ಪುಲಕೇಶಿನಗರ ಕ್ಷೇತ್ರದಲ್ಲಿ ಮೂಲಸೌಕರ್ಯ ಒದಗಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದ ಕುಮಾರಸ್ವಾಮಿ ಅವರು, ಕ್ಷೇತ್ರದಲ್ಲಿ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ಕಾಂಗ್ರೆಸ್ ಸರ್ಕಾರ ನಿರ್ಲಕ್ಷ್ಯ ತೋರಿದೆ ಎಂದು ದೂರಿದರು.

ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳ ಹೆಸರಿನಲ್ಲಿ 250 ಕೋಟಿ ರೂ. ಹೆಚ್ಚು ಹಣ ಖರ್ಚು ಮಾಡಲಾಗಿದೆ ಎಂದು ಹೇಳಲಾಗುತ್ತಿದ್ದರೂ, ಹಾಲು, ಮೊಸರು ಮತ್ತು ಬಸ್ ಪ್ರಯಾಣ ದರ ಹೆಚ್ಚಳದ ಬಗ್ಗೆಯೂ ಸರ್ಕಾರವನ್ನು ಟೀಕಿಸಿದ ಅವರು, ಜನರ ಮೇಲೆ ಆರ್ಥಿಕ ಹೊರೆ ಹೊರಿಸಲಾಗುತ್ತಿದೆ ಎಂದರು.

ಪ್ರತಿ ಲೀಟರ್ ಹಾಲಿನ ಬೆಲೆಯನ್ನು 10ರಿಂದ 12 ರೂ. ಹೆಚ್ಚಿಸಲಾಗಿದೆ. ಆದರೆ, ಹೆಚ್ಚುವರಿ ಹಣ ರೈತರಿಗೆ ತಲುಪುತ್ತಿದೆಯೇ ಎಂಬುದು ಖಚಿತವಿಲ್ಲ ಎಂದು ಆರೋಪಿಸಿದರು.



ಉದಯವಾಹಿನಿ ಚಿತ್ರ

> ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರವನ್ನು ಶೇ.45ರಷ್ಟು ಹೆಚ್ಚಿಸಿರುವುದನ್ನೂ ಟೀಕಿಸಿದ ಅವರು, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಸೌಲಭ್ಯ ನೀಡುತ್ತಿದ್ದರೂ ಪ್ರಯಾಣ ದರ ಮತ್ತು ಪಾಸ್ ದರಗಳನ್ನು ಹೆಚ್ಚಿಸಿರುವುದೇಕೆ ಎಂದು ಪ್ರಶ್ನಿಸಿದರು. -ಎಚ್.ಡಿ. ಕುಮಾರಸ್ವಾಮಿ

ಹಿತಾಸಕ್ತಿಗೆ ಬದ್ಧ

ವಿವಿಧ ಸಮುದಾಯಗಳ ಜನರೊಂದಿಗೆ ಉತ್ತಮ ಸಂಬಂಧ ಹೊಂದಿರುವ ಅಖಂಡ ಶ್ರೀನಿವಾಸಮೂರ್ತಿ ಅವರ ಕಾರ್ಯವನ್ನು ಶ್ಲಾಘಿಸಿದ ಅವರು, ಬಡವರು ಮತ್ತು ಶ್ರಮಿಕ ವರ್ಗದ ಹಿತಾಸಕ್ತಿಗೆ ಬದ್ಧವಾಗಿರುವ ಸರ್ಕಾರ ರಚಿಸಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಕರೆ ನೀಡಿದರು.

ಇಂಧನ ಕುರಿತ ದೂರುಗಳ ತನಿಖೆ ನಾಳೆಯೊಳಗೆ ಪೂರ್ಣ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ಪೆಟ್ರೋಲ್‌ಗೆ ಎಥೆನಾಲ್ ಮಿಶ್ರಣದ ಪ್ರಮಾಣಕ್ಕೆ ಸಂಬಂಧಿಸಿದ ವಿವಾದ ಮುಂದುವರಿದಿರುವ ಬೆನ್ನಲ್ಲೇ, ಅನುಮತಿಸಲಾದ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ ಎಂಬ ಆರೋಪಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದನಿಗೂಡಿಸಿದ್ದಾರೆ.

ಈ ಕುರಿತು ಸಂಪೂರ್ಣ ವಿವರಗಳು ಹಾಗೂ ದಾಖಲೆಗಳೊಂದಿಗೆ ಸಚಿವರೊಬ್ಬರು ನಾಳೆ ಸುದ್ದಿಗೋಷ್ಠಿ ನಡೆಸಲಿದ್ದಾರೆ ಎಂದು ತಿಳಿಸಿದ್ದಾರೆ. ಇಂದು ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿ ಕೆ ಶಿವಕುಮಾರ್, ತಾವು ಈ ವಿಷಯವನ್ನು ರಾಜಕೀಯ ಕಾರಣಗಳಿಗೆ ಪ್ರಸ್ತಾಪಿಸುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ವಿರೋಧ ಪಕ್ಷದಲ್ಲಿರುವುದಕ್ಕೆ ಸಂಬಂಧಿಸಿದ ವಿಷಯವಲ್ಲ. ಆರ್. ಅಶೋಕ್ ಅವರಂತೆ ನಾನು ವಿರೋಧ ಪಕ್ಷದ ನಾಯಕನಾಗಿ ಮಾತನಾಡುತ್ತಿಲ್ಲ ಎಂದು ಹೇಳಿದರು. ಈ ಕುರಿತು ಸಂಬಂಧಪಟ್ಟ ಸಚಿವರಿಗೆ ಸೂಚನೆ ನೀಡಲಾಗಿದ್ದು, 67 ಸ್ಥಳಗಳಿಂದ ಇಂಧನದ ಮಾದರಿಗಳನ್ನು ಸಂಗ್ರಹಿಸಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೂ ಮಾಹಿತಿ ನೀಡಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಸಾವಿರಾರು ವಾಹನಗಳು ಸಮಸ್ಯೆ ಎದುರಿಸುತ್ತಿವೆ ಎಂಬ ದೂರುಗಳು ನಮಗೆ ಬಂದಿವೆ. ವಾಹನಗಳ ಇಂಜಿನ್‌ಗಳು ಪದೇಪದೆ ಸ್ಥಗಿತಗೊಳ್ಳುತ್ತಿವೆ. ಮೈಲೇಜ್ ಕೂಡ ಕಡಿಮೆಯಾಗುತ್ತಿದೆ ಎಂಬ ದೂರುಗಳಿವೆ ಎಂದು ಹೇಳಿದರು.

ಅಭಿವೃದ್ಧಿ ವಿಚಾರವಾಗಿ ಸಾರ್ವಜನಿಕರ ಎದುರೇ ವಾಕ್ಸಮರ..!

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಅಭಿವೃದ್ಧಿ ಕಾಮಗಾರಿಗಳ ವಿಚಾರವಾಗಿ ಬಿಜೆಪಿ ಶಾಸಕ ಹಾಗೂ ಕೆ.ಆರ್. ಪುರಂ ಕ್ಷೇತ್ರದ ಹಾಲಿ ಶಾಸಕ ಬೈರತಿ ಬಸವರಾಜ್ ಮತ್ತು ಕಾಂಗ್ರೆಸ್‌ನ ಮಾಜಿ ವಿಧಾನ ಪರಿಷತ್ ಸದಸ್ಯ ನಾರಾಯಣಸ್ವಾಮಿ ನಡುವೆ ಸಾರ್ವಜನಿಕರ ಎದುರೇ ವಾಗ್ವಾದ ನಡೆದಿದೆ.

ಫ್ಯಾಕ್ಟರಿ ಬಳಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು 'ವಾರ್ಡ್ ಒನ್ ಅಭಿಯಾನ'ದ ಎರಡನೇ ಹಂತಕ್ಕೆ ಚಾಲನೆ ನೀಡುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಸಚಿವರನ್ನು ಸ್ವಾಗತಿಸಲು ಜಮಾಯಿಸಿದ್ದ ಕಾಂಗ್ರೆಸ್ ಕಾರ್ಯಕರ್ತರು, ಕ್ಷೇತ್ರದಲ್ಲಿ ಹದಗೆಟ್ಟ ರಸ್ತೆಗಳು ಮತ್ತು ಅಭಿವೃದ್ಧಿ ಕಾಮಗಾರಿಗಳ ವಿಳಂಬ ಸೇರಿದಂತೆ ಹಲವು ನಾಗರಿಕ ಸಮಸ್ಯೆಗಳಿಗೆ ಶಾಸಕ ಬೈರತಿ ಬಸವರಾಜ್ ಅವರೇ ಕಾರಣ ಎಂದು ಆರೋಪಿಸಿದರು.

ಇದೇ ವೇಳೆ ಸ್ಥಳದಲ್ಲಿದ್ದ ಮಾಜಿ ವಿಧಾನ ಪರಿಷತ್ ಸದಸ್ಯ ನಾರಾಯಣಸ್ವಾಮಿ ಅವರು ಶಾಸಕರನ್ನು ಪ್ರಶ್ನಿಸಿ ತರಾಟೆಗೆ ತೆಗೆದುಕೊಂಡರು. ಆಕ್ರೋಶಗೊಂಡ ಬಸವರಾಜ್ ತಿರುಗೇಟು ನೀಡಿದ್ದು, ಇಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು. ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸಾಧ್ಯತೆಯನ್ನು ಅರಿತ ಸಚಿವರು ಮತ್ತು ಪೊಲೀಸರು ಮಧ್ಯಪ್ರವೇಶಿಸಿ ಇಬ್ಬರನ್ನೂ ಸಮಾಧಾನಪಡಿಸಿದರು.

ಪರಿಸ್ಥಿತಿ ತಿಳಿಯಾದ ಬಳಿಕ ಸಚಿವ ಬೈರೇಗೌಡ ಅವರು ಕೆ.ಆರ್.ಪುರಂ ಟಿನ್ ಫ್ಯಾಕ್ಟರಿ ಜಂಕ್ಷನ್‌ನ ಸಮಗ್ರ ಅಭಿವೃದ್ಧಿಗೆ ವಿಸ್ತೃತ ನೀಲನಕ್ಷೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪಾದಚಾರಿಗಳ ಸುರಕ್ಷತೆ, ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳ ನಡುವಿನ ಸುಗಮ ಸಂಪರ್ಕ ಮತ್ತು ಸಂಚಾರ ದಟ್ಟಣೆ ಕಡಿಮೆ ಮಾಡುವುದಕ್ಕೆ ಯೋಜನೆಯಲ್ಲಿ ಆದ್ಯತೆ ನೀಡುವಂತೆ ನಿರ್ದೇಶನ ನೀಡಿದರು.

ಎರಡನೇ ಹಂತಕ್ಕೆ ಚಾಲನೆ

ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಟಿನ್ ಫ್ಯಾಕ್ಟರಿ ಜಂಕ್ಷನ್ ಸಮೀಪ ವಾರ್ಡ್ ಒನ್ ಅಭಿಯಾನದ ಎರಡನೇ ಹಂತಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಈ ಸೂಚನೆ ನೀಡಿದರು.

ಮಾನನಷ್ಟ ಪ್ರಕರಣದಲ್ಲಿ ಸಿದ್ದರಾಮಯ್ಯ, ಡಿಕೆಶಿಗೆ ಗೆಲುವು

• ಉದಯವಾಹಿನಿ, ಬೆಂಗಳೂರು

2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದ 'ಭ್ರಷ್ಟಾಚಾರದ ದರಪಟ್ಟಿ' ಜಾಹೀರಾತಿಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ವಿರುದ್ಧ ದಾಖಲಾಗಿದ್ದ ಮಾನನಷ್ಟ ಮೊಕದ್ದಮೆಯ ವಿಚಾರಣಾ ಪ್ರಕ್ರಿಯೆಯನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿದೆ. ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಸಿದ್ದರಾಮಯ್ಯ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿ ಈ ಆದೇಶ ಹೊರಡಿಸಿದ್ದಾರೆ. ಆಗಿನ ಕೆಪಿಸಿಸಿ ಅಧ್ಯಕ್ಷರಾಗಿದ್ದ ಹಾಗೂ ಈಗಿನ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಮೂಲಕ ಅರ್ಜಿ ಸಲ್ಲಿಸಲಾಗಿತ್ತು. ಬೆಂಗಳೂರಿನ ವಿಶೇಷ ನ್ಯಾಯಾಲಯದಲ್ಲಿ ಇವರ ವಿರುದ್ಧ ಬಾಕಿ ಉಳಿದಿದ್ದ ವಿಚಾರಣಾ ಪ್ರಕ್ರಿಯೆಯ ಕಾನೂನುಬದ್ಧತೆಯನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿತ್ತು.

2019ರಿಂದ 2023ರವರೆಗೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿವಿಧ ಹುದ್ದೆಗಳಿಗೆ ನಿಗದಿಪಡಿಸಲಾಗಿದ್ದ ಬೆಲೆಗಳ ಕುರಿತು 2023ರ ಮೇ5ರಂದು ಪ್ರಮುಖ ಪತ್ರಿಕೆಗಳಲ್ಲಿ ಅವಹೇಳನಕಾರಿ ಜಾಹೀರಾತು ಪ್ರಕಟಿಸಲಾಗಿದೆ ಎಂದು ಆರೋಪಿಸಿ ಬಿಜೆಪಿ ರಾಜ್ಯ ಘಟಕ ದೂರು ದಾಖಲಿಸಿತ್ತು.

ಬೇಷರತ್ ಕ್ಷಮೆಯಾಚಿಸುವಂತೆ ಅರ್ಜಿದಾರರಿಗೆ ಬಿಜೆಪಿ ಕಾನೂನು ನೋಟಿಸ್ ನೀಡಿತ್ತು. ಅದಕ್ಕೆ ಅವರು ಸ್ಪಂದಿಸಿರಲಿಲ್ಲ. ಮೇ 9, 2023ರಂದು ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 200ರ ಅಡಿಯಲ್ಲಿ ಖಾಸಗಿ ದೂರು ದಾಖಲಿಸಲಾಗಿತ್ತು.ದೂರನ್ನು ಪರಿಗಣನೆಗೆ ತೆಗೆದುಕೊಂಡಿದ್ದ ವಿಶೇಷ ನ್ಯಾಯಾಲಯ ಆರೋಪಿಗಳಿಗೆ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಿತ್ತು.

ಕೋಳಿ ಸಾಕಾಣಿಕೆ ವೆಚ್ಚ ನಿಗದಿ ಆದೇಶ ಜಾರಿಗೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಸರ್ಕಾರ ನಿಗದಿಪಡಿಸಿರುವ ಪ್ರತಿ ಕೆ.ಜಿ. ಕೋಳಿ ಸಾಕಾಣಿಕೆಯ ಮಧ್ಯಂತರ ಕನಿಷ್ಠ ವೆಚ್ಚವಾದ 10 ರೂ.ಗಳನ್ನು ಕೋಳಿ ಸಾಕಾಣಿಕೆ ಸಮಗ್ರ ನಿರ್ವಹಣಾ ಕಂಪನಿಗಳು ಜಾರಿಗೆ ತರಬೇಕು ಎಂದು ಆಗ್ರಹಿಸಿ, ನವೆಂಬರ್ 25ರಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಕರ್ನಾಟಕದ ಕೋಳಿ ಸಾಕಾಣಿಕೆದಾರರು ಎಚ್ಚರಿಕೆ ನೀಡಿದ್ದಾರೆ. ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆದಾರರ ಕಲ್ಯಾಣ ಮತ್ತು ಅಭಿವೃದ್ಧಿ ಸಂಘ ಹಾಗೂ ಅಖಿಲ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆದಾರರ ಕಲ್ಯಾಣ ಮತ್ತು ಅಭಿವೃದ್ಧಿ ಸಂಘ ಜಂಟಿಯಾಗಿ ಈ ಪ್ರತಿಭಟನೆಗೆ ಕರೆ ನೀಡಿವೆ. ಸುಮಾರು 5,000 ರೈತರು ಪಾಲ್ಗೊಳ್ಳುವ ನಿರೀಕ್ಷೆಯಿದ್ದು, 'ವಿಧಾನಸೌಧ ಚಲೋ' ಹೋರಾಟ ನಡೆಸಲು ನಿರ್ಧರಿಸಲಾಗಿದೆ. ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆದಾರರ ಕಲ್ಯಾಣ ಮತ್ತು ಅಭಿವೃದ್ಧಿ ಸಂಘದ ಅಧ್ಯಕ್ಷ ಯಶವಂತ್ ಟಿ, ಸರ್ಕಾರ ಪ್ರತಿ ಕೆ.ಜಿ. ಕೋಳಿ ಸಾಕಾಣಿಕೆ ವೆಚ್ಚವನ್ನು 10 ರೂಪಾಯಿ ಎಂದು ನಿಗದಿಪಡಿಸಿ ಸುಮಾರು ಆರು ತಿಂಗಳು ಕಳೆದಿದ್ದರೂ, ಕೋಳಿ ಸಾಕಾಣಿಕೆ ಸಮಗ್ರ ನಿರ್ವಹಣಾ ಕಂಪನಿಗಳು ಈ ಆದೇಶವನ್ನು ಜಾರಿಗೆ ತಂದಿಲ್ಲ. ನ. 25ರೊಳಗೆ ಸರ್ಕಾರ ಆದೇಶದ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳದಿದ್ದರೆ, ಅಂದು ಸಂಜೆ 5 ಗಂಟೆಯಿಂದ ರಾಜ್ಯಾದ್ಯಂತ ರೈತರು ಹೊಸ ಮರಿಗಳನ್ನು ಸ್ವೀಕರಿಸುವುದನ್ನೂ, ಬೆಳೆದ ಕೋಳಿಗಳನ್ನು ಪೂರೈಸುವುದನ್ನೂ ಸ್ಥಗಿತಗೊಳಿಸಲಿದ್ದಾರೆ. ನಮ್ಮ ಬೇಡಿಕೆ ಈಡೇರುವವರೆಗೂ ಅನಿರ್ದಿಷ್ಟಾವಧಿ ಮುಷ್ಕರ ಮುಂದುವರಿಯಲಿದೆ ಎಂದು ತಿಳಿಸಿದರು.

ಸರ್ಕಾರ ಆದೇಶ ಹೊರಡಿಸಿದೆಯೇ ಹೊರತು ಅದನ್ನು ಜಾರಿಗೊಳಿಸುವಲ್ಲಿ ವಿಫಲವಾಗಿದೆ. ಕಂಪನಿಗಳು ಒಂದಲ್ಲೊಂದು ನೆಪ ಹೇಳುತ್ತಿವೆ. ಇದರಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ.



ಉದಯವಾಹಿನಿ ಚಿತ್ರ

ಕಂಪನಿಗಳು ಆದೇಶ

ಸರ್ಕಾರದಲ್ಲಿ ಅಧಿಕಾರ ಬದಲಾವಣೆಯಾಗಿರುವುದನ್ನೇ ನೆಪವಾಗಿಟ್ಟುಕೊಂಡು ಕಂಪನಿಗಳು ಆದೇಶ ಜಾರಿಗೊಳಿಸುವುದರಿಂದ ನುಣುಚಿಕೊಳ್ಳುತ್ತಿವೆ ಎಂದು ಆರೋಪಿಸಿದರು.

ಕರ್ನಾಟಕದ ಮೊದಲ 'ರೀವೈಲ್ಡಿಂಗ್ ಸೆಂಟರ್' ಯೋಜನೆಗೆ ತೀವ್ರ ಹಿನ್ನಡೆ.!

ಮಧ್ಯಪ್ರದೇಶದಲ್ಲಿ ಸ್ಥಾಪಿಸಿರುವ ಮೊದಲ ರೇವೈಲ್ಡಿಂಗ್ ಕೇಂದ್ರದ ಮಾದರಿಯನ್ನು ಕರ್ನಾಟಕದಲ್ಲೂ ಅಳವಡಿಸಿಕೊಳ್ಳಲು ಸರ್ಕಾರ ಆಸಕ್ತಿ ತೋರಿದೆ.

• ಉದಯವಾಹಿನಿ, ಬೆಂಗಳೂರು

1 ಹುಲಿ ಮರಿಗಳನ್ನು ಅಲ್ಲಿ ಇರಿಸಲಾಗುತ್ತದೆ

2 ಸೂಕ್ತ ಸ್ಥಳಗಳ ಹುಡುಕಾಟ ನಡೆಸುತ್ತಿದೆ

3 ಸೂಕ್ತ ಸ್ಥಳ ಸವಾಲಾಗಿ ಪರಿಣಮಿಸಿದೆ

ರಾಜ್ಯದ ವನ್ಯಜೀವಿ ಇತಿಹಾಸದಲ್ಲೇ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದ ಕರ್ನಾಟಕದ ಮೊದಲ 'ರೇವೈಲ್ಡಿಂಗ್ ಕೇಂದ್ರ' (ಹುಲಿ ಮರಿಗಳನ್ನು ಕಾಡಿಗೆ ಮರಳಿ ಬಿಡುವ ತರಬೇತಿ ಕೇಂದ್ರ) ಸ್ಥಾಪನೆಗೆ ತೀವ್ರ ಹಿನ್ನಡೆಯಾಗಿದೆ.

ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ಈ ಯೋಜನೆಗೆ ಸ್ಥಳೀಯ ಸಮುದಾಯಗಳು ಹಾಗೂ ಪರಿಸರ ಸಂರಕ್ಷಕರಿಂದ ಭಾರಿ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯು ಕಾಮಗಾರಿಯನ್ನು ಸದ್ಯಕ್ಕೆ ಸಂಪೂರ್ಣವಾಗಿ ಸ್ಥಗಿತಗೊಳಿಸಿದೆ.ಇದೀಗ ಅರಣ್ಯ ಇಲಾಖೆ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಕೇಂದ್ರ ಸ್ಥಾಪಿಸಲು ಸೂಕ್ತ ಸ್ಥಳಗಳ ಹುಡುಕಾಟ ನಡೆಸುತ್ತಿದೆ. ಆದರೆ, ಈ ಎರಡೂ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹುಲಿಗಳಿರುವುದರಿಂದ ಕೇಂದ್ರಕ್ಕೆ ಸೂಕ್ತ ಸ್ಥಳ ಗುರುತಿಸುವುದು ಸವಾಲಾಗಿ ಪರಿಣಮಿಸಿದೆ. ಮಧ್ಯಪ್ರದೇಶದಲ್ಲಿ ಸ್ಥಾಪಿಸಿರುವ ಮೊದಲ ರೇವೈಲ್ಡಿಂಗ್ ಕೇಂದ್ರದ ಮಾದರಿಯನ್ನು ಕರ್ನಾಟಕದಲ್ಲೂ ಅಳವಡಿಸಿಕೊಳ್ಳಲು ಸರ್ಕಾರ ಆಸಕ್ತಿ ತೋರಿದೆ. ಈ ಯೋಜನೆಯಡಿ ಅರಣ್ಯದ ಒಂದು ಭಾಗದಲ್ಲಿ ವಿಶೇಷ ಆವರಣ ನಿರ್ಮಿಸಿ, ರಕ್ಷಿಸಲ್ಪಟ್ಟ ಹುಲಿ ಮರಿಗಳನ್ನು ಅಲ್ಲಿ ಇರಿಸಲಾಗುತ್ತದೆ.ಅರಣ್ಯದ ಅಂಚಿನ ಪರಿಸರದಲ್ಲಿ ಅವುಗಳಿಗೆ ಆಹಾರ ಒದಗಿಸಿ, ಸ್ವತಂತ್ರವಾಗಿ ಬೇಟೆಯಾಡಿ ಬದುಕುವ ಸಾಮರ್ಥ್ಯ ಬೆಳೆಸಿದ ಬಳಿಕ ಮತ್ತೆ ಕಾಡಿಗೆ ಬಿಡುವುದು ಈ ಯೋಜನೆಯ ಉದ್ದೇಶವಾಗಿದೆ.

ಆದರೆ, ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿರುವ ವನ್ಯಜೀವಿ ಸಂರಕ್ಷಣಾವಾದಿಗಳ ತಂಡ ಹಾಗೂ ವನ್ಯಜೀವಿ ಸಂರಕ್ಷಣಾ ಕಾರ್ಯಪಡೆಯ ಸದಸ್ಯರು ಅಕ್ಟೋಬರ್ 31ರಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಪತ್ರ ಬರೆದಿದ್ದಾರೆ. ಕೇಂದ್ರ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳದ ಸಮೀಪದಲ್ಲೇ ಅರಣ್ಯವಾಸಿಗಳು ನೆಲೆಸಿರುವ ಗ್ರಾಮಗಳಿವೆ. ಇದರಿಂದ ಅವರ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳುವ ಆತಂಕವಿದೆ. ಅಲ್ಲದೆ, ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗುವ ಸಾಧ್ಯತೆಯೂ ಇದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಹೊರಡಿಸಿರುವ ಪ್ರಮಾಣಿತ ಕಾರ್ಯವಿಧಾನದ ಮಾರ್ಗಸೂಚಿಗಳನ್ನು ಆಧರಿಸಿದ ಈ ಯೋಜನೆ ವೈಜ್ಞಾನಿಕವಾಗಿಲ್ಲ ಎಂದೂ ಆಕ್ಷೇಪಿಸಿದ್ದಾರೆ. 50 ಹೆಕ್ಟೇರ್ ವಿಸ್ತೀರ್ಣದ ಆವರಣದಲ್ಲಿ ಹುಲಿ ಮರಿಗಳನ್ನು ಇರಿಸಿ, ಬೇಟೆಯ ಪ್ರಾಣಿಗಳನ್ನು ಕೃತಕವಾಗಿ ಅವುಗಳತ್ತ ಕರೆದೊಯ್ದು ಆಹಾರ ಒದಗಿಸುವುದರಿಂದ ನೈಸರ್ಗಿಕ ಪರಿಸರದಲ್ಲಿ ಬೇಟೆಯಾಡುವ ಅನುಭವ ದೊರೆಯುವುದಿಲ್ಲ. ಇತರ ಬಲಿಷ್ಠ ಪರಭಕ್ಷಕ ಪ್ರಾಣಿಗಳೊಂದಿಗೆ ಪೈಪೋಟಿ ನಡೆಸುವ ಒತ್ತಡವೂ ಅವುಗಳಿಗೆ ಎದುರಾಗುವುದಿಲ್ಲ. ಕಾಡಿನಲ್ಲಿ ಬದುಕುಳಿಯಲು ಅಗತ್ಯವಿರುವ ಪ್ರಯತ್ನ, ತಪ್ಪುಗಳಿಂದ ಕಲಿಯುವ ಅನುಭವ ಮತ್ತು ಬೇಟೆಯ ಕೌಶಲ ಇಂತಹ ವ್ಯವಸ್ಥೆಯಲ್ಲಿ ಬೆಳೆಯಲು ಸಾಧ್ಯವಿಲ್ಲ ಎಂದು ವಿವರಿಸಲಾಗಿದೆ.



ಉದಯವಾಹಿನಿ ಚಿತ್ರ

> ನೈಸರ್ಗಿಕವಾಗಿ ಬದುಕುವ ಸಾಮರ್ಥ್ಯ ಕಡಿಮೆ ಇರುವ ಅಥವಾ ತಳೀಯವಾಗಿ ದುರ್ಬಲಗೊಂಡ ಹುಲಿ ಮರಿಗಳನ್ನು ಕೃತಕವಾಗಿ ಬೆಳೆಸಿ ಮತ್ತೆ ಕಾಡಿಗೆ ಬಿಡುವ ಪ್ರಯತ್ನವು ಪ್ರಕೃತಿಯಲ್ಲಿನ 'ಬದುಕುಳಿಯುವ ಸಾಮರ್ಥ್ಯವಿರುವುದೇ ಉಳಿಯುತ್ತದೆ ಎಂಬ ಮೂಲತತ್ವಕ್ಕೆ ವಿರುದ್ಧವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. -ವನ್ಯಜೀವಿ ಸಂರಕ್ಷಣಾವಾದಿಗಳು

ಮೃಗಾಲಯ ಸ್ಥಾಪನೆಗೆ ಅವಕಾಶವಿಲ್ಲ

ಇದಲ್ಲದೆ, ಹುಲಿಗಳ ಪ್ರಮುಖ ಆವಾಸಸ್ಥಾನದೊಳಗೆ ಇಂತಹ ಕೇಂದ್ರ ಸ್ಥಾಪಿಸುವುದು ಮೃಗಾಲಯದ ವ್ಯಾಖ್ಯಾನದ ವ್ಯಾಪ್ತಿಗೆ ಬರುತ್ತದೆ. ಹುಲಿಗಳ ಪ್ರಮುಖ ಆವಾಸಸ್ಥಾನದಲ್ಲಿ ಮೃಗಾಲಯ ಸ್ಥಾಪನೆಗೆ ಅವಕಾಶವಿಲ್ಲ ಎಂದು ಸಂರಕ್ಷಣಾವಾದಿಗಳು ಹೇಳಿದ್ದಾರೆ.

ಬಸ್ ಪ್ರಯಾಣ ದರ ಏರಿಕೆ ವಿರುದ್ಧ ಎಸ್‌ಡಿಪಿಐ ಆಕ್ರೋಶ : ಪ್ರತಿಭಟನೆ

• ಉದಯವಾಹಿನಿ ಗುಂಡ್ಲುಪೇಟೆ

ಬಸ್ ಪ್ರಯಾಣ ದರ ಏರಿಕೆ ಹಾಗೂ ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಖಂಡಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ವತಿಯಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಕೋಡಹಳ್ಳಿ ಸರ್ಕಲ್‌ನಲ್ಲಿ ಜಮಾವಣೆಗೊಂಡ ಎಸ್‌ಡಿಪಿಐ ಮುಖಂಡರು ಹಾಗೂ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಬೆಲೆ ಏರಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಎಸ್‌ಡಿಪಿಐ



ಜಿಲ್ಲಾ ಸಮಿತಿ ಸದಸ್ಯ ಇಮ್ರಾನ್ ಖಾನ್ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಬಸ್ ಪ್ರಯಾಣ ದರ ಹೆಚ್ಚಿಸಿರುವುದರಿಂದ ಬಡವರು, ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಸಾಮಾನ್ಯ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಜನರಿಗೆ ಸಾರಿಗೆ ದರ ಹೆಚ್ಚಳ ಮತ್ತಷ್ಟು ಆರ್ಥಿಕ ಹೊರೆ ತಂದಿದೆ. ನಂದಿನಿ ಹಾಲು ಮತ್ತು ಮೊಸರಿನ ದರ ಏರಿಕೆಯ ಬೆನ್ನಲ್ಲೇ ಬಸ್ ಪ್ರಯಾಣ ದರವನ್ನು ಶೇ.23ರಿಂದ ಶೇ.35ರವರೆಗೆ ಹೆಚ್ಚಿಸಿರುವುದು ಜನವಿರೋಧಿ ಕ್ರಮವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಚುನಾವಣಾ ಸಂದರ್ಭದಲ್ಲಿ ಗ್ಯಾರಂಟಿಗಳ ಹೆಸರಿನಲ್ಲಿ ಜನರ ವಿಶ್ವಾಸ ಗಳಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಇದೀಗ ಒಂದರ ಹಿಂದೆ ಒಂದರಂತೆ ಬೆಲೆ ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುತ್ತಿದೆ. ಸರ್ಕಾರ ಕೂಡಲೇ ಸಾರಿಗೆ ದರ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಹಿಂಪಡೆದು ಜನರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡಬೇಕು.

ಬೆಲೆ ಏರಿಕೆಯ ನೆಪದಲ್ಲಿ ಕಾಳಸಂತೆ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಸ್‌ಡಿಪಿಐ ತಾಲ್ಲೂಕು ಅಧ್ಯಕ್ಷ ಸರ್ದಾರ್ ಅಹಮದ್, ಉಪಾಧ್ಯಕ್ಷ ಆಸಿಫ್ ಪಾಷ, ಕಾರ್ಯದರ್ಶಿ ರಿಜ್ವಾನ್ ಪಾಷ, ಮುಬಾರಕ್ ಹಜರತ್ ಸೇರಿದಂತೆ ಸಂಘಟನೆಯ ಮುಖಂಡರು ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.

ಉದಯವಾಹಿನಿ
ದೀಪಾವಳಿ ವಿಶೇಷಾಂಕ
ಸೋಮವಾರ
09 ನವೆಂಬರ್ 2026
03

ಮಿನಿ ನ್ಯೂಸ್

ಪ್ರಭಾವಿ ಸಚಿವರುಗಳಿಗೆ ಹೀನಾಯ ಸೋಲು: ಮಾಜಿ ಸಚಿವ ರೇಣುಕಾಚಾರ್ಯ

• ಉದಯವಾಹಿನಿ ಚಾಮರಾಜನಗರ

ಅಗತ್ಯ ವಸ್ತುಗಳ ಬೆಲೆಯನ್ನು ಏರಿಕೆ ಮಾಡಿ ಜನರಿಗೆ ದೀಪಾವಳಿ ಉಡುಗೊರೆಯನ್ನು ಸರ್ಕಾರ ನೀಡಿದೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ವ್ಯಂಗ್ಯವಾಡಿದರು. ಚಾಮರಾಜನಗರದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿ ಮಾಸಾಶನವೇ ಬಂದ್ ಆಗಿದೆ. ಕಳೆದ ಒಂದು ವರ್ಷದಿಂದ ವೃದ್ಧಾಪ್ಯ ವೇತನ, ಅಂಗವಿಕಲರ ಮಾಸಾಶನ ಎಲ್ಲವನ್ನೂ ನಿಲ್ಲಿಸಿದ್ದಾರೆ.

ಹಾಲಿನ ದರ, ಬಸ್ ದರ ಏರಿಕೆ ಮೂಲಕ ರಾಜ್ಯದ ಜನರಿಗೆ ದೀಪಾವಳಿ ಗಿಫ್ಟ್ ಕೊಟ್ಟಿದ್ದಾರೆ ಎಂದು ಕಿಡಿಕಾರಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಪಾಪರ್ ಆಗಿದೆ, ಖಜಾನೆ ಖಾಲಿಯಾಗಿದೆ. ರಾಜ್ಯದ ಜನರೇ ಚುನಾವಣೆ ಕಾಯುತ್ತಿದ್ದು ಅವರೇ ಪಾಠ ಕಲಿಸುತ್ತಿದ್ದಾರೆ. 2028 ಕ್ಕೆ ಕಾಂಗ್ರೆಸ್ ಧೂಳಿಪಟ ಆಗಲಿದ್ದು 40 ಪ್ರಭಾವಿ ಸಚಿವರು, ಶಾಸಕರು ಹೀನಾಯವಾಗಿ ಸೋಲುತ್ತಾರೆ ಎಂದು ಭವಿಷ್ಯ ನುಡಿದರು. ಚುನಾವಣಾ ಆಯೋಗವು ಎಸ್ಐಆರ್ ಮೂಲಕ ತಮ್ಮ ಕೆಲಸವನ್ನು ಪಾರದರ್ಶಕವಾಗಿ ಮಾಡುತ್ತಿದೆ. ಆದರೆ, ಕಾಂಗ್ರೆಸ್ ಜನರನ್ನು ದಾರಿತಪ್ಪಿಸುವ ಕೆಲಸ ಮಾಡುತ್ತಿದೆ ಎಂದು ಹೇಳಿದರು. ಅಕ್ರಮ ಬಾಂಗ್ಲಾ ವಲಸಿಗರು, ನಕಲಿ ಮತದಾರರನ್ನು ಮತಪಟ್ಟಿಯಿಂದ ತೆಗೆಯೋದು ತಪ್ಪಾ?, ಕಾಂಗ್ರೆಸ್ ಜನರಲ್ಲಿ ಗೊಂದಲ ಮೂಡಿಸುತ್ತಿದೆ.

ಯುವನಿಧಿ ಅನುಷ್ಠಾನದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಪ್ರಥಮ ಸ್ಥಾನ

ಯುವನಿಧಿ ಯೋಜನೆಯ ಕುರಿತು ಜಿಲ್ಲೆಯ ಎಲ್ಲಾ ಪದವಿ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಾಗಾರಗಳನ್ನು ಆಯೋಜಿಸಿ ವಿದ್ಯಾರ್ಥಿಗಳಿಗೆ ಯೋಜನೆಯ ಉದ್ದೇಶ

• ಉದಯವಾಹಿನಿ ಚಿಕ್ಕಬಳ್ಳಾಪುರ

1 ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಗುತ್ತಿದೆ
2 ಪ್ರತಿಯೊಬ್ಬರಿಗೂ ತಲುಪಿಸಲು ಕ್ರಮ ವಹಿಸಲಾಗಿದೆ
3 ದಿನಸಿ ಕಿಟ್ ವಿತರಿಸಲು ಸರ್ಕಾರ ಉದ್ದೇಶಿಸಿದೆ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಉತ್ತಮ ಸಾಧನೆ ಮಾಡುತ್ತಿದ್ದು, ಯುವನಿಧಿ ಯೋಜನೆಯ ಅನುಷ್ಠಾನದಲ್ಲಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನವನ್ನು ಕಾಯ್ದುಕೊಂಡಿದೆ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಯಲುವಳ್ಳಿ ಎನ್. ರಮೇಶ್ ಅವರು ತಿಳಿಸಿದರು.

ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಲಾಗಿದೆ.

ವಿಶೇಷವಾಗಿ ಯುವನಿಧಿ ಯೋಜನೆಯಡಿ ಅರ್ಹ ಪದವೀಧರರಿಗೆ ಸೌಲಭ್ಯ ಒದಗಿಸುವಲ್ಲಿ ಜಿಲ್ಲೆ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ ಎಂದರು. ಯುವನಿಧಿ ಯೋಜನೆಯ ಕುರಿತು ಜಿಲ್ಲೆಯ ಎಲ್ಲಾ



ಪದವಿ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಾಗಾರಗಳನ್ನು ಆಯೋಜಿಸಿ ವಿದ್ಯಾರ್ಥಿಗಳಿಗೆ ಯೋಜನೆಯ ಉದ್ದೇಶ, ಅರ್ಹತೆ ಹಾಗೂ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಗುತ್ತಿದೆ.

2023ನೇ ಸಾಲಿನಿಂದ ಪದವಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ಸಮಗ್ರವಾಗಿ ಸಂಗ್ರಹಿಸಿ, ಅರ್ಹ ಫಲಾನುಭವಿಗಳನ್ನು ಗುರುತಿಸುವ ಮೂಲಕ ಯೋಜನೆಯ ಸೌಲಭ್ಯವನ್ನು ಪ್ರತಿಯೊಬ್ಬರಿಗೂ ತಲುಪಿಸಲು ಕ್ರಮ ವಹಿಸಲಾಗಿದೆ ಎಂದು ಹೇಳಿದರು. ಅನ್ನಭಾಗ್ಯ ಯೋಜನೆಯಡಿ ಪ್ರಸ್ತುತ ಫಲಾನುಭವಿಗಳಿಗೆ ವಿತರಿಸಲಾಗುತ್ತಿರುವ 10 ಕೆ.ಜಿ. ಅಕ್ಕಿಯ ಬದಲಾಗಿ ಅಕ್ಕಿಯೊಂದಿಗೆ ಬೇಳೆ, ಅಡುಗೆ ಎಣ್ಣೆ, ಉಪ್ಪು ಸೇರಿದಂತೆ ವಿವಿಧ ಅಗತ್ಯ ದಿನಸಿ ಪದಾರ್ಥಗಳನ್ನು ಸೇರಿಸಿ

ಗೃಹಲಕ್ಷ್ಮಿ ಯೋಜನೆಯಡಿ ಶೇ.97ರಷ್ಟು ಹಾಗೂ ಯುವನಿಧಿ ಯೋಜನೆಯಡಿ ಶೇ.92ರಷ್ಟು ಪ್ರಗತಿ ಸಾಧಿಸಲಾಗಿದೆ. ಶಕ್ತಿ ಮತ್ತು ಅನ್ನಭಾಗ್ಯ ಯೋಜನೆಗಳಡಿ ಶೇ.100ರಷ್ಟು ಪ್ರಗತಿ ದಾಖಲಿಸಲಾಗಿದೆ ಎಂದು ತಿಳಿಸಿದರು.-ಯಲುವಳ್ಳಿ ಎನ್.

ಜನಸಾಮಾನ್ಯರ ಆರ್ಥಿಕ ಹೊರೆ

ಗೃಹಜ್ಯೋತಿ ಯೋಜನೆಯಡಿ ತಾಲ್ಲೂಕಿನಲ್ಲಿ ಒಟ್ಟು 3,47,310 ಗ್ರಾಹಕರು ನೋಂದಾಯಿಸಿಕೊಂಡಿದ್ದು, ಈ ಪೈಕಿ 3,27,756 ಗ್ರಾಹಕರು ಯೋಜನೆಯ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಸರ್ಕಾರದ ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವಲ್ಲಿ ಮಹತ್ವದ ಪಾತವಹಿಸುತ್ತಿವೆ ಎಂದರು.

ಒಟ್ಟು 10 ಕೆ.ಜಿ. ತೂಕದ ದಿನಸಿ ಕಿಟ್ ವಿತರಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ.

ಈ ಕಿಟ್‌ಗಳಿಗೆ 'ಇಂದಿರಾ ಕಿಟ್ ಎಂದು ಹೆಸರಿಸಲಾಗಿದ್ದು, ಮುಂದಿನ ಜನವರಿ ತಿಂಗಳಿನಿಂದ ಫಲಾನುಭವಿಗಳಿಗೆ ವಿತರಣೆ ಆರಂಭಿಸಲು ಯೋಜಿಸಲಾಗಿದೆ ಎಂದು ಹೇಳಿದರು.ಚಿಕ್ಕಬಳ್ಳಾಪುರ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ನಾರಾಯಣಸ್ವಾಮಿ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಪಂಚ ಗ್ಯಾರಂಟಿ ಯೋಜನೆಗಳಿಂದ ಅನಿವಾರ್ಯ ಕಾರಣಗಳಿಂದ ಈವರೆಗೆ ಸೌಲಭ್ಯ ಪಡೆಯಲು ಸಾಧ್ಯವಾಗದ ಅರ್ಹ ವ್ಯಕ್ತಿಗಳನ್ನು ಗುರುತಿಸಿ, ಅವರನ್ನೂ ಯೋಜನೆಗಳ ವ್ಯಾಪ್ತಿಗೆ ತರಲು ವಿಶೇಷ ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ.

ಯಾವುದೇ ಅರ್ಹ ಫಲಾನುಭವಿಯು ಸರ್ಕಾರದ ಸೌಲಭ್ಯದಿಂದ ವಂಚಿತರಾಗದಂತೆ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳ ಸಿಬ್ಬಂದಿ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ, ಫಲಾನುಭವಿಗಳ ನೋಂದಣಿ, ಸೌಲಭ್ಯ ವಿತರಣೆಯಲ್ಲಿನ ಸಮಸ್ಯೆಗಳು ಹಾಗೂ ಯೋಜನೆಗಳ ಅನುಷ್ಠಾನವನ್ನು ಮತ್ತಷ್ಟು ಪರಿಣಾಮಕಾರಿಗೊಳಿಸುವ ಕುರಿತು ಚರ್ಚಿಸಲಾಯಿತು. ಈ ಸಂದರ್ಭ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶ್ರೀನಾಥಗೌಡ, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರಾದ ಗುಂಡ್ಲಮಂಡಿಕಲ್ ಶ್ರೀರಾಮರೆಡ್ಡಿ, ಶ್ರೀನಿವಾಸ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರಜಾಸೇವೆಯ ಉದ್ದೇಶವೇ ರಾಜಕಾರಣಿಗಳ ಮೂಲ ಆಶಯ

• ಉದಯವಾಹಿನಿ, ಜಯಪುರ


ರಾಜಕಾರಣಿಗಳ ಮೂಲ ಉದ್ದೇಶವೇ ಪ್ರಜಾಸೇವೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು. ಹೋಬಳಿಯ ದೂರ ಗ್ರಾಮದಲ್ಲಿ ಆಯೋಜಿಸಿದ್ದ ಪ್ರಜಾಸೇವೆ ಆಂದೋಲನ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಬಡವರ ಕುಂದು ಕೊರತೆ ಬಗೆಹರಿಯಬೇಕಾದರೆ ಅಧಿಕಾರಿಗಳು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು. ಜನರು ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಬೇಕು ಎಂದರು.

ಜನರಿಗೆ ಅನುಕೂಲ ಕಲ್ಪಿಸಲು ಸರ್ಕಾರ ಪ್ರಜಾಸೇವೆ ಆಂದೋಲನವನ್ನು ಜಾರಿಗೊಳಿಸಿದೆ. ಇದರಿಂದ ತಾಲ್ಲೂಕು ಮಟ್ಟದ ಅಧಿಕಾರಿಗಳು ಖುದ್ದು ಸ್ಥಳದಲ್ಲಿದ್ದು ಜನರ ಕುಂದು ಕೊರತೆಗಳನ್ನು ಆಲಿಸುವ ಕೆಲಸ ಮಾಡುತ್ತಾರೆ. ಅಧಿಕಾರಿಗಳು ಮನೆ ಬಾಗಿಲಿಗೆ ಬಂದಾಗ ಜನರು ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಬೇಕು ಎಂದರು.

ಮೈಸೂರು ತಾಲ್ಲೂಕು ತಹಶೀಲ್ದಾರ್ ಕೆ.ಎಂ ಮಹೇಶ್ ಕುಮಾರ್ ಮಾತನಾಡಿ, ಸಾರ್ವಜನಿಕರು ನೀಡಿರುವ ಅಹವಾಲುಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲಾಗುವುದು ಎಂದರು.

ಶಿಥಿಲಾವಸ್ಥೆಯಲ್ಲಿದ್ದ ಗುರುಭವನ ನವೀಕರಣ

• ಉದಯವಾಹಿನಿ ರಾಮನಗರ



ರಾಮನಗರದಲ್ಲಿ ಹಲವು ವರ್ಷಗಳಿಂದ ಶಿಥಿಲಾವಸ್ಥೆ ಯಲ್ಲಿದ್ದ ಗುರುಭವನವನ್ನು ನಗರಸಭೆಯ 27ಲಕ್ಷ ರೂಪಾಯಿ ಅನುದಾನದಲ್ಲಿ ನವೀಕರಿಸಲಾಗಿದ್ದು, ಇದರೊಂದಿಗೆ ಶಿಕ್ಷಕರ ಬಹುದಿನಗಳ ಆಶಯ ಈಡೇರಿದೆ ಎಂದು ನಗರಸಭಾಧ್ಯಕ್ಷ ಕೆ. ಶೇಷಾದ್ರಿ ಶಶಿ ತಿಳಿಸಿದ್ದಾರೆ.

ನವೀಕರಣಗೊಂಡ ಗುರುಭವನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಆರಂಭದಲ್ಲಿ ಈ ಭವನವು ನಗರಸಭೆ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಲಾಗಿತ್ತು. ಆದರೆ ಶಿಕ್ಷಕರ ಸಂಘಟನೆಯ ಪ್ರಮುಖರು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿ, ಅಗತ್ಯ ಸೌಲಭ್ಯ ಕಲ್ಪಿಸಲು ಮುಂದಾಗಿದ್ದಾಗಿ ತಿಳಿಸಿದರು.

ಮೇಲ್ಛಾವಣಿ ದುರಸ್ತಿ, ಫ್ಯಾನ್, ಕಿಟಕಿ, ಬಾಗಿಲು, ಕುಡಿಯುವ ನೀರಿನ ಸೌಲಭ್ಯ ಹಾಗೂ ಶೌಚಾಲಯಗಳ ನವೀಕರಣ ಕಾರ್ಯವನ್ನು ಕೈಗೊಳ್ಳಲಾಗಿದೆ. ಸಮಾಜದ ಭವಿಷ್ಯ ರೂಪಿಸುವ ಶಿಕ್ಷಕರಿಗೆ ಉತ್ತಮ ಸೌಲಭ್ಯಗಳು ದೊರೆಯಬೇಕು ಎಂಬ ಉದ್ದೇಶದಿಂದ ಈ ಅನುದಾನ ಬಳಸಲಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು. ತಮ್ಮ ಅಧಿಕಾರದ ಕೊನೆಯ ದಿನದಂದು ಗುರುಭವನವನ್ನು ಉದ್ಘಾಟಿಸುತ್ತಿರುವುದು ಶಿಕ್ಷಕರ ಸೇವೆ ಮಾಡಿದ ತೃಪ್ತಿ ನೀಡಿದೆ ಎಂದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಎಚ್. ಹನುಮಯ್ಯ ಮಾತನಾಡಿ, 1993ರಲ್ಲಿ ಶಂಕುಸ್ಥಾಪನೆಗೊಂಡು 2005ರಲ್ಲಿ ಲೋಕಾರ್ಪಣೆಗೊಂಡಿದ್ದ ಈ ಗುರುಭವನವು ನಿರ್ವಹಣೆಯ ಕೊರತೆಯಿಂದ ಪಾಳುಬಿದ್ದ ಸ್ಥಿತಿಯಲ್ಲಿತ್ತು.

ಪ್ರಸ್ತುತ ನಗರಸಭಾಧ್ಯಕ್ಷರು ಅನುದಾನ ನೀಡಿ ನವೀಕರಿಸುವ ಮೂಲಕ ಕಟ್ಟಡಕ್ಕೆ ನವಚೈತನ್ಯ ನೀಡಿದ್ದಾರೆ ಎಂದರು.

ಜನರ ಕಡೆಗಿನ ಬದ್ಧತೆ ಮುಖ್ಯವೇ ಹೊರತು ಔಪಚಾರಿಕ ಶಿಕ್ಷಣವಲ್ಲ

• ಉದಯವಾಹಿನಿ ಚಿಕ್ಕಬಳ್ಳಾಪುರ

ಸಚಿವ ಪ್ರಿಯಾಂಕ್ ಖರ್ಗೆಯವರಿಗೆ ಕಾನ್ವೆಂಟ್ ಶಿಕ್ಷಣ ಸಿಕ್ಕಿರಬಹುದು, ಆದರೆ ರಾಜಕಾರಣಿಗಳಿಗೆ ಜನಪರ ಕಾಳಜಿ ಮತ್ತು ಬದ್ಧತೆಯೇ ಮುಖ್ಯವೇ ಹೊರತು ಔಪಚಾರಿಕ ಶಿಕ್ಷಣವಲ್ಲ ಎಂದು ಸಂಸದ ಡಾ.ಕೆ.ಸುಧಾಕರ್ ಚಿಕ್ಕಬಳ್ಳಾಪುರದಲ್ಲಿ ತಿಳಿಸಿದ್ದಾರೆ.

ಸಚಿವರ ಅಧಿಕಾರದ ದರ್ಪ ಮತ್ತು ಭಾಷೆಯ ಶೈಲಿಯನ್ನು ಖಂಡಿಸಿದ ಅವರು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಲ್ಲ ಎಂದರು. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಕೆ. ಕಾಮರಾಜ್ ಅವರಿಗೆ ಔಪಚಾರಿಕ ಶಿಕ್ಷಣವಿಲ್ಲದಿದ್ದರೂ ಬಡವರಿಗೆ ಉತ್ತಮ ಸೇವೆ ಸಲ್ಲಿಸಿದ್ದರು ಎಂಬುದನ್ನು ಸ್ಮರಿಸಿದ ಅವರು, ಬಡವರ ಕಷ್ಟ ಆಲಿಸಲು ಕಾನ್ವೆಂಟ್‌ನಲ್ಲಿ ಓದಬೇಕಿಲ್ಲ ಅಥವಾ ಮುಂಬೈನಲ್ಲಿ ವಾಸಿಸಬೇಕಿಲ್ಲ, ಜನರಿಗೆ ಸ್ಪಂದಿಸುವ ಗುಣವಿದ್ದರೆ ಸಾಕು ಎಂದು ಅಭಿಪ್ರಾಯಪಟ್ಟರು.

ಪ್ರಿಯಾಂಕ್ ಖರ್ಗೆಯವರು ತಮ್ಮ ಮಾತಿನ ಶೈಲಿಯನ್ನು ಬದಲಿಸಿಕೊಳ್ಳಬೇಕು ಮತ್ತು ತಮ್ಮ ಪಕ್ಷದವರೇ ಕಾಲೆಳೆಯುವ ಖೆಡ್ಡಾಗೆ ಬೀಳಬಾರದು ಎಂದು ಸಲಹೆ ನೀಡಿದರು. ಎಚ್.ಡಿ.



ಕುಮಾರಸ್ವಾಮಿ ಅವರ ಕುರಿತಾಗಿ ಮಾತನಾಡುತ್ತಾ, ವರಿಷ್ಠರು ಕಾಲಕಾಲಕ್ಕೆ ತಕ್ಕಂತೆ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಎಂದರು. ತಾನು ಸಚಿವನಾಗಿದ್ದಾಗ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬಿಜೆಪಿ ಸಂಘಟನೆಯನ್ನು ಬಲಪಡಿಸಿದ್ದು, ಈ ಭಾಗದಲ್ಲಿ ಪಕ್ಷದ ಮತಪಾಲನ್ನು ಗಣನೀಯವಾಗಿ ಹೆಚ್ಚಿಸಿದ್ದೇನೆ.

ಈ ಬಗ್ಗೆ ಪಕ್ಷದ ವರಿಷ್ಠರು ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ತಾನು ಬದ್ಧನಾಗಿರುವುದಾಗಿ ಡಾ.ಕೆ.ಸುಧಾಕರ್ ಸ್ಪಷ್ಟಪಡಿಸಿದರು.

ಎನ್‌ಡಿಎ ಮೈತ್ರಿಕೂಟ ಅಧಿಕಾರ

ರಾಜ್ಯ ರಾಜಕಾರಣದ ಕುರಿತು ಮಾತನಾಡುತ್ತಾ, ಪ್ರಸ್ತುತ ರಾಜ್ಯವು ನಗೆಪಾಟಲಿಗೆ ಈಡಾಗಿದ್ದು, ಅಭಿವೃದ್ಧಿ ಕುಂಠಿತಗೊಂಡಿದೆ. 2028ರ ವೇಳೆಗೆ ರಾಜ್ಯವನ್ನು ಗತವೈಭವಕ್ಕೆ ಕೊಂಡೊಯ್ಯಲು ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಬರಬೇಕಿದೆ ಎಂದು ಹೇಳಿದರು.-ಸಂಸದ ಡಾ.ಕೆ.ಸುಧಾಕರ್

ದೀಪಾವಳಿ ಹಬ್ಬದಲ್ಲಿ ಆಂತರಿಕ ಜ್ಯೋತಿಯ ಮಹತ್ವಕ್ಕೆ ಒತ್ತು

• ಉದಯವಾಹಿನಿ ಚಿಕ್ಕಬಳ್ಳಾಪುರ

ಇಲ್ಲಿನ ಕೆ.ಟಿ. ರಸ್ತೆಯಲ್ಲಿನ ಬ್ರಹ್ಮ ಕುಮಾರೀಸ್ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ದೀಪಾವಳಿಯನ್ನು ಬಾಹ್ಯ ದೀಪಗಳನ್ನು ಹಚ್ಚುವ ಹಬ್ಬವಾಗಿ ಆಚರಿಸದೆ, ಆಧ್ಯಾತ್ಮಿಕ ಮತ್ತು ಆಂತರಿಕ ಮಹತ್ವಕ್ಕೆ ಹೆಚ್ಚಿನ ಒತ್ತು ಕೊಟ್ಟು ಆಚರಣೆ ಮಾಡಲಾಯಿತು. ಸ್ಥಳೀಯ ಸಂಚಾಲಕರಾದ ರಾಜಯೋಗಿನಿ ಬಿ.ಕೆ. ಲಲಿತ ಅಕ್ಕ ಅವರು ಸಹೋದರ ಸಹೋದರಿಯ ರೊಂದಿಗೆ ದೀಪದಿಂದ ದೀಪವ ಹಚ್ಚಿ ಆತ್ಮಜ್ಯೋತಿಯನ್ನು ಬೆಳಗಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ದೀಪಾವಳಿಯು ಆತ್ಮದ ಜಾಗೃತಿ ಮತ್ತು ಅಜ್ಞಾನದ ಕತ್ತಲೆಯನ್ನು ದೂರಮಾಡುವ ಪವಿತ್ರ ಆಚರಣೆಯಾಗಿದೆ, ದೀಪಾವಳಿ ಹಬ್ಬವು ಆಂತರಿಕ ಜ್ಯೋತಿಯನ್ನು ಬೆಳಗಿಸುವುದರ ಜೊತೆಗೆ ಬಾಹ್ಯವಾಗಿ ಮಣ್ಣಿನ ದೀಪಗಳನ್ನು ಹಚ್ಚುವ ಮುನ್ನ, ಪ್ರತಿಯೊಬ್ಬರೂ ತಮ್ಮಲ್ಲಿರುವ ಆತ್ಮಜ್ಯೋತಿಯನ್ನು ಬೆಳಗಿಸಿಕೊಳ್ಳಬೇಕು ಎಂದು ಹೇಳಿದರು. ಕೋಪ, ಲೋಭ, ಅಹಂಕಾರ ಮತ್ತು ಮತ್ಸರಗಳೆಂಬ ಕತ್ತಲೆಯನ್ನು ಕಳೆದು, ಶಾಂತಿ, ಪವಿತ್ರತೆ ಮತ್ತು ಪ್ರೀತಿಯ ಬೆಳಕನ್ನು ತುಂಬಿಕೊಳ್ಳುವುದೇ ನಿಜವಾದ ದೀಪಾವಳಿ ಎಂದು ಅವರು ಹೇಳಿದರು.


ವಿಮಾನ ನಿಲ್ದಾಣದ ಸಮೀಪದ ಗ್ರಾಮಗಳಲ್ಲಿ ಹುಲಿ ಪ್ರತ್ಯಕ್ಷ!

• ಉದಯವಾಹಿನಿ, ಮೈಸೂರು

ಮಂಡಕಳ್ಳಿ ವಿಮಾನ ನಿಲ್ದಾಣದ ನಂಜನಗೂಡು ರಸ್ತೆಯ ಕಾಂಪೌಂಡ್ ಎದುರು ಇರುವ ಮರಸೆ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಹುಲಿ ಓಡಾಟದಿಂದ ಗ್ರಾಮಸ್ಥರು ಭಯಭೀತರಾಗಿದ್ದಾರೆ.

ಮಂಡಹಳ್ಳಿ ಮರಸೆ, ಹೊಸಹುಂಡಿ, ಗುಡುಮಾದನಹಳ್ಳಿ ಗ್ರಾಮ ಸೇರಿದಂತೆ ಜೆ.ಪಿ.ನಗರಕ್ಕೆ ಸಂಪರ್ಕಿಸುವ ಸೇತುವೆ ಬಳಿ ಒಂದು ವಾರದಿಂದ ನಿರಂತರವಾಗಿ ಗ್ರಾಮಸ್ಥರ ಕಣ್ಣಿಗೆ ಹುಲಿ ಕಾಣಿಸಿಕೊಂಡು ಆತಂಕವನ್ನುಂಟು ಮಾಡಿದೆ.

ಕೆಲ ತಿಂಗಳ ಹಿಂದೆ ಮಂಡಕಳ್ಳಿ ವಿಮಾನ ನಿಲ್ದಾಣದ ಸಮೀಪವೇ ಹುಲಿ ಕಾಣಿಸಿಕೊಂಡಿದ್ದ ಪರಿಣಾಮ, ಅರಣ್ಯ ಇಲಾಖೆಯು ಸಾಕಾನೆಗಳ ಸಹಾಯದಿಂದ ಕೆಲ ದಿನಗಳ ಕಾಲ ಹುಲಿ ಸೆರೆ ಕಾರ್ಯಾಚರಣೆ ನಡೆಸಿದರೂ ಬೋನಿಗೆ ಸಿಗದೇ ಹುಲಿ ನಾಪತ್ತೆಯಾಗಿತ್ತು. ನಂತರ ಕೆಲ ದಿನಗಳ ಬಳಿಕ, ಬೆಮೆಲ್ ಆವರಣದಲ್ಲಿ ಇದೇ ಹುಲಿ ಓಡಾಟ ಮಾಡಿ, ನಂತರ ಅಲ್ಲಿಯೂ ಸೆರೆಯಾಗದೇ ಕೆಲ ತಿಂಗಳು ನಾಪತ್ತೆಯಾಗಿತ್ತು. ಹುಲಿ ಸೆರೆ ಹಿಡಿದು,ಗ್ರಾಮಸ್ಥರ ಆತಂಕವನ್ನು ಅರಣ್ಯ ಇಲಾಖೆ ದೂರ ಮಾಡಬೇಕು ಎನ್ನುತ್ತಾರೆ ಗುಡುಮಾದನಹಳ್ಳಿ ರೈತ ಉಮೇಶ್.



ಎರಡು ತಿಂಗಳ ಹಿಂದೆ ಗ್ರಾಮಗಳಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದ ಹುಲಿ, ಈಗ ವಾರದಿಂದ ಬೆಳಗ್ಗೆ, ಮಧ್ಯಾಹ್ನ ಜಮೀನುಗಳು, ತೋಟಗಳತ್ತ ನುಗ್ಗುತ್ತಿದೆ. ಇದರಿಂದ ಜಮೀನು ಹಾಗೂ ತೋಟಗಳ ಬಳಿ ತೆರಳಲು ಗ್ರಾಮಸ್ಥರು ಹಾಗೂ ತೋಟದ ಮಾಲೀಕರು, ಕೆಲಸದಾಳುಗಳು ಹೆದರುವಂತಾಗಿದೆ. ಕೆಲ ದಿನಗಳ ಹಿಂದೆ ನಾಲ್ಕು ಹಸುಗಳ ಮೇಲೆ ಹುಲಿ ದಾಳಿ ಮಾಡಿದಾಗ, ಸಮೀಪ ಇದ್ದ ರೈತರು ಜೋರಾಗಿ ಕೂಗಿ ಅದನ್ನು ಓಡಿಸಿದ್ದರು.

ರಾತ್ರಿ ವೇಳೆಯಲ್ಲಿ ಸಂಚರಿಸುತ್ತಿದ್ದ ಹುಲಿ, ಈಗ ಹಗಲು ಹೊತ್ತಿನಲ್ಲೇ ಜಮೀನುಗಳತ್ತ ಬರುತ್ತಿದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಮಹದೇಶ್ವರ ಸ್ವಾಮಿ ದೀಪಾವಳಿ ಜಾತ್ರಾ ಮಹೋತ್ಸವ

• ಉದಯವಾಹಿನಿ, ಪಿರಿಯಾಪಟ್ಟಣ

ಪಟ್ಟಣದ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನ.8ರಿಂದ 11ರವರೆಗೆ ದೀಪಾವಳಿ ಜಾತ್ರಾ, ಮಹೋತ್ಸವ ಆಚರಿಸಲಾಗುತ್ತಿದೆ.

ಜಾತ್ರೋತ್ಸವ ಅಂಗವಾಗಿ ನ.8ರಂದು ಸ್ವಾಮಿಯ ಮಠದಿಂದ ಉತ್ಸವ ಮೂರ್ತಿಯನ್ನು ಉದ್ಭವ ಸ್ಥಾನಕ್ಕೆ ಕರೆದೊಯ್ಯಲಾಗುವುದು. ಅದೇ ದಿನ ರಾತ್ರಿ ಎಣ್ಣೆ ಮಜ್ಜನ ಮತ್ತು ಪ್ರಸಾದ ವಿನಿಯೋಗ ನಡೆಯಲಿದೆ. ನ.9ರಂದು ಹಾಲರುವಿ ಸೇವೆ ಇರುತ್ತದೆ.

ನ.10ರಂದು ಮಧ್ಯಾಹ್ನ 12ಗಂಟೆಗೆ ರಥೋತ್ಸವ, ರಾತ್ರಿ ಕೊಂಡೋತ್ಸವ ಜರುಗಲಿದೆ. ನ.11 ರಂದು ಪಾನಕ ಪೂಜೆ, ಅದೇ ದಿನ ರಾತ್ರಿ, ಸಕಲ ವಿಜೃಂಭಣೆಯಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ಜರುಗಲಿದೆ.

ನ.17ರಂದು ಬೆಂಗಳೂರಿನಲ್ಲಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

• ಉದಯವಾಹಿನಿ, ಎಚ್.ಡಿ.ಕೋಟೆ

ಮಾಸಿಕ ಗೌರವಧನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನ.17ರಂದು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ರಾಜ್ಯ ಸಂಯುಕ್ತ ಆಶಾಕಾರ್ಯಕರ್ತೆಯರ ಸಂಘದಿಂದ ಅನಿರ್ದಿಷ್ಟಾವಧಿ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ತಾಲ್ಲೂಕು ಘಟಕದ ಅಧ್ಯಕ್ಷೆ ಭಾಗ್ಯ ತಿಳಿಸಿದರು. ಪ್ರತಿಭಟನೆಗೆ ಅನುಮತಿ ನೀಡುವಂತೆ ಹಾಗೂ ತುರ್ತು ಸೇವೆಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವಂತೆ ಎಚ್.ಡಿ.ಕೋಟೆ ಮತ್ತು ಸರಗೂರು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಟಿ. ರವಿಕುಮಾರ್ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು. 2025 ಫೆಬ್ರವರಿ ತಿಂಗಳಿನಲ್ಲಿ ಗೌರವಧನ ಹೆಚ್ಚಿಸುವಂತೆ ಆಗ್ರಹಿಸಿ ನಾಲ್ಕು ದಿನಗಳ ಅಹೋರಾತ್ರಿ ಧರಣಿ ನಡೆಸಿದಾಗ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಿ 10,000 ಗೌರವ ಧನ ಹಾಗೂ ಬಜೆಟ್ ಮಂಡನೆ ವೇಳೆ ಒಂದು ಸಾವಿರ ಹೆಚ್ಚಿಸುವ ಭರವಸೆ ನೀಡಿತ್ತು, ಏಪ್ರಿಲ್ ತಿಂಗಳಿಂದಲೇ ಜಾರಿ ಮಾಡುವುದಾಗಿ ಘೋಷಿಸಿತ್ತು.

ಈ ಬಾರಿ ಬೇಡಿಕೆ ಈಡೇರುವವರೆಗೂ ಪ್ರತಿಭಟನೆ ವಾಪಸ್ ಪಡೆಯುವುದಿಲ್ಲ ಎಂದರು. ಆಶಾಕಾರ್ಯಕರ್ತೆಯರ ಹೋರಾಟಕ್ಕೆ ರೈತಪರ್ವ ಸಂಘದ ನವೀನ್ ಕುಮಾರ್, ಜೀವಿಕ ಸಂಘಟನೆಯ ಬಸವರಾಜು ಬೆಂಬಲ ನೀಡುವುದಾಗಿ ಹೇಳಿದರು. ಸಂಘದ ತಾಲ್ಲೂಕು ಘಟಕದ ಉಪಾಧ್ಯಕ್ಷೆ ಮಂಜುಳಾ, ಕಾರ್ಯದರ್ಶಿ ಸುಧಾ, ನವಿನಾ, ಶಶಿಕಲಾ, ಕಲಾವತಿ, ಶೋಭಾ, ವಸಂತಾ, ಅಬಿದಾಬೇಗಂ, ಶಿವಮ್ಮ ಪಾಲ್ಗೊಂಡಿದ್ದರು.

ಪಟಾಕಿ ಮಾರಾಟಕ್ಕೆ ಗ್ರಾಹಕರಿಗೆ ಆಕರ್ಷಕ ಕೊಡುಗೆ

• ಉದಯವಾಹಿನಿ, ಕೆಜಿಎಫ್

ದೀಪಾವಳಿ ಹಬ್ಬದ ಸಂಭ್ರಮಕ್ಕೆ ನಗರದ ಜನತೆಗೆ ವಿಶೇಷ ಕೊಡುಗೆಯಾಗಿ ಶೇ. 80ರಷ್ಟು ರಿಯಾಯಿತಿ ದರದಲ್ಲಿ ವಿವಿಧ ಕಂಪನಿಗಳ ಬ್ರಾಂಡೆಡ್ ಪಟಾಕಿಗಳ ಬಾಕ್ಸ್‌ಗಳನ್ನು ಮಾರಾಟ ಮಾಡಲಾಗುತ್ತಿದೆ. ಇಂದು ನಗರದ ಮುನ್ಸಿಪಲ್ ಮೈದಾನದ ಆವರಣದಲ್ಲಿ ಪಟಾಕಿ ಮಾರಾಟಕ್ಕೆ ಚಾಲನೆ ನೀಡಲಾಗಿದ್ದು, ಗ್ರಾಹಕರು ತಮ್ಮ ಇಷ್ಟವಾದ ಬ್ರಾಂಡ್‌ಗಳ ಪಟಾಕಿಗಳನ್ನು ಆಯ್ಕೆ ಮಾಡಿಕೊಂಡು ಖರೀದಿಸಬಹುದು ಎಂದು ಪಟಾಕಿ ಅಂಗಡಿ ಮಾಲೀಕರಾದ ಮುರಳಿ ಮತ್ತು ಪಾಟ್ಸ್ ಸುರೇಶ್ ತಿಳಿಸಿದ್ದಾರೆ. ನಗರದಲ್ಲಿ ಪಟಾಕಿ ಖರೀದಿಸಲು ಸಿದ್ಧತೆ ನಡೆಸುತ್ತಿರುವ ಗ್ರಾಹಕರಿಗೆ ಅನುಕೂಲವಾಗುವಂತೆ ವಿವಿಧ ಬಗೆಯ ಪಟಾಕಿಗಳನ್ನು ಒಂದೇ ಸ್ಥಳದಲ್ಲಿ ಲಭ್ಯವಾಗುವ ವ್ಯವಸ್ಥೆ ಮಾಡಲಾಗಿದೆ. ಕೇವಲ 300 ರೂಪಾಯಿಯಿಂದ ಪಟಾಕಿ ಬಾಕ್ಸ್‌ಗಳ ಮಾರಾಟ ಆರಂಭವಾಗಿದ್ದು, ಗ್ರಾಹಕರ ಆರ್ಥಿಕ ಅನುಕೂಲಕ್ಕೆ ತಕ್ಕಂತೆ ವಿವಿಧ ಬೆಲೆಯ ಪಟಾಕಿ ಪ್ಯಾಕೆಟ್‌ಗಳು ಹಾಗೂ ಬಾಕ್ಸ್‌ಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.

ಗ್ರಾಹಕರ ವಿಶ್ವಾಸವೇ ನಮ್ಮ ವ್ಯಾಪಾರದ ಬಂಡವಾಳ. ಇತ್ತೀಚಿನ ದಿನಗಳಲ್ಲಿ ಪಟಾಕಿ ಖರೀದಿಸುವ ಸಂದರ್ಭದಲ್ಲಿ ಗ್ರಾಹಕರು ಮೋಸ ಹೋಗುವ ಆತಂಕ ವ್ಯಕ್ತಪಡಿಸುತ್ತಿದ್ದಾರೆ. ವಿಶೇಷವಾಗಿ ತಮಿಳುನಾಡಿನ ಹೋಸರ ನಗರದಲ್ಲಿ ಪಟಾಕಿ ಖರೀದಿಸಲು ತೆರಳುವ ಗ್ರಾಹಕರಿಗೆ ಕೆಲವು ವೇಳೆ ನಿರೀಕ್ಷಿತ ಗುಣಮಟ್ಟ ಬೆಲೆಯಲ್ಲಿ ವ್ಯತ್ಯಾಸ ಸಂಭವಿಸುವ ಸಾಧ್ಯತೆಗಳ ಬಗ್ಗೆ ದೂರಗಳು ಕೇಳಿಬರುತ್ತಿವೆ. ಆದರೆ ನಮ್ಮಲ್ಲಿ ಅಂತಹ ಯಾವುದೇ ರೀತಿಯ ಮೋಸ ಅಥವಾ ವಂಚನೆಗೆ ಅವಕಾಶವಿಲ್ಲ. ಗ್ರಾಹಕರು ನಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಧಕ್ಕೆ ಬರದಂತೆ ವ್ಯಾಪಾರ ನಡೆಸುತ್ತೇವೆ ಎಂದು ಮುರಳಿ ಹಾಗೂ ಪಾಟ್ಸ್ ಸುರೇಶ್ ಸ್ಪಷ್ಟಪಡಿಸಿದ್ದಾರೆ.



ಹಬ್ಬಕ್ಕೆ ಮಾಲೂರಿನಲ್ಲಿ ಸಜ್ಜಾದ ಅಂಗಡಿಗಳು

• ಉದಯವಾಹಿನಿ, ಮಾಲೂರು

ದೀಪಾವಳಿ ಹಬ್ಬದ ಪ್ರಯುಕ್ತ ನಗರದಲ್ಲಿ ಮಹಿಳೆಯರು ಹಬ್ಬದ ಖರೀದಿಯಲ್ಲಿ ತೊಡಗಿದ್ದರು. ನಗರಸಭೆ ರಸ್ತೆಯ ಬದಿಯ ಅಂಗಡಿಗಳಲ್ಲಿ ಹೂಗಳು, ಬಾಳೆಹಣ್ಣು, ನೋಮು ದಾರಗಳು ಸೇರಿದಂತೆ ಹಬ್ಬಕ್ಕೆ ಅಗತ್ಯವಿರುವ ಸಾಮಗ್ರಿಗಳನ್ನು ಖರೀದಿಸಲು ನೂಕುನುಗ್ಗಲು ದೃಶ್ಯವಿತ್ತು.

ಪ್ರತಿ ವರ್ಷದಂತೆ ಈ ವರ್ಷವೂ ಹೀಗೆ ಹಿಂದೂಗಳ ದೀಪಾವಳಿ ಹಬ್ಬವು ಸಂಭ್ರಮಪೂರ್ವಕವಾಗಿ ಆಚರಿಸಲಾಗುತ್ತಿದೆ. ಹಬ್ಬಕ್ಕೆ ಅಗತ್ಯವಿರುವ ಸಾಮಗ್ರಿಗಳ ಬೆಲೆ ಏರಿಕೆಯಾದರೂ, ಅಂಗಡಿಗಳ ಮುಂದೆ ಜನರು ನೆರದಿದ್ದರು. ಮಲ್ಲಿಗೆ, ಕನಕಾಂಬರ, ಗುಂಡು ಮಲ್ಲಿಗೆ ಬಟನ್ಸ್ ರೋಸ್ ಹೂವುಗಳು ಹೂಮಾಲೆಗಳಾಗಿ ಮಾರಾಟವಾಗುತ್ತಿದ್ದವು. ರೈತರು ತಮ್ಮ ತೋಟಗಳಲ್ಲಿ ಬೆಳೆದ ಸೇವಂತಿ, ಚಂಡು ಹೂವುಗಳು ಕಡಿಮೆ ಬೆಲೆಯಲ್ಲಿ ದೊರೆಯುತ್ತವೆ. ನಗರದಲ್ಲಿರುವ ಸರ್ಕಾರಿ ಬಾಲಕಿಯರ ಕಾಲೇಜು ಆವರಣದಲ್ಲಿ, ಜಿಲ್ಲಾಡಳಿತದ ಅನುಮತಿ ಪಡೆದು ನಿರ್ಮಾಣಗೊಂಡ ಅಂಗಡಿಗಳಲ್ಲಿ ಪಟಾಕಿ ಮಾರಾಟ ನಡೆಯುತಿತ್ತು.

ಇ.ಡಿ. ದಾಖಲಿಸಿದ್ದ ಪ್ರಕರಣ ರದ್ದು ನ್ಯಾಯಕ್ಕೆ ಸಂದ ಜಯ

ಪ್ರಕರಣದ ವಿಚಾರಣೆಗೆ ಇ.ಡಿ.ಗೆ ಅಧಿಕಾರವಿಲ್ಲ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿ, ಶಾಸಕರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಪಡಿಸಿದೆ

• ಉದಯವಾಹಿನಿ, ಮಾಲೂರು

1 ದಾಳಿ ನಡೆಸಿ ಮಾನಸಿಕ ಕಿರುಕುಳ ನೀಡಿತ್ತು
2 ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು
3 ಪ್ರಕರಣದ ವಿಚಾರಣೆಗೆ ಇ.ಡಿ.ಅಧಿಕಾರವಿಲ್ಲ

ಮಾಲೂರು ಶಾಸಕ ಕೆ.ವೈ. ನಂಜೇಗೌಡ ಅವರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ.) ದಾಖಲಿಸಿದ್ದ ಪ್ರಕರಣವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ರದ್ದುಪಡಿಸಿರುವುದು ನ್ಯಾಯಕ್ಕೆ ಸಂದ ಜಯವಾಗಿದೆ ಎಂದು ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ವಿಜಯನರಸಿಂಹ ಹೇಳಿದ್ದಾರೆ.

ನಗರದ ಮಾರುತಿ ಬಡಾವಣೆ ಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಮಾಲೂರು ಹಾಗೂ ಮಾಸ್ತಿ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ವತಿಯಿಂದ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. 2024ರಲ್ಲಿ ಬಿಜೆಪಿ ಸರ್ಕಾರವು ಇ.ಡಿ.ಯನ್ನು ದುರುಪಯೋಗಪಡಿಸಿಕೊಂಡು ಶಾಸಕ ಕೆ.ವೈ. ನಂಜೇಗೌಡ ಅವರ ನಿವಾಸದ ಮೇಲೆ ದಾಳಿ ನಡೆಸಿ ಮಾನಸಿಕ



ಕಿರುಕುಳ ನೀಡಿತ್ತು. ನಂತರ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ ಸಂವಿಧಾನಾತ್ಮಕವಾಗಿ ಈ ಪ್ರಕರಣದ ತನಿಖೆ ನಡೆಸುವ ಅಧಿಕಾರ ಇ.ಡಿ.ಗೆ ಇಲ್ಲವೆಂದು ಪ್ರಶ್ನಿಸಿ ಶಾಸಕರು ಹೈಕೋರ್ಟ್ ಮೊರೆ ಹೋಗಿದ್ದರು ಎಂದು ತಿಳಿಸಿದರು. ಕೋಮುಲ್ ನೇಮಕಾತಿ ಪ್ರಕರಣದ ವಿಚಾರಣೆಗೆ

ಕ್ಷೇತ್ರದ ಅಭಿವೃದ್ಧಿಗೆ ಶಾಸಕ ಕೆ.ವೈ. ನಂಜೇಗೌಡ ನೀಡಿರುವ ಕೊಡುಗೆ ಅಪಾರವಾಗಿದ್ದು, ಜನಪರ ಆಡಳಿತದಿಂದ ಕ್ಷೇತ್ರದ ಜನರಲ್ಲಿ ಹೆಮ್ಮೆ ಮೂಡಿದೆ. ಜನರಲ್ಲಿ ಗೊಂದಲ ಸೃಷ್ಟಿಸಲು ರಾಜಕೀಯ ಉದ್ದೇಶದಿಂದ ಪ್ರಕರಣಗಳನ್ನು ದಾಖಲಿಸುವುದು ಸರಿಯಲ್ಲ ಎಂದೂ ಹೇಳಿದರು.
-ಎಚ್.ಎಂ. ವಿಜಯನರಸಿಂಹ

ಇ.ಡಿ.ಗೆ ಅಧಿಕಾರವಿಲ್ಲ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿ, ಶಾಸಕರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಪಡಿಸಿದೆ. ನ್ಯಾಯಮೂರ್ತಿ ಅರುಣ್ ಅವರ ಏಕಸದಸ್ಯ ಪೀಠ ಈ ಆದೇಶ ಹೊರಡಿಸಿದ್ದು, ನ್ಯಾಯಾಂಗದ ಮೇಲಿನ ಸಾರ್ವಜನಿಕರ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ ಎಂದು ಹೇಳಿದರು.

2024ರ ಸೆಪ್ಟೆಂಬರ್ 12 ರಂದು ಶಾಸಕ ನಂಜೇಗೌಡ ಅವರ ನಿವಾಸ ಹಾಗೂ ಕೋಮುಲ್ ಕಚೇರಿ ಒಳಗಿನ ಮೇಲೆ ಇ.ಡಿ. ದಾಳಿ ನಡೆಸಿತ್ತು. ಕೋಮುಲ್‌ನ 76 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಹಾಗೂ ನಿರ್ದೇಶಕರು ಕೋಟ್ಯಂತರ ರೂಪಾಯಿ ಲಂಚ ಪಡೆದಿದ್ದಾರೆ ಎಂಬ ಆರೋಪದ ಹಿನ್ನೆಲೆ ತನಿಖೆ ಆರಂಭಿಸಲಾಗಿತ್ತು. ಈ ಪ್ರಕರಣವನ್ನು ರದ್ದುಪಡಿಸುವಂತೆ ಶಾಸಕರು

ಜನರಲ್ಲಿ ಗೊಂದಲ

ಶಾಸಕರು ಕಾನೂನುಬದ್ಧವಾಗಿ ನ್ಯಾಯಾಂಗದ ಹಾದಿಯಲ್ಲಿ ಹೋರಾಟ ನಡೆಸಿ ಮರು ಮತ ಎಣಿಕೆಯಲ್ಲಿಯೂ ತಮ್ಮ ಗೆಲುವು ಸಾಧಿಸಿದ್ದಾರೆ. ಕ್ಷೇತ್ರದ ಜನರಲ್ಲಿ ಉಂಟಾಗಿದ್ದ ಗೊಂದಲಗಳಿಗೆ ತೆರೆ ಬಿದ್ದಂತಾಗಿದೆ ಎಂದು ವಿಜಯ ನರಸಿಂಹ ಹೇಳಿದರು.

ನ್ಯಾಯಾಲಯದ ಮೊರೆ ಹೋಗಿದ್ದರು.ಮಾಲೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ. ಕೃಷ್ಣಪ್ಪ ಮಾತನಾಡಿ, ಶಾಸಕರ ವಿರುದ್ಧ ದಾಖಲಿಸಲಾಗಿದ್ದ ಇ.ಡಿ. ಪ್ರಕರಣವನ್ನು ನ್ಯಾಯಾಲಯ ರದ್ದುಪಡಿಸಿರುವುದು ಪ್ರತಿಪಕ್ಷಗಳಿಗೆ ನಡುಕ ಉಂಟುಮಾಡಿದೆ, ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡುತ್ತಿರುವ ಶಾಸಕರ ವಿರುದ್ಧ ವಿರೋಧ ಪಕ್ಷದವರು ರೂಪಿಸಿದ್ದ ಸಂಚು ಫಲಿಸಲಿಲ್ಲ.

ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ಸದಸ್ಯ, ಸೋಮಶೇಖರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಆಂಜಿನಪ್ಪ, ಉಪಾಧ್ಯಕ್ಷ ಅಶ್ವತ್ ರೆಡ್ಡಿ, ಚಾಕನಹಳ್ಳಿ ನಾಗರಾಜ್, ಪದ್ಮಪ್ಪ, ವಕೀಲ ರಮೇಶ್ ಬಾಬು, ಮಾಸ್ತಿ ಬ್ಲಾಕ್ ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ವಸಂತ್, ಮಂಜುನಾಥ್ ರೆಡ್ಡಿ, ಅಬ್ಬಯ್ಯಪ್ಪ, ನಾರಾಯಣರೆಡ್ಡಿ, ನಾಗರಾಜ್‌ರೆಡ್ಡಿ, ಪ್ರವೀಣ್, ಚಿಟ್ಟಿ ಮಂಜು,

ಅಂತರಾಳದಿಂದ.. EDITORIAL

ಕಾಗದಗಳ ಮೇಲೆ ಎಲ್ಲವೂ ಪ್ಲಸ್ಸು; ಫಲಿತಾಂಶ ಮಾತ್ರ ಮೈನಸ್ಸು!



ಸರಕಾರಿ ಅಂಕಿಅಂಶಗಳ ಮ್ಯಾಜಿಕ್ಕಿಗೆ ಯಾವುದೇ ತಲೆ-ಬುಡ ಇರುವುದಿಲ್ಲ ಎಂಬುದನ್ನು ಸಾಬೀತುಪಡಿಸುವುದಕ್ಕೆ ಇದೊಂದು 'ಕ್ಲಾಸಿಕ್ ಉದಾಹರಣೆ. 2002-2025ರ ನಡುವೆ ಭಾರತದ ಹಸಿರು ಆಚ್ಛಾದಿತ ಪ್ರದೇಶಗಳ ಪ್ರಮಾಣದಲ್ಲಿ ಶೇ. 5.6ರಷ್ಟು ಇಳಿಕೆ ಆಗಿದೆ. 2001ರಲ್ಲಿ ದೇಶದ ಭೂ ಪ್ರದೇಶದ ಶೇ. 36.95 ಭಾಗದಲ್ಲಿ ಹಸಿರು ತುಂಬಿದ್ದರೆ, ಅದರ ಪ್ರಮಾಣ ಈಗ 2025ರ ಹೊತ್ತಿಗೆ 31.35ಕ್ಕೆ ಇಳಿದಿದೆ ಎಂದು ಇತ್ತೀಚೆಗೆ ಬಿಡುಗಡೆಗೊಂಡ 'ಪ್ರೈಮೇಟ್ ಟ್ರೆಂಡ್ಸ್ ಅಧ್ಯಯನ ಕಂಡುಕೊಂಡಿದೆ. 'ಭಾರತದಾದ್ಯಂತ ಹಸಿರು ಆಚ್ಛಾದಿತ ಭಾಗದಲ್ಲಿ ಏರಿಳಿತಗಳು ಮತ್ತು ಬೇಸಗೆಯ ಉಷ್ಣತೆಯ ಮೇಲೆ ಅದರ ಪರಿಣಾಮಗಳ ವಿಶ್ಲೇಷಣೆ' ಎಂಬ ಹೆಸರಿನ ಅಧ್ಯಯನ ಇದು.

ಈ ಅಧ್ಯಯನದ ಕಾಣೆಗಳು ಸ್ವಲ್ಪ ವಿಲಕ್ಷಣ ಎಂದು ಮೇಲುನೋಟಕ್ಕೇ ಅನ್ನಿಸುತ್ತಿವೆ. ಏಕೆಂದರೆ, ಭಾರತದ ಅರಣ್ಯ (ಸಂರಕ್ಷಣೆ) ಕಾಯ್ದೆ 1980 ಮತ್ತದರ ನಿಯಮಗಳು ಹಾಗೂ ಮಾರ್ಗದರ್ಶಿಗಳ ಅನ್ವಯ, ದೇಶದ ಯಾವುದೇ ಅರಣ್ಯ ಭೂಪ್ರದೇಶವನ್ನು ಅರಣೇತರ ಉದ್ದೇಶಗಳಿಗೆಂದು ಬಳಸಿದಾಗ, ಎಷ್ಟು ಭೂಮಿಯನ್ನು ಆ ಅರಣೇತರ ಉದ್ದೇಶಕ್ಕೆ ಬಳಸಲಾಗಿದೆಯೋ ಅಷ್ಟೇ ಪ್ರಮಾಣದ ಭೂಮಿಯನ್ನು ಗುರುತಿಸಿ, ಅಲ್ಲಿ ಪರಿಹಾರ ರೂಪದಲ್ಲಿ ಅರಣ್ಯ ಪುನರ್‌ನಿರ್ಮಾಣ ಮಾಡಬೇಕು ಮತ್ತು ಅದರ ಸಂಪೂರ್ಣ ಖರ್ಚನ್ನು ಅರಣ್ಯ ಭೂಮಿ ಬಳಸಿದವರು ಭರಿಸಬೇಕು. ಈ ನಿಯಮ ಖಾಸಗಿಯವರಿಗೆ ಮಾತ್ರವಲ್ಲದೆ, ಸರಕಾರಗಳಿಗೂ ಅನ್ವಯ. ಅವರು ತಮ್ಮ ಯೋಜನೆಯ ಆರಂಭದ ಹಂತದಲ್ಲೇ ಈ ಕುರಿತು ಸಂಪೂರ್ಣ ವಿವರಗಳನ್ನು ಸಂಬಂಧಿತ ರಾಜ್ಯದ ಅರಣ್ಯ ಇಲಾಖೆಯ ಮೂಲಕ ಭಾರತ ಸರಕಾರದ ಪರಿಸರ ಮತ್ತು ಅರಣ್ಯ ಇಲಾಖೆಗೆ ಸಲ್ಲಿಸಿ, ಅನುಮೋದನೆ ಪಡೆಯಬೇಕು. ಒಂದು ವೇಳೆ ಅರಣೇತರ ಭೂಮಿ ಲಭ್ಯ ಇಲ್ಲದಿದ್ದರೆ ಅಥವಾ ಅದರ ಲಭ್ಯತೆ ಕಡಿಮೆ ಇದ್ದರೆ, ಕಳಪೆ ಗುಣಮಟ್ಟದ ಅರಣ್ಯ ಇರುವ ಭೂಮಿಯೊಂದನ್ನು ಆಯ್ಕೆ ಮಾಡಿ, ಅಲ್ಲಿ ಯೋಜನೆಗೆ ಬೇಕಾದ ಭೂಮಿಯ ದುಪ್ಪಟ್ಟು ಗಾತ್ರದ ಭೂಮಿಯನ್ನು ಪುನಃ ಅರಣೀಕರಣಕ್ಕೆ ಬಳಸಬೇಕಾಗುತ್ತದೆ.

> **ನೆಪದಲ್ಲಿ ಸರಕಾರಿ ಯೋಜನೆಗಳ ಫಲಾನುಭವಿಗಳಿಗೆ ಮತದಾರರ ಗುರುತಿನ ಚೀಟಿ, ಬಯೋಮೆಟ್ರಿಕ್ ಕಡ್ಡಾಯಗೊಳಿಸಲು ಮುಂದಾಗಿದೆ.**
> **ಕೇಂದ್ರ ಸರಕಾರದ ಈ ನಡೆ ಮೇಲ್ನೋಟಕ್ಕೆ ವಿವೇಚನಾರ್ಹ ಎಂದೆನಿಸಿದರೂ ಆಧಾರ್ ಕಾರ್ಡ್ ಯೋಜನೆ ವಿಫಲವಾಗಿರುವುದನ್ನು ಪರೋಕ್ಷವಾಗಿ ಸರಕಾರವೇ ಒಪ್ಪಿಕೊಂಡಂತಾಗಿದೆ.**

ಒಟ್ಟಿನಲ್ಲಿ, ರಾಜ್ಯ ಸರಕಾರಗಳು ತಮ್ಮ ವ್ಯಾಪ್ತಿಯ ಭೌಗೋಳಿಕ ಪ್ರದೇಶದಲ್ಲಿ ಶೇ. 33 ಅರಣ್ಯ ಭೂಮಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕಾದ ಕಾನೂನಾತ್ಮಕ ಹೊಣೆ ಹೊಂದಿವೆ. ದೇಶದಲ್ಲಿ ಪರಿಹಾರ ರೂಪದ ಅರಣೀಕರಣ ಯೋಜನೆ ಮಾತ್ರವಲ್ಲದೇ, ರಾಷ್ಟ್ರೀಯ ಅರಣೀಕರಣ ಯೋಜನೆ ನ್ಯಾಷನಲ್ ಮಿಷನ್ ಫಾರ್ ಗ್ರೀನ್ ಇಂಡಿಯಾ, ನಗರ ವನ ಯೋಜನೆ ಎಂದೆಲ್ಲ ಪ್ರತ್ಯೇಕ ಹಸಿರು ಆಚ್ಛಾದನೆ ಯೋಜನೆಗಳೂ ಇವೆ. ಪ್ರತೀ ವರ್ಷ ಈ ಯೋಜನೆಗಳಿಗೆಲ್ಲ 3,000 ಕೋಟಿಗೂ ಮಿಕ್ಕಿ ಹಣವನ್ನು ತೆಗೆದಿರಿಸಲಾಗುತ್ತಿದೆ.

ಸರಕಾರದ ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ವರದಿ 2023ರ ಪ್ರಕಾರ, ಈಗ ಭಾರತದಲ್ಲಿ 7,15,343 ಚದರ ಕಿ.ಮೀ. ಅರಣ್ಯ ಭೂಮಿ ಇದೆ ಮತ್ತು ಇದು ದೇಶದ ಒಟ್ಟು ಭೌಗೋಳಿಕ ವ್ಯಾಪ್ತಿಯ ಶೇ. 21.76ರಷ್ಟಾಗುತ್ತದೆ. ಸರಕಾರಗಳು ಕಾಗದ ಪತ್ರಗಳ ಮೇಲೆ ತೋರಿಸುವ ಈ ಎಲ್ಲಾ ದಾಖಲೆಗಳು ಮತ್ತು ವೈಜ್ಞಾನಿಕ ಅಧ್ಯಯನಗಳ ನಡುವಣ ಈ ಕಂದರ ಅರಣೀಕರಣದ ಹೆಸರಿನಲ್ಲಿ ನಡೆದಿರುವ ಭ್ರಷ್ಟಾಚಾರಗಳತ್ತಲೇ ನಮ್ಮ ಗಮನವನ್ನು ಸೆಳೆಯುತ್ತದೆ. ಪರ್ಯಾಯ ಅರಣೀಕರಣ ಮತ್ತು ಅರಣ್ಯ ಪ್ರಮಾಣ ಹೆಚ್ಚಿಸುವ ಯೋಜನೆಗಳು ಸೇರಿದಂತೆ ದೇಶದ ಒಟ್ಟು ಹಸಿರು ಆಚ್ಛಾದಿತ ಪ್ರದೇಶ ಹೆಚ್ಚಾಗುವುದು ಬಿಡಿ, ಇದ್ದಷ್ಟೇ ಉಳಿದೂ ಇಲ್ಲ ಬದಲಾಗಿ ಶೇ.5ರಷ್ಟು ಕಡಿಮೆ ಆಗಿದೆ ಎಂಬುದು ಆತಂಕಕಾರಿ ಸಂಗತಿ. ಈ ಆತಂಕಗಳು ಕೇವಲ ಆಡಳಿತಾತ್ಮಕ ಅವ್ಯವಸ್ಥೆಗೆ ಸೀಮಿತ ಅಲ್ಲ. ಇದೆಲ್ಲ ಅಂತಿಮವಾಗಿ ನಮ್ಮ ಬದುಕಿನ ಮೇಲೇ ನೇರ ಪರಿಣಾಮ ಬೀರುತ್ತಿದೆ ಎಂಬುದನ್ನು ಈ ಅಧ್ಯಯನ ಕಂಡುಕೊಂಡಿದೆ.

ರಾಮಾಯಣ



26. ರಾವಣನು ಕುಂಭಕರ್ಣನನ್ನು ಯುದ್ಧಕ್ಕೆ ಕಳುಹಿಸಿ

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ನಿರುತಿಯು ತನ್ನ ಆಲಯದಲ್ಲಿ ಕಂಗೆಟ್ಟ ಸುರನಾಯಕನೂ ಮುಂಗೆಟ್ಟು ಓಡಿದ. ಅಂದ ಮೇಲೆ ದೇವಾಸುರರಲ್ಲಿ ಯಾರು ತಾನೇ ಇವನ ಹೆಸರು ಹೇಳಿಯಾರು! ಇವನು ಪೌಲಸ್ತ್ಯನಾದ ಕುಂಭಕರ್ಣ, ತ್ರಿಲೋಕವೀರ, ವೀರಾಗ್ರಭವ. ಇತ್ತ, ದಾನವರು ವರಬಲದಿಂದ ಪರಾಕ್ರಮಿಗಳೆನಿಸಿದ್ದರೆ ಇವನು ಸಹಜ ಪರಾಕ್ರಮಿ. ಧುರವಿಜಯನಾದ ಇವನಿಗೆ ರಕ್ಕಸರಲ್ಲಿ ಸರಿದೊರೆಯೆನಿಸಿದ ವೀರರೇ ಇಲ್ಲ. ಇವನ ಸಾಹಸಕೃತ್ಯಗಳನ್ನು ಹೇಳುತ್ತೇನೆ, ಕೇಳು ಹುಟ್ಟಿನಿಂದಲೇ ಇವನಿಗೆ ಕೊನೆಯಿಲ್ಲದ ಹಸಿವು, ಅದರಿಂದಾಗಿ ಸಾವಿರಾರು ಪ್ರಾಣಿಗಳನ್ನು ಅನುದಿನವೂ ಕೊಂದು ತಿನ್ನುತ್ತಿದ್ದ ಇದರಿಂದ ಭೀತರಾದ ದೇವತತಿಯು ದೇವಪತಿಯ ಬಳಿ ಹೋಗಿ ಮೊರೆಪೊಕ್ಕರು ಅವನು ತನ್ನ ವಜ್ರಾಯುಧದಿಂದ ಹೊಡೆದರೆ ಈ ದೈತ್ಯನು ಕನಲಿ ಐರಾವತದ ದಂತವನ್ನು ಮುರಿದು ಅದನ್ನು ಹಿಡಿದುಕೊಂಡು ಬಂದು ಇಂದ್ರನನ್ನೇ ಹೊಡೆದು ನೆಲಕ್ಕುರುಳಿಸಿದ. ಇಂದ್ರನ ಅಪಜಯವನ್ನು ಕಂಡು ಅಮರಸಂತತಿಯು ನಡುಗಿತು, ಅವರೆಲ್ಲ ಸರಸಿಜಭವನೆಡೆಗೆ ಓಡಿ ಹೋಗಿ ಕುಂಭಕರ್ಣನ ಉಪಟಳವನ್ನು ವಿವರಿಸಿ ತಮ್ಮನ್ನು ಕಾಪಾಡಬೇಕೆಂದು ಬಿನ್ನವಿಸಿಕೊಂಡರು. ''ಈ ಪರಿಯಲ್ಲಿ ಜೀವಜಾತಗಳನ್ನು ಇವನು ತಿನ್ನುತ್ತ ಹೋದರೆ ಕೊನೆಗೆ ಭೂಮಿಯಲ್ಲಿ ಯಾವ ಪ್ರಾಣಿಯೂ ಉಳಿಯುವುದಿಲ್ಲ'' ಎಂದು ಹೇಳಿದರು. ಕಮಲೋದ್ಭವನು ಬಂದು ದೈತ್ಯೇಂದ್ರನ ಉಪಟಳದ ಪರಿಯನ್ನು ಕಂಡು ಬ್ರಹ್ಮನಿಗೂ ಹೆದರಿಕೆಯಾಯಿತು! ಇಂದ್ರ ಮೊದಲಾದ ದೇವತೆಗಳು ಬಣ್ಣಿಸುವ ರಕ್ಕಸನ ಉಪಟಳವು ಅತಿಶಯೋಕ್ತಿಯಲ್ಲವೆಂದು ತಿಳಿದ ಅವನು, ಕ್ಷಿತಿಯಲ್ಲಿರುವ ಜೀವಗಳನ್ನೆಲ್ಲ ನೀನು ಕೊಲ್ಲುತ್ತಿರುವುದರಿಂದ ನೀನು ಸತ್ತವನಂತೆ ದೀರ್ಘಕಾಲ ನಿದಿಸುತ್ತ ಬಿದ್ದಿರು'' ಎಂದು ಶಾಪವನ್ನಿತ್ತ. ಅಂದಿನಿಂದ ಅವನನ್ನು ಗಾಢನಿದ್ರೆ ಆವರಿಸಿದೆ. ತನ್ನ ತಮ್ಮನು ನಿದ್ರಾವಶನಾಗಿ ಮೈ ಮೇಲೆ ಪ್ರಜ್ಞೆಯಿಲ್ಲದೆ ಬಿದ್ದಿರುವುದನ್ನು ಕಂಡ ದಶಕಂಠನು ಕಲ್ಪರುದ್ರನಂತೆ ಕೋಪದಿಂದ ಬ್ರಹ್ಮನನ್ನು ಮೂದಲಿಸಿ, ''ನಿನ್ನ ಮೊಮ್ಮಗನಿಗೆ ನೀನೇ ಈ ರೀತಿಯ ಘೋರಶಾಪವನ್ನೀಯುವರೇ? ನಿಡುಗಾಲ ಮರವೊಂದನ್ನು ಪೋಷಿಸಿ ಬೆಳೆಸಿ ಕೊಡಲಿಯಿಂದ ಕತ್ತರಿಸಿಬಿಡುವಂತೆ ಕರುಣೆಯಿಲ್ಲದೆ ಹೀಗೆ ಮಾಡಬಹುದೇ? ನೀನು ಕೊಟ್ಟ ಶಾಪವು ಹುಸಿಯಾಗದೆಂಬುದು ದಿಟ, ಅದನ್ನು ನೀನು ವಾಪಸು ಪಡೆಯಲಾರೆಯೆಂಬುದೂ ಸತ್ಯವೇ. ಆದ್ದರಿಂದ ಅವನ ನಿದ್ರೆಯ ಅವಧಿಯನ್ನೂ, ಎಚ್ಚರದ ಅವಧಿಯನ್ನೂ ನಿಗದಿಗೊಳಿಸು'' ಎಂದು ಕೇಳಿಕೊಂಡ. ರಾವಣನ ಪ್ರಾರ್ಥನೆಯನ್ನು ಮನ್ನಿಸಿದ ಬ್ರಹ್ಮದೇವನು ನಿದ್ರೆಯ ಅವಧಿಯನ್ನು ಆರು ತಿಂಗಳೆಂದೂ, ಆನಂತರ ಒಂದು ದಿನದ ಮಟ್ಟಿಗೆ ಎಚ್ಚರದಿಂದಿದ್ದು ಎಲ್ಲೆಡೆ ಓಡಾಡಿ ಜೀವಜಾತಗಳನ್ನು ತಿಂದು ಮುಕ್ಕಿ ಮತ್ತೆ ಆರು ತಿಂಗಳು ನಿದ್ರಿಸಿರಲಿ ಎಂದು ಕರುಣಿಸಿದ. ಹೀಗೆಂದು ವಿಭೀಷಣನು ಕುಂಭಕರ್ಣನ ವಿಷಯವನ್ನು ವಿವರಿಸಲು ರಘುನಾಥನು ಅದನ್ನೆಲ್ಲ ಕೇಳಿ, ಹೆದರಿ ನಡುಗುತ್ತ ನಿಂತಿದ್ದ ವನಚರರಿಗೆ ಅಭಯವನ್ನಿತ್ತು ಮತ್ತೆ ಎಂದಿನಂತೆಯೇ ನೀಲ ನಳ ಗಜ ಗವಯ ಸುಗೀವರು ಲಂಕಾಪಟ್ಟಣದ ಬೇರೆ ಬೇರೆ ಅಗಸೆ ಬಾಗಿಲುಗಳನ್ನು ಕಾಯುವಂತೆ ಏರ್ಪಡಿಸಿದ. ಇತ್ತ ಈ ಕಡೆ ಅಸುರೇಂದ್ರ ಪಟ್ಟಣದಲ್ಲಿ ಕುಂಭಶ್ರವಣನನ್ನು ಎಚ್ಚರಿಸಿದ ರಕ್ಕಸಸಮೂಹವು ಅವನ ಎಡಬಲಗಳಲ್ಲಿ ನಡೆಯುತ್ತ ಮಂದರಪರ್ವತವನ್ನು ನಡೆಸಿಕೊಂಡು ಬರುವಂತೆ ಬಂದರು. ಮತ್ತ ಗಜದಂತೆ ಸಾವಧಾನದಿಂದ ನಡೆದು ಬಂದ ದಾನವನು ರಕ್ಕಸರಾಯನ ಅರಮನೆಯನ್ನು ಹೊಕ್ಕು, ಪಟ್ಟವಣೆಯಲ್ಲಿ ದೇವೇಂದ್ರನಂತೆ ಕುಳಿತಿದ್ದ ತನ್ನ ಅಣ್ಣನನ್ನು ನೋಡಿದ. ಅವನು ನಡೆದುಬಂದ ರೀತಿಗೆ ಧರಣಿಯೇ ನಡುಗುತ್ತಿರಲು ಬರುತ್ತಿದ್ದ ದೈತ್ಯೋತ್ತಮನನ್ನು ಕಂಡ ಅಸುರಪತಿಯು ಇದಿರೆದ್ದು ಬಂದು ಪ್ರೀತಿಯಿಂದ ಅವನನ್ನು ಅಪ್ಪಿಕೊಂಡು ಮೃದುನುಡಿಗಳಿಂದ ಉಪಚರಿಸಿದ. ಅಗ್ರಜನಿಗೆ ನಮಸ್ಕರಿಸಿ, ಅವನ ಸೂಚನೆಯಂತೆ ಒಂದು ಭದ್ರಾಸನದಲ್ಲಿ ಕುಳಿತು ಕೈಗಳನ್ನು ಮುಗಿಯುತ್ತ ಅಪರಿಮಿತ ಪ್ರೀತಿಯಿಂದ, ''ದೇವ, ಯಾವ ಕಾರಣದಿಂದ ನೀನು ನನ್ನನ್ನು ಇಷ್ಟು ಆತುರದಿಂದ ಎಚ್ಚರಗೊಳಿಸಲು ಹೇಳಿದೆ? ಯಾರ ದೆಸೆಯಿಂದ ನಿನಗೆ ತೊಂದರೆಯುಂಟಾಗಿದೆ? ರವಿಶಶಿಗಳ ದಾರಿಯನ್ನಾದರೂ ತಪ್ಪಿಸಿಯೇನು, ಯಮನ ಜೀವವನ್ನು ಕಳೆದೇನು, ಅಮರಸಂತತಿಯನ್ನು ಈಗಲೇ ಬಂಧಿಸಿ ಕರೆತಂದೇನು.

ಮುಂದುವರಿಯುವುದು...



ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

33

ಸಮಯ ಮುಗಿಯುತ್ತಿದ್ದರೆ ಆತುರ ಬೇಡ

ಮೊದಲು ಆಳವಾಗಿ ಉಸಿರೆಳೆಯಿರಿ. ಆತುರಪಟ್ಟರೆ ಸಮಯ ಮತ್ತಷ್ಟು ವೇಗವಾಗಿ ಜಾರುತ್ತದೆ. ಉತ್ತರ ಪತ್ರಿಕೆಯನ್ನು ಒಮ್ಮೆ ಕಣ್ಣಾಡಿಸಿ. ಯಾವ ಪ್ರಶ್ನೆ ಅರ್ಧಕ್ಕೆ ನಿಂತಿದೆ, ಯಾವುದಕ್ಕೆ ಅಂಕ ಹೆಚ್ಚು ಎಂಬುದನ್ನು ನಿರ್ಧರಿಸಿ. ಎಲ್ಲಾ ಪ್ರಶ್ನೆಗಳಿಗೂ ಸಮಾನ ಸಮಯ ಹಂಚುವುದು ಜಾಣತನವಲ್ಲ, ಹೆಚ್ಚು ಅಂಕದ ಪ್ರಶ್ನೆಗೆ ಆದ್ಯತೆ ನೀಡಿ.

ಇನ್ನೂ ಹತ್ತು ನಿಮಿಷ ಮಾತ್ರ ಎಂಬ ಮೇಲ್ವಿಚಾರಕರ ಎಚ್ಚರಿಕೆ ಕೇಳುತ್ತಲೇ ಕೈ ನಡುಗುತ್ತದೆ, ಲೇಖನಿಯ ವೇಗ ಹೆಚ್ಚುತ್ತದೆ, ಅಕ್ಷರಗಳು ಅಸ್ಪಷ್ಟವಾಗುತ್ತವೆ. ಏನನ್ನು ಬರೆದಿದ್ದೇವೆ ಎಂಬ ಅರಿವೂ ಇರುವುದಿಲ್ಲ. ಆತುರದಲ್ಲಿ ಸುಲಭ ಪ್ರಶ್ನೆಗಳಿಗೂ ತಪ್ಪು ಉತ್ತರ ಮೂಡುತ್ತದೆ. ಸಮಯ ಕಡಿಮೆಯಿರುವಾಗಲೇ ಹೆಚ್ಚು ಪ್ರಮಾದಗಳು ಸಂಭವಿಸುತ್ತವೆ.

ಈಗ ದೀರ್ಘ ವಾಕ್ಯಗಳನ್ನು ಬಿಟ್ಟು ಚುಕ್ಕೆ ರೂಪದಲ್ಲಿ ಬರೆಯಿರಿ. ಮುಖ್ಯಾಂಶಗಳನ್ನು ಮಾತ್ರ ನಮೂದಿಸಿ, ಕೈಬರಹ ಸ್ಪಷ್ಟವಾಗಿರಲಿ. ಮೌಲ್ಯಮಾಪಕರಿಗೆ ಸುಲಭವಾಗಿ ಅರ್ಥವಾಗುವಂತೆ ಇರಲಿ. ಹೊಸ ಪ್ರಶ್ನೆಯನ್ನು ಆರಂಭಿಸುವ ಬದಲು ಅರ್ಧಕ್ಕೆ ಉಳಿದ ಉತ್ತರವನ್ನು ಪೂರ್ಣಗೊಳಿಸಿ. ಕೊನೆಯ ಎರಡು ನಿಮಿಷದಲ್ಲಿ ಹೆಸರು, ನೋಂದಣಿ ಸಂಖ್ಯೆ, ಪ್ರಶ್ನೆ ಸಂಖ್ಯೆಗಳನ್ನು ಒಮ್ಮೆ ಪರಿಶೀಲಿಸಿ. ನೆನಪಿಡಿ, ಕೊನೆಯ ನಿಮಿಷವೂ ಅಂಕವನ್ನು ತರಬಲ್ಲದು. ಆತುರದಲ್ಲಿ ಪುಟ ಹರಿದರೆ ಮಾತ್ರ ಫಲ ಶೂನ್ಯ. ಶಾಂತ ಚಿತ್ತದಿಂದ ಬರೆದರೆ ಅಲ್ಪ ಅವಧಿಯಲ್ಲೂ ಉತ್ತಮ ಫಲ ಸಿಗುತ್ತದೆ. ಸಮಯ ಕಡಿಮೆ ಇದ್ದರೂ, ಮನಸ್ಸು ನಿಮ್ಮ ಹಿಡಿತದಲ್ಲಿರಲಿ.



ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ದೀಪಾರತಿ ಮತ್ತು ತೈಲಾಭ್ಯಂಜನ

ಬೆಂಗಳೂರಿನ ಜಯನಗರದ 5 ನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ1008 ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಆದೇಶ ಅನುಗ್ರಹದೊಂದಿಗೆ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್,ಕೆ ವಾದಿಂದ್ರಾಚಾರ್ಯರ ಮಾರ್ಗದರ್ಶನದಲ್ಲಿ 'ದೀಪಾವಳಿ ಹಬ್ಬದ ನರಕ ಚತುರ್ದಶಿಯ ಈ ಶುಭದಿನ ದಂದು ಬೆಳಗಿನ ಜಾವ 5-30 ಕ್ಕೆ ವಿಶೇಷ ಸಂಕಲ್ಪದೊಂದಿಗೆ ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಿ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನದ ಮುಂಭಾಗದಲ್ಲಿ ತುಳಸಿ ಪೂಜೆಯನ್ನು ನೆರವೇರಿಸಿ ತದನಂತರ ದೀಪಾರತಿ ಯೊಂದಿಗೆ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ತೈಲಾಭ್ಯಂಜನಸೇವೆಯ ಅಭಿಷೇಕವು ವಿಶೇಷವಾಗಿ ಅರ್ಚಕರಿಂದ ನೆರವೇರಿತು ಎಂದು ಪುರೋಹಿತರಾದ ಶ್ರೀ ಯುತ ನಂದಕಿಶೋರ ಆಚಾರ್ಯರು ತಿಳಿಸಿದರು, ಈ ತೈಲಾ ಅಭ್ಯಂಜನದ ಸೇವೆಯ ನಂತರ ಗುರು ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ಸಮರ್ಪಿಸಿದ ತೈಲ ಅಭ್ಯಂಜನದ ಎಣ್ಣೆಯನ್ನು ಭಕ್ತರಿಗೆ ಪ್ರಸಾದ ರೂಪವಾಗಿ ಕೊಡಲಾಗಿ ಭಕ್ತರು ಆ ತೈಲವನ್ನು (ಶಿರಸ್ಸಿನಲ್ಲಿ) ತಲೆಯಲ್ಲಿ ಧಾರಣೆ ಮಾಡಿ ಕೊಂಡು ಶ್ರೀಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು,ವಿಶೇಷ ಅಲಂಕಾರದೊಂದಿಗೆ ಉತ್ಸವಗಳು ನೆರವೇರಿತು.



ಮಗುವಿನ ಆರೋಗ್ಯಕ್ಕೆ ಆಯುರ್ವೇದ ಸ್ಪರ್ಶ: ಪೌಷ್ಟಿಕತೆ, ವ್ಯಾಧಿಕ್ಷಮತ್ವದ ಸುಧಾರಣೆಗೆ ಪೂರಕ ಆರೈಕೆ

ಮಕ್ಕಳಲ್ಲಿ ಹಸಿವು ಕಡಿಮೆಯಾಗುವುದು, ದೇಹದ ತೂಕ ಇಳಿಕೆಯಾಗುವುದು ಹಾಗೂ ಪದೇ ಪದೆ ಶೀತ ಮತ್ತು ಕೆಮ್ಮು ಕಾಣಿಸಿಕೊಳ್ಳುವುದು ಪೋಷಕರಲ್ಲಿ ಆತಂಕ ಮೂಡಿಸುವ ಸಾಮಾನ್ಯ ಆರೋಗ್ಯ ಸಮಸ್ಯೆಗಳಾಗಿವೆ. ಇಂತಹ ಸಮಸ್ಯೆಗಳನ್ನು ಆರಂಭದಲ್ಲಿಯೇ ಗುರುತಿಸಿ ಸೂಕ್ತ ಆರೈಕೆ ನೀಡುವುದು ಮಗುವಿನ ಬೆಳವಣಿಗೆ ಮತ್ತು ಆರೋಗ್ಯದ ದೃಷ್ಟಿಯಿಂದ ಬಹಳ ಮುಖ್ಯ. ವೈದ್ಯರನ್ನು ಭೇಟಿ ಆಯುರ್ವೇದದ ದೃಷ್ಟಿಕೋನದಲ್ಲಿ ಹಸಿವು ಕಡಿಮೆಯಾಗುವುದನ್ನು ಅಗ್ನಿಮಾಂದ್ಯ ಎಂದು ಪರಿಗಣಿಸಲಾಗುತ್ತದೆ. ಪದೇ ಪದೆ ಅನಾರೋಗ್ಯಕ್ಕೆ ಒಳಗಾಗುವುದನ್ನು ಗಮನದಲ್ಲಿಟ್ಟುಕೊಂಡು ಮಗುವಿನ ವ್ಯಾಧಿಕ್ಷಮತ್ವ ದೇಹದ ರೋಗಗಳನ್ನು ಎದುರಿಸುವ ಒಟ್ಟಾರೆ ಆರೋಗ್ಯದ ಸುಧಾರಣೆ ಚಿಕಿತ್ಸೆಯ ಪ್ರಮುಖ ಉದ್ದೇಶಗಳಾಗಿ ಪರಿಗಣಿಸಲಾಗುತ್ತದೆ. ಚಿಕಿತ್ಸೆಯ ಭಾಗವಾಗಿ ಸರ್ವಾಂಗ ಅಭ್ಯಂಗ ದೇಹಕ್ಕೆ ಔಷಧೀಯ ತೈಲದಿಂದ ಮಸಾಜ್ ನಾಡಿ ಸ್ವೇದ ಹಾಗೂ ಘೃತದಿಂದ ಮಾತ್ರಾ ಬಸ್ತಿ ವಿಧಾನಗಳನ್ನು ಅನುಸರಿಸಲಾಗುತ್ತದೆ. ಈ ಪ್ರಕರಣವು ಮಕ್ಕಳ ಆರೋಗ್ಯ ಆರೈಕೆಯಲ್ಲಿ ಜೀರ್ಣಶಕ್ತಿ, ಪೌಷ್ಟಿಕತೆ ಮತ್ತು ವ್ಯಾಧಿಕ್ಷಮತ್ವದ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಆಯುರ್ವೇದ ಚಿಕಿತ್ಸೆಯ ಪೂರಕ ಪಾತ್ರವನ್ನು ವೈಜ್ಞಾನಿಕವಾಗಿ ದೃಢೀಕರಿಸಲು ಮಕ್ಕಳಲ್ಲಿ ಕಂಡುಬರುವ ಪೌಷ್ಟಿಕಾಂಶದ ಕೊರತೆ, ಬೆಳವಣಿಗೆಯ ಸಮಸ್ಯೆಗಳು ಚಿಕಿತ್ಸಾ ಮಾರ್ಗದರ್ಶನಕ್ಕಾಗಿ ಮೈಸೂರಿನ ಜೆಎಸ್ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಕೌಮಾರಭೃತ್ಯ ವಿಭಾಗ (ಮಕ್ಕಳ ವಿಭಾಗ) ದಲ್ಲಿ ತಜ್ಞ ವೈದ್ಯರ ಸಮಾಲೋಚನೆ ಪಡೆಯಬಹುದು ಎಂದು ವೈದ್ಯರು ತಿಳಿಸಿದ್ದಾರೆ.


ದೀಪಾವಳಿ ಹಬ್ಬ ಬಂದಿತು ನೋಡಿ



ಸಾಮಾಜಿಕ ಕಳಕಳಿ

ಹೆಚ್.ಎಸ್. ಪ್ರತಿಮಾ ಹಾಸನ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

ಹಸಿರನು ಉಳಿಸಿ ಪರಿಸರದಲ್ಲಿ
ಆಚರಿಸೋಣ ಹಬ್ಬವನು ಜೊತೆಯಲ್ಲಿ
ಕಹಿಯನು ಎಲ್ಲಾ ಕಳೆಯುತ ನಾವು
ಒಂದಾಗಿ ಕುಣಿಯುತ ಆಚರಿಸುವೆವು.....
ಪರಿಸರದ ಮಾಲಿನ್ಯವ ಮಾಡದೆ
ಮಣ್ಣಿನ ದೀಪ ಹಚ್ಚುತಲಿ ನೆಡೆಯುವ
ಬಣ್ಣ ಬಣ್ಣದ ಕನಸುಗಳ ಕಾಣುತಲಿ
ನನಸು ಮಾಡಲು ಕೆಲಸವ ಮಾಡುವ.....
ಅರಿಶಿಣ, ಕುಂಕುಮ, ಹಚ್ಚುತಲಿ
ಬಳೆ, ಸೀರೆಯನ್ನು ತೊಡುತಲಿ
ಹೊಸ ಬಟ್ಟೆ ಮಕ್ಕಳಿಗೆ ತೊಡಿಸುತಲಿ



ಲಕ್ಷ್ಮೀ ಪೂಜೆಯ ಮಾಡುತ
ಸಂಭ್ರಮಿಸುತಲಿ.....
ಜ್ಞಾನ ಜ್ಯೋತಿಯ ಹಚ್ಚುತಲೆಲ್ಲೆಡೆ
ಬದುಕಿನ ಸಾಗರ ಸಂತಸದಲಿ ನಡೆ
ಏನೇ ಬಂದರು ನಗುತಾ ಸ್ವೀಕರಿಸಿ
ಇತರರಿಗೆ ಪ್ರೇರಣದಾಯಕವಾಗಿರುತಲಿ......
ಮನೆಯಲ್ಲಿ ವಿಧವಿಧವಾದ ಭೋಜನವು
ಸವಿಯುತ ನಡೆಯುವ ಸಂಭ್ರಮಿಸುತಲಿ
ಎಲ್ಲರೂ ಒಟ್ಟಿಗೆ ಹಬ್ಬವ ಆಚರಿಸುತಲಿ
ನಗುನಗುತ ಜೀವನವ ಮಾಡುವುದ
ಕಲಿ........

ಸಮಸ್ತ ಎಲ್ಲಾ ಸಹೃದಯ ಹಿರಿಯ ಮತ್ತು ಕಿರಿಯ ಸಮಾನ ಮನಸ್ಕರುಳ್ಳ ನಾಗರೀಕರಿಗೆ ಬೆಳಕಿನ ಹಬ್ಬ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ
ವಿಮರ್ಶಕರು

ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು ಹಾಗೂ ಈ ಹಬ್ಬದ ವಿಶೇಷತೆ,ವೈಶಿಷ್ಟ್ಯ ಹಾಗೂ ಮಹತ್ವ ಅರಿಯುವುದು ಮುಖ್ಯ

ಸಮಸ್ತ ಎಲ್ಲಾ ಸಹೃದಯ ಹಿರಿಯ ಮತ್ತು ಕಿರಿಯ ಸಮಾನ ಮನಸ್ಕರುಳ್ಳ ನಾಗರೀಕರಿಗೆ ಬೆಳಕಿನ ಹಬ್ಬ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು. ಕಾಯಾ-ವಾಚಾ-ಮನಸಾ ಹಾಗೂ ಅಂತರಂಗ ಮತ್ತು ಬಹಿರಂಗ ಶುದ್ಧಿಯಿಂದ ಹಾಗೂ ಸತ್ಯ ಶುದ್ಧ ಕಾಯಕದಿಂದ ಮನಸ್ಸಿನಲ್ಲಿರುವ ಕಲ್ಮಶವನ್ನು ಸ್ವಚ್ಛಗೊಳಿಸಿಕೊಂಡು ಕುಟುಂಬ,ಸಮಾಜ,ರಾಷ್ಟ್ರ ಹಾಗೂ ಇಡೀ ಜಗತ್ತಿಗೆ ಬೆಳಕು ಮಾಡುವುದೇ ಬೆಳಕಿನ ಹಬ್ಬ ದೀಪಾವಳಿಯ ಹಬ್ಬದ ವಿಶೇಷತೆ.

ಅಸತೋಮಾ ಸದ್ಗಮಯ, ತಮಸೋಮ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ. ಅಂದರೆ ಅಸತ್ಯದಿಂದ ಸತ್ಯದ ನಡೆಗೆ, ಕತ್ತಲಿನಿಂದ ಬೆಳಕಿನಡೆಗೆ,ಹಾಗೆ ಮೃತ್ಯುವಿನಿಂದ ಅಮೃತದ ನಡೆಗೆ. ಬೆಳಕು ಅಂದರೆ ಜ್ಞಾನ, ಕತ್ತಲು ಅಂದರೆ ಅಜ್ಞಾನ.ಒಟ್ಟಾರೆ ಅಜ್ಞಾನದಿಂದ ಜ್ಞಾನದೆಡೆಗೆ ಎಂಬ ಅರ್ಥ 06ನೇ ಶತಮಾನದ ಭಗವಾನ್ ಬುದ್ಧನ ಕಾಲಕ್ಕೆ ಪರಿಚಯವಾದದ್ದು ಈ ದೀಪೋಕ್ತಿ.

ಜ್ಞಾನವೇ ಬೆಳಕು ಅಜ್ಞಾನವೇ ಕತ್ತಲು, ಜ್ಞಾನವೇ ಸ್ವರ್ಗ ಅಜ್ಞಾನವೇ ನರಕ, ಜ್ಞಾನವೇ ಸತ್ಯ ಅಜ್ಞಾನವೇ ಅಸತ್ಯ, ಜ್ಞಾನವೇ ಶಕ್ತಿ ಅಜ್ಞಾನವೇ ನಿಶ್ಶಕ್ತಿ, ಜ್ಞಾನವೇ ಶಾಂತಿ ಅಜ್ಞಾನವೇ ಅಶಾಂತಿ, ಜ್ಞಾನವೇ ಧರ್ಮ ಅಜ್ಞಾನವೇ ಅಧರ್ಮ, ಜ್ಞಾನವೇ ಜೀವ ಅಜ್ಞಾನವೇ ನಿರ್ಜೀವ.

ಎಂಬೆಲ್ಲಾ ಅರ್ಥ ಕೊಡುವ ದೀಪಾವಳಿಯ ವಿಶೇಷ ಮತ್ತು ವೈಶಿಷ್ಟ್ಯ. ಅಜ್ಞಾನವನ್ನು ಓಡಿಸುವುದೇ ಜ್ಞಾನದ ಕೆಲಸ ಅದೇ ರೀತಿ ಕತ್ತಲನ್ನು ಓಡಿಸುವುದೇ ಬೆಳಕಿನ ಕೆಲಸ ಆದರೆ ಜಗತ್ತಿನಲ್ಲಿ ಕತ್ತಲು ಇಲ್ಲದಿದ್ದರೆ ಬೆಳಕಿನ ವೈಶಿಷ್ಟ್ಯ ಮತ್ತು ಮಹತ್ವ ಹಾಗೂ ವಿಶೇಷತೆ ಇರುವುದಿಲ್ಲ.ಕತ್ತಲು ಇದ್ದಾಗ ಮಾತ್ರ ಬೆಳಕಿಗೆ ಗೌರವ ಮತ್ತು ಪ್ರಾಧಾನ್ಯ.ಮಾನವ ಬೆಳಕನ್ನು ಪಸರಿಸುವುದಕ್ಕೆ ಮೂರು ಮಾರ್ಗಗಳಿವೆ ಅಂದರೆ ನಾವು ದೀಪದಿಂದ ದೀಪ ಹಚ್ಚಬೇಕು ಅಥವಾ ನಾವೇ ದೀಪವಾಗಬೇಕು ಅಥವಾ ಹಚ್ಚಿರುವ ದೀಪದ ಎದುರು ನಾವು ಕನ್ನಡಿಯಾಗಿ ಪ್ರತಿ ಫಲಿಸಬೇಕು.

ನಾವುಗಳು ಈ ರೀತಿಯಾಗಿ ಜೀವನದ ಬದುಕಿನಲ್ಲಿ ಎಲ್ಲಾ ಆಯಾಮಗಳಲ್ಲೂ ಬೆಳಕಿನ ಮಾರ್ಗಗಳನ್ನು ಅರ್ಥಮಾಡಿಕೊಂಡು ಒಳ್ಳೆಯ ಮಾನವನಾಗಿ ಬದುಕಿದರೆ ದೀಪಾವಳಿ ಹಬ್ಬವನ್ನು ಆಚರಿಸುವುದರಲ್ಲಿ ಅರ್ಥವಿರುತ್ತದೆ. ಜೀವನದಲ್ಲಿ ಕನ್ನಡಿ ಮತ್ತು ನೆರಳಿನಂತಹ ಗೆಳೆಯರು ಬೇಕು ಕಾರಣ ಕನ್ನಡಿ ಯಾವತ್ತೂ ಸುಳ್ಳು ಹೇಳುವುದಿಲ್ಲ ಅದೇ ರೀತಿ ನೆರಳೂ ಸಹ ಯಾವತ್ತೂ ನಮ್ಮನ್ನು ಕೈಬಿಟ್ಟು ಹೋಗುವುದಿಲ್ಲ.

> **ಸತ್ಯದಿಂದ ಧರ್ಮಕ್ಕೆ ರಕ್ಷೆ,**
> **ಯೋಗದಿಂದ ವಿದ್ಯೆಗೆ ರಕ್ಷೆ,**
> **ಶುದ್ಧತೆಯಿಂದ ರೂಪಕ್ಕೆರಕ್ಷೆ ಕಡೆಗೆ ಒಳ್ಳೆಯ ನಡತೆಯಿಂದ ಕುಲಕ್ಕೆ ರಕ್ಷೆ.ದೀಪಾವಳಿ ಹಬ್ಬ ಮಾಡಿ ಆದರೆ ಪಟಾಕಿ ಸಿಡಿಸಿ ಶಬ್ದ ಮಾಡಬೇಡಿ ಅದರಿಂದ ಅನುಕೂಲ ಇಲ್ಲದ ಅನಾನುಕೂಲವೇ ಜಾಸ್ತಿ.**
> **ಮೊದಲಿಗೆ ಮನುಕುಲವನ್ನು ಪ್ರೀತಿಸಿ, ಪ್ರಾಣಿ ಪಕ್ಷಿಗಳನ್ನ ಪ್ರೀತಿಸಿ, ಪ್ರಕೃತಿಯನ್ನು ಪ್ರೀತಿಸಿ, ನಿಸರ್ಗ ಸೊಬಗನ್ನು ಪ್ರೀತಿಸಿ ಮಿಗಿಲಾಗಿ ನಿಮ್ಮ ಬಾಳಿಗೆ ಬೆಳಕಾದ ತಂದೆ ತಾಯಿಗಳನ್ನು ಗುರುಹಿರಿಯರನ್ನ ಹಾಗೂ ನೆರವಾದವರನ್ನು ಮೊದಲಿಗೆ ಪ್ರೀತಿಸಿ ನಂತರ ದೀಪಾವಳಿ ಹಬ್ಬವನ್ನು ಪಟಾಕಿ ಸಿಡಿಸದೇ ಆಚರಿಸಿಕೊಳ್ಳಿ ಅದಕ್ಕೆ ಒಂದು ಅರ್ಥವಿದೆ.**
> **ಅದರಿಂದ ಆಗುವ ದುಷ್ಪರಿಣಾಮಗಳು:**
> **ಮಾನಸಿಕ ಒತ್ತಡ, ಶಬ್ದ ಮಾಲಿನ್ಯ,ವಾಯುಮಾಲಿನ್ಯ, ಬಿಪಿ ಮತ್ತು ಶುಗರ್ ಹಾಗೂ ಕಿಡ್ನಿ ಪೀಡಿತರಿಗೆ, ಶ್ವಾಸಕೋಶ ಕಾಯಿಲೆ ಹಾಗೂ ಅಸ್ತಮಾ ಇರುವವರಿಗೆ ವಿಷಕಾರಕ.**

ಜ್ಞಾನಕ್ಕಿಂತಲೂ ಕಲ್ಪನಾಶಕ್ತಿ ದೊಡ್ಡದು. ಜ್ಞಾನಕ್ಕೆ ಸೀಮಿತ ಪರಿಧಿ ಇದೆ ಆದರೆ ಕಲ್ಪನೆ ಮತ್ತು ಭ್ರಮೆ ವಿಶ್ವವನ್ನೇ ಮೀರಿದ್ದು. ಮಿಗಿಲಾಗಿ ಪ್ರಾಣ ಹಾನಿ, ಅಂಗವಿಕಲರಾಗುವುದು ಹಾಗೂ ಕಣ್ಣು ಹಾನಿಯಾಗುವುದು ಒಟ್ಟಾರೆ ಪಟಾಕಿ ಸುಡುವುದು ಒಂದೇ ಮತ್ತು ನೋಟಿನ ಹಣವನ್ನು ಸುಡುವುದು ಈ ಎರಡೂ ಸಹ ಒಂದೇ ಅಲ್ಲವೇ !

ದೇಶದಲ್ಲಿ ಪಟಾಕಿಯನ್ನು ಸಿಡಿಸುವವರು ಕೇವಲ ಶೇಕಡ 10 ಭಾಗ ಮಾತ್ರ ಇರಬಹುದು ಇನ್ನುಳಿದ ಶೇಕಡ 90 ಭಾಗ ಅದರ ಬಗ್ಗೆ ಒಲವೇ ಇರುವುದಿಲ್ಲ. ಆದ್ದರಿಂದ ಪಟಾಕಿ ಉತ್ಪಾದನೆ ಮಾಡುವುದು, ಮಾರಾಟ ಮಾಡುವುದು, ಸರ್ಕಾರ ಪಟಾಕಿಗಳನ್ನು ಮಾರಲು ಅನುಮತಿ ಕೊಡುವುದು, ಪಟಾಕಿಗಳನ್ನ ರಫ್ತು ಮಾಡುವುದು ಅಥವಾ ಆಮದು ಮಾಡಿಕೊಳ್ಳುವುದು ಒಳ್ಳೆಯ ಬೆಳವಣಿಗೆಯಲ್ಲ ಎಂಬುದು ಕೆಲವು ಸಜ್ಜನರ ಅಭಿಪ್ರಾಯವಾಗಿದೆ.

ಈ ಪಟಾಕಿ ಅನಾಹುತಗಳ ಬಗ್ಗೆ ಜನಜಾಗೃತಿ ಮೂಡಿಸುವುದು ಸರ್ವರ ದೃಷ್ಟಿಯಲ್ಲೂ ಒಳ್ಳೆಯದು. ಸಮಸ್ತ ಎಲ್ಲಾ ವಿವಿಧ ಧರ್ಮದ ಸಜ್ಜನ ಹಿರಿಯ ಹಾಗೂ ಕಿರಿಯ ಸಮಾನ ಮನಸ್ಕರುಳ್ಳ ನಾಗರೀಕರಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

ಐದು ದಿನಗಳ ಕಾಲ ಆಚರಿಸುವ ಬೆಳಕಿನ ಹಬ್ಬ, ದೀಪಾವಳಿ

ದೀಪಾವಳಿ ಹಬ್ಬವು ಭಾರತದ ವಿವಿಧ ಪ್ರದೇಶಗಳಲ್ಲಿ ವಿಭಿನ್ನ ರೀತಿಯ ಐತಿಹಾಸಿಕ ಮತ್ತು ಪೌರಾಣಿಕ ಘಟನೆಗಳ ಸ್ಮರಣಾರ್ಥವಾಗಿ ಐದು ದಿನಗಳ ಕಾಲ ಆಚರಿಸಲ್ಪಡುವ ಬೆಳಕಿನ ಹಬ್ಬವಾಗಿದೆ. ದೀಪಾವಳಿ ಹಬ್ಬಕ್ಕೆ ಸಂಬಂಧಿಸಿದಂತೆ ಹಲವಾರು ವಿಶೇಷ ಕಥೆಗಳು ಪ್ರಚಲಿತದಲ್ಲಿವೆ. **ಅವುಗಳಲ್ಲಿ ಮುಖ್ಯವಾದ ಕೆಲವು ಕಥೆಗಳನ್ನು ಇಲ್ಲಿ ನೀಡಲಾಗಿದೆ:** 1. ಶ್ರೀರಾಮನ ಅಯೋಧ್ಯೆಗೆ ವಿಜಯದ ಮರಳುವಿಕೆ (ದೀಪಾವಳಿ ಅಮಾವಾಸ್ಯೆಯಂದು) ದೀಪಾವಳಿ ಆಚರಣೆಯ ಹಿಂದಿರುವ ಅತ್ಯಂತ ಜನಪ್ರಿಯ ಮತ್ತು ವಿಸ್ತೃತ ಕಥೆ ಇದು.

ಹಿಂದೂ ಮಹಾಕಾವ್ಯವಾದ ರಾಮಾಯಣದ ಪ್ರಕಾರ, ಅಯೋಧ್ಯೆಯ ರಾಜಕುಮಾರ ಶ್ರೀರಾಮನು ತನ್ನ ತಂದೆ ದಶರಥನ ಮಾತಿನಂತೆ 14 ವರ್ಷಗಳ ವನವಾಸಕ್ಕೆ ಹೋಗಬೇಕಾಯಿತು. ಅವನೊಂದಿಗೆ ಪತ್ನಿ ಸೀತೆ ಮತ್ತು ಸಹೋದರ ಲಕ್ಷ್ಮಣರು ಸಾಗಿದರು. ವನವಾಸದ ಸಮಯದಲ್ಲಿ, ಲಂಕೆಯ ರಾಕ್ಷಸ ರಾಜ ರಾವಣನು ಸೀತೆಯನ್ನು ಅಪಹರಿಸುತ್ತಾನೆ.

ಶ್ರೀರಾಮನು ಹನುಮಂತ, ಸುಗ್ರೀವ ಮತ್ತು ವಾನರ ಸೇನೆಯ ಸಹಾಯದಿಂದ ರಾವಣನ ವಿರುದ್ಧ ಭೀಕರ ಯುದ್ಧ ಮಾಡಿ, ಅಂತಿಮವಾಗಿ ರಾವಣನನ್ನು ಸಂಹರಿಸಿ ಸೀತೆಯನ್ನು ರಕ್ಷಿಸುತ್ತಾನೆ. 14 ವರ್ಷಗಳ ಕಠಿಣ ವನವಾಸ ಮತ್ತು ರಾವಣನ ಮೇಲಿನ ವಿಜಯದ ನಂತರ, ಶ್ರೀರಾಮ, ಸೀತಾ ಮತ್ತು ಲಕ್ಷ್ಮಣರು ಅಯೋಧ್ಯೆಗೆ ಮರಳಿದಾಗ, ಇಡೀ ರಾಜ್ಯವು ಸಂತೋಷದಿಂದ ಮತ್ತು ಉಲ್ಲಾಸದಿಂದ ತುಂಬಿಹೋಯಿತು. ಅಂದಿನ ರಾತ್ರಿ ಅಮಾವಾಸ್ಯೆಯ ಕರಾಳ ಕತ್ತಲು ಆವರಿಸಿತ್ತು. ಪ್ರಜೆಗಳು ತಮ್ಮ ರಾಜನ ವಿಜಯದ ಸಂಕೇತವಾಗಿ ಮತ್ತು ಅವರನ್ನು ಸ್ವಾಗತಿಸಲು, ಮನೆ-ಮನೆಗಳಲ್ಲಿ ಹಾಗೂ ಬೀದಿಗಳಲ್ಲಿ ಸಾವಿರಾರು ಮಣ್ಣಿನ ದೀಪಗಳನ್ನು (ದೀಪಾವಳಿ) ಬೆಳಗಿಸಿದರು. ಈ ಘಟನೆಯು ಕತ್ತಲೆಯ ಮೇಲೆ ಬೆಳಕಿನ ವಿಜಯ (ಅಜ್ಞಾನದ ಮೇಲೆ ಜ್ಞಾನದ), ಮತ್ತು ದುಷ್ಟರ ಮೇಲೆ ಧರ್ಮದ ವಿಜಯವನ್ನು ಸೂಚಿಸುತ್ತದೆ. ಈ ಸಂಭ್ರಮದ ಸ್ವಾಗತವೇ ದೀಪಾವಳಿ ಹಬ್ಬವಾಗಿ ಮಾರ್ಪಟ್ಟಿತು. 2.ನರಕಾಸುರನ ವಧೆ (ನರಕ ಚತುರ್ದಶಿಯಂದು) ದೀಪಾವಳಿಯ ಎರಡನೇ ದಿನವನ್ನು 'ನರಕ ಚತುರ್ದಶಿ' ಎಂದು ಆಚರಿಸಲಾಗುತ್ತದೆ.

ಪ್ರಾಚೀನ ಕಾಲದಲ್ಲಿ, ನರಕಾಸುರ ಎಂಬ ಶಕ್ತಿಶಾಲಿ ಮತ್ತು ದುಷ್ಟ ರಾಕ್ಷಸನಿದ್ದನು. ಇವನು ಭೂದೇವಿಯ ಮಗನಾಗಿದ್ದರಿಂದ ಅತಿ ಹೆಚ್ಚು ಶಕ್ತಿಯನ್ನು ಹೊಂದಿದ್ದನು ಮತ್ತು ತಾನು ದೇವತೆಗಳಿಂದ ಅಥವಾ ಮನುಷ್ಯರಿಂದ ಸಾಯುವುದಿಲ್ಲ ಎಂಬ ಅಹಂಕಾರದಿಂದ ಮೆರೆಯುತ್ತಿದ್ದನು. ನರಕಾಸುರನು ತನ್ನ ದುಷ್ಕೃತ್ಯಗಳಿಂದ ಜನರಿಗೆ ಬಹಳ ಹಿಂಸೆ ನೀಡುತ್ತಿದ್ದನು. ಅವನು ಇಂದ್ರನ ಮಾತೃದೇವತೆಯ ಕಿವಿಯೋಲೆಗಳನ್ನು ಕದ್ದು, ಸುಮಾರು 16,000 ರಾಜಕುಮಾರಿಯರನ್ನು ಸೆರೆಯಲ್ಲಿಟ್ಟಿದ್ದನು.

ಭೂಲೋಕದ ಜನರು ಅವನ ದೌರ್ಜನ್ಯಗಳಿಂದ ರೋಸಿಹೋಗಿ ಶ್ರೀಕೃಷ್ಣನಲ್ಲಿ ಮೊರೆ ಹೋದರು. ಶ್ರೀಕೃಷ್ಣನು, ತನ್ನ ಪತ್ನಿ ಸತ್ಯಭಾಮೆಯೊಂದಿಗೆ (ಇವಳು ಭೂದೇವಿಯ ಇನ್ನೊಂದು ಅವತಾರವೆಂದು ನಂಬಿಕೆ) ನರಕಾಸುರನೊಂದಿಗೆ ಹೋರಾಡಿ, ಅಂತಿಮವಾಗಿ ಅವನನ್ನು ಕೊಂದನು. ನರಕಾಸುರನ ಸಾವಿನಿಂದ ಲೋಕಕ್ಕೆ ನೆಮ್ಮದಿ ಸಿಕ್ಕಿತು ಮತ್ತು ಸೆರೆಯಲ್ಲಿದ್ದ ರಾಜಕುಮಾರಿಯರನ್ನು ಬಿಡುಗಡೆಗೊಳಿಸಲಾಯಿತು. ಈ ವಿಜಯದ ದಿನವನ್ನು ಜನರು ದೀಪಗಳನ್ನು ಬೆಳಗಿಸಿ, ಪಟಾಕಿಗಳನ್ನು ಸಿಡಿಸಿ ಆಚರಿಸಿದರು. ನರಕ ಚತುರ್ದಶಿಯಂದು, ಮುಂಜಾನೆ ಎಣ್ಣೆ ಸ್ನಾನ ಮಾಡುವ ಪದ್ಧತಿಯಿದೆ, ಇದು ರಾಕ್ಷಸನನ್ನು ಸಂಹರಿಸಿದ ನಂತರ ಶ್ರೀಕೃಷ್ಣನು ತೆಗೆದುಕೊಂಡ ಶುದ್ಧೀಕರಣ ಸ್ನಾನವನ್ನು ಸಂಕೇತಿಸುತ್ತದೆ. ಇದು ಹಿಂಸೆಯ ಮೇಲೆ ದೈವತ್ವದ ಜಯವನ್ನು ನೆನಪಿಸುತ್ತದೆ.

3.ಲಕ್ಷ್ಮಿ ದೇವಿಯ ಆವಿರ್ಭಾವ (ಧನತ್ರಯೋದಶಿ ಮತ್ತು ಲಕ್ಷ್ಮಿ ಪೂಜೆಯಂದು) ದೀಪಾವಳಿಯ ಪ್ರಮುಖ ಉದ್ದೇಶಗಳಲ್ಲಿ ಸಂಪತ್ತು ಮತ್ತು ಸಮೃದ್ಧಿಯ ದೇವತೆಯಾದ ಲಕ್ಷ್ಮಿ ದೇವಿಯ ಪೂಜೆಯೂ ಒಂದು.

ಪುರಾಣಗಳ ಪ್ರಕಾರ, ದೇವತೆಗಳು ಮತ್ತು ರಾಕ್ಷಸರು ಅಮರತ್ವಕ್ಕಾಗಿ ಕ್ಷೀರಸಾಗರವನ್ನು (ಸಮುದ್ರ ಮಂಥನ) ಮಥನ ಮಾಡಿದಾಗ, ಈ ದಿನ (ಧನತ್ರಯೋದಶಿ) ಲಕ್ಷ್ಮಿ ದೇವಿಯು ಸಂಪತ್ತು ಮತ್ತು ಐಶ್ವರ್ಯವನ್ನು ಹೊತ್ತ ಕಮಲದ ಮೇಲೆ ಆಸೀನಳಾಗಿ ಆವಿರ್ಭವಿಸಿದಳು. ಕೆಲವು ನಂಬಿಕೆಗಳ ಪ್ರಕಾರ, ದೀಪಾವಳಿಯ ರಾತ್ರಿ, ಲಕ್ಷ್ಮಿ ದೇವಿಯು ಭೂಲೋಕದಲ್ಲಿ ಸಂಚರಿಸುತ್ತಾಳೆ ಮತ್ತು ಯಾರು ತಮ್ಮ ಮನೆಗಳನ್ನು ಸ್ವಚ್ಛವಾಗಿಟ್ಟು, ದೀಪಗಳಿಂದ ಅಲಂಕರಿಸಿರುತ್ತಾರೋ, ಅಂತಹ ಮನೆಗಳಲ್ಲಿ ನೆಲೆಸಿ ಅವರಿಗೆ ಸಂಪತ್ತು, ಅದೃಷ್ಟ ಮತ್ತು ಸಮೃದ್ಧಿಯನ್ನು ಕರುಣಿಸುತ್ತಾಳೆ.

ಮನೆಗಳನ್ನು ಸ್ವಚ್ಛಗೊಳಿಸಿ ದೀಪಗಳನ್ನು ಹಚ್ಚುವುದು, ಲಕ್ಷ್ಮಿ ದೇವಿಯನ್ನು ಆಹ್ವಾನಿಸುವ ಸಂಕೇತವಾಗಿದೆ. ದೀಪವು ಸಂಪತ್ತು ಮತ್ತು ಜ್ಞಾನದ ಸಂಕೇತವಾದರೆ, ಕತ್ತಲು ಬಡತನ ಮತ್ತು ಅಜ್ಞಾನವನ್ನು ಸೂಚಿಸುತ್ತದೆ. 4.ಬಲಿ ಚಕ್ರವರ್ತಿ ಮತ್ತು ವಾಮನ ಅವತಾರ (ಬಲಿಪಾಡ್ಯಮಿಯಂದು) ದೀಪಾವಳಿಯ ನಾಲ್ಕನೇ ದಿನವನ್ನು ಬಲಿ ಚಕ್ರವರ್ತಿಯ ಸ್ಮರಣಾರ್ಥ 'ಬಲಿಪಾಡ್ಯಮಿ' ಅಥವಾ 'ಬಲಿ ಪ್ರತಿಪದ' ಎಂದು ಆಚರಿಸಲಾಗುತ್ತದೆ.ಬಲಿ ಚಕ್ರವರ್ತಿಯು ರಾಕ್ಷಸ ಕುಲಕ್ಕೆ ಸೇರಿದವನಾಗಿದ್ದರೂ, ದಾನಗುಣದಲ್ಲಿ ಮತ್ತು ಧರ್ಮನಿಷ್ಠೆಯಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದನು. ಆತನ ಶಕ್ತಿಯಿಂದ ದೇವತೆಗಳೂ ಅಂಜುವಂತಾಗಿತ್ತು ಮತ್ತು ಅವನು ಇಡೀ ಮೂರು ಲೋಕಗಳ ಅಧಿಪತಿಯಾಗಲು ಯತ್ನಿಸುತ್ತಿದ್ದನು.

ಬಲಿಯ ಅತಿಯಾದ ಶಕ್ತಿ ಮತ್ತು ದಾನಧರ್ಮದ ಗುಣವನ್ನು ಪರೀಕ್ಷಿಸಲು, ವಿಷ್ಣುವು ಕುಬ್ಜ ಬ್ರಾಹ್ಮಣನಾದ ವಾಮನ ರೂಪದಲ್ಲಿ ಬಂದು ಬಲಿಯ ಬಳಿ ದಾನ ಕೇಳುತ್ತಾನೆ. ಕೇವಲ ಮೂರು ಹೆಜ್ಜೆ ಭೂಮಿಯನ್ನು ನೀಡುವಂತೆ ಕೇಳುತ್ತಾನೆ. ಬಲಿಯ ಗುರು ಶುಕ್ರಚಾರ್ಯರು ತಡೆದರೂ, ಬಲಿಯು ತನ್ನ ಮಾತನ್ನು ಉಳಿಸಿಕೊಳ್ಳಲು ವಾಮನನಿಗೆ ಭೂಮಿಯನ್ನು ದಾನ ನೀಡುತ್ತಾನೆ. ತಕ್ಷಣ, ವಾಮನನು ವಿಶ್ವರೂಪವನ್ನು ತೆಗೆದುಕೊಂಡು, ಒಂದು ಹೆಜ್ಜೆಯಲ್ಲಿ ಭೂಮಿಯನ್ನು, ಇನ್ನೊಂದು ಹೆಜ್ಜೆಯಲ್ಲಿ ಸ್ವರ್ಗವನ್ನು ಆವರಿಸುತ್ತಾನೆ. ಮೂರನೇ ಹೆಜ್ಜೆ ಇಡಲು ಜಾಗವಿಲ್ಲದಿದ್ದಾಗ, ಧರ್ಮನಿಷ್ಠ ಬಲಿಯು ತನ್ನ ಮಾತನ್ನು ಉಳಿಸಿಕೊಳ್ಳಲು, ತನ್ನ ತಲೆಯನ್ನೇ ಮೂರನೇ ಹೆಜ್ಜೆಯನ್ನಾಗಿ ಅರ್ಪಿಸುತ್ತಾನೆ. ಬಲಿಯ ನಿಸ್ವಾರ್ಥತೆ ಮತ್ತು ದಾನಗುಣಕ್ಕೆ ಮೆಚ್ಚಿದ ವಿಷ್ಣುವು ಆತನನ್ನು ಪಾತಾಳ ಲೋಕದ ಅಧಿಪತಿಯನ್ನಾಗಿ ಮಾಡಿ, ಪ್ರತಿ ವರ್ಷ ಈ ದಿನ ಭೂಲೋಕಕ್ಕೆ ಬಂದು ತನ್ನ ಪ್ರಜೆಗಳೊಂದಿಗೆ ಇರಲು ವರವನ್ನು ನೀಡುತ್ತಾನೆ.

ಈ ದಿನ ಬಲಿಯ ರಾಜತ್ವವನ್ನು ಸ್ಮರಿಸಿ ಪೂಜೆ ಮಾಡಲಾಗುತ್ತದೆ. ಇದು ಅಹಂಕಾರದ ಮೇಲೆ ದೈವಿಕ ಶಕ್ತಿಯ ವಿಜಯ ಮತ್ತು ದಾನಗುಣದ ಮಹತ್ವವನ್ನು ಸೂಚಿಸುತ್ತದೆ.

ಈ ಎಲ್ಲಾ ಕಥೆಗಳ ಮೂಲ ಸಾರಾಂಶವೆಂದರೆ ಕತ್ತಲೆಯ ಮೇಲೆ ಬೆಳಕಿನ ವಿಜಯ, ಅಂದರೆ ಅಜ್ಞಾನದ ಮೇಲೆ ಜ್ಞಾನದ, ಮತ್ತು ದುಷ್ಟಶಕ್ತಿಗಳ ಮೇಲೆ ಧರ್ಮದ ವಿಜಯ. ಈ ಕಾರಣದಿಂದಲೇ ದೀಪಾವಳಿಯನ್ನು 'ಬೆಳಕಿನ ಹಬ್ಬ' ಎಂದು ಕರೆಯಲಾಗುತ್ತದೆ. ಒಟ್ಟಿನಲ್ಲಿ ದೀಪಾವಳಿಯ ಪ್ರತಿಯೊಂದು ದಿನವೂ ಈ ಕಥೆಗಳ ಮೂಲಕ ಬದುಕಿನಲ್ಲಿ ಬೆಳಕು, ಸತ್ಯ, ಸಮೃದ್ಧಿ ಮತ್ತು ಒಳ್ಳೆಯತನದ ಮಹತ್ವವನ್ನು ಸಾರುತ್ತದೆ.



ಷ.ಬ್ರ.ಡಾ.ಅಭಿನವ ರಾಮಲಿಂಗ ಶ್ರೀ

ಮತ್ತೊಮ್ಮೆ ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳು. ಈ ದೀಪಾವಳಿಯು ಎಲ್ಲಾ ಭಕ್ತರ ಬಾಳಿನಲ್ಲಿ ಬೆಳಕನ್ನು ತರಲಿ

ಉಡುಪಿ ಜನರ ಸಮಸ್ಯೆ ಪರಿಹಾರಕ್ಕೆ ಆದ್ಯತೆ ಇರಲಿ

ಪ್ರಜಾಸೇವಾ ಸಭೆಗಳಲ್ಲಿ ಬರುವ ಅರ್ಜಿಗಳಿಗೆ ಹಿಂಬರಹ ನೀಡುವುದರೊಂದಿಗೆ ಅದಕ್ಕೆ ಪರಿಹಾರ ನೀಡುವ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಬೇಕು.

• **ಉದಯವಾಹಿನಿ ಉಡುಪಿ:**



ಉದಯವಾಹಿನಿ ಚಿತ್ರ

ಜನಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದಾಗಿದ್ದು, ಅವುಗಳನ್ನು ಆದ್ಯತೆಯ ಮೇರೆಗೆ ಬಗೆಹರಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ಕಾರ್ಕಳ ಶಾಸಕ ಸುನೀಲ್ ಕುಮಾರ್ ಹೇಳಿದರು.

ಕಾರ್ಕಳ ತಾಲ್ಲೂಕಿನ ಎರ್ಲಪಾಡಿ ಗ್ರಾಮ ಪಂಚಾಯಿತಿ ಸಭಾಭವನದಲ್ಲಿ, ಪ್ರಜಾಸೇವಾ ಇಲಾಖೆ ತಾಲ್ಲೂಕು ಆಡಳಿತದ ವತಿಯಿಂದ ಅಜೆಕಾರು ಹೋಬಳಿಗೆ ಸಂಬಂಧಿಸಿದಂತೆ ಹಮ್ಮಿಕೊಂಡಿದ್ದ ಹೋಬಳಿ ಮಟ್ಟದ ಪ್ರಜಾಸೇವಾ ಅಂದೋಲನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

1: ಹೋಬಳಿ ಮಟ್ಟದ ಪ್ರಜಾಸೇವಾ ಅಂದೋಲನ

2: ಸಮಸ್ಯೆಗಳನ್ನು ಅರಿಯಲು ಉತ್ತಮ ಅವಕಾಶ

3: ಗಂಭೀರವಾಗಿ ಪರಿಗಣಿಸಿ ನ್ಯಾಯ ಒದಗಿಸಬೇಕು

ಪ್ರಜಾಸೇವಾ ಆಂದೋಲನವು ಜನರ ಸಮಸ್ಯೆಗಳನ್ನು ಅರಿಯಲು ಉತ್ತಮ ಅವಕಾಶ. ಸಭೆಗಳಲ್ಲಿ ಬರುವ ಅರ್ಜಿಗಳನ್ನು ಇಲಾಖೆಯ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ನ್ಯಾಯ ಒದಗಿಸಬೇಕು, ಆಗ ಪ್ರಜಾಸೇವೆ ಯಶಸ್ಸು ಸಾಧಿಸಲಿದೆ ಎಂದರು. ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ ಮಾತನಾಡಿ ಸರ್ವೆ, ಕಂದಾಯ, ಅರಣ್ಯ ಇಲಾಖೆ, ಆಧಾರ್, ರೇಶನ್ ಕಾರ್ಡ್ ಸೇರಿದಂತೆ ವಿವಿಧ ಸಮಸ್ಯೆಗಳು ಹೆಚ್ಚಾಗಿ ಈ ಸಭೆಗಳಲ್ಲಿ ದಾಖಲಾಗುತ್ತಿದ್ದು, ಅವುಗಳನ್ನು ಆದ್ಯತೆಯ ಮೇಲೆ ವಿಲೇವಾರಿ ಮಾಡಬೇಕು ಎಂದರು. ಪ್ರಜಾಸೇವಾ ಸಭೆಗಳಲ್ಲಿ ಬರುವ ಅರ್ಜಿಗಳಿಗೆ ಹಿಂಬರಹ ನೀಡುವುದರೊಂದಿಗೆ ಅದಕ್ಕೆ ಪರಿಹಾರ ನೀಡುವ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಬೇಕು ಎಂದು ಹೇಳಿದರು. ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಮಾತನಾಡಿ, ಪ್ರಜಾಸೇವಾ ಆಂದೋಲನ ಸಭೆಗಳನ್ನು ಪ್ರತಿ ಶನಿವಾರ ಆಯೋಜಿಸುವ ಮೂಲಕ ಸಾರ್ವಜನಿಕರ ಅಹವಾಲುಗಳಿಗೆ ಪರಿಹಾರ ಕಲ್ಪಿಸುವ ಕೆಲಸ ಮಾಡಲಾಗುತ್ತಿದೆ. ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಐ.ಪಿ.ಜಿ.ಆರ್.ಎಸ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಎಂದರು. ಸಭೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ 23 ಅರ್ಜಿಗಳು ಸ್ವೀಕೃತವಾಗಿದ್ದವು. ಕಾರ್ಕಳ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಜಿತ್ ಹೆಗ್ಡೆ, ಜಿಲ್ಲಾ ಪಂಚಾಯಿತಿ ಸಿ.ಇ.ಒ ಪ್ರತೀಕ್ ಬಾಯಲ್, ಎಎಸ್‌ಪಿ ಸುಧಾಕರ್ ನಾಯಕ್, ಕಾರ್ಕಳ ಉಪ ವಿಭಾಗದ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿ ಇಶಿತಾ ಗುಪ್ತ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಎಸ್.ಎಸ್ ಕಾದ್ರೊಳ್ಳಿ, ಕುಂದಾಪುರ ವಿಭಾಗದ ಎಸಿಎಫ್ ಶಶಿಕಾಂತ್ ವಿಭುದೆ, ತಹಶೀಲ್ದಾರ್ ರಾಕೇಶ್ ಪ್ರಾನ್ಸಿಸ್ ಬ್ರಿಟೊ ಉಪಸ್ಥಿತರಿದ್ದರು. ಪಿಡಿಒ ಪ್ರತಾಪ್ ಶೆಟ್ಟಿ ಸ್ವಾಗತಿಸಿದರು. ಉಪ ತಹಶೀಲ್ದಾರ್ ನಳಿನಿ ನಿರೂಪಿಸಿದರು. ಇ.ಒ ಪ್ರಶಾಂತ್ ಸಿ. ರಾವ್ ವಂದಿಸಿದರು.

ಪ್ರತಿ ಬುಧವಾರ ಬೆಳಿಗ್ಗೆ 9 ರಿಂದ 11 ರ ವರೆಗೆ ತಹಶೀಲ್ದಾರ್, ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರ ವರೆಗೆ ಉಪವಿಭಾಗಾಧಿಕಾರಿ ಹಾಗೂ ಮಧ್ಯಾಹ್ನ 3 ಗಂಟೆಯಿಂದ ಸಂಜೆ 5 ರ ವರೆಗೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಅರ್ಜಿಗಳನ್ನು ಪರಿಶೀಲನೆ ಮಾಡಲಾಗುತ್ತಿದೆ ಎಂದು ತಿಳಿಸಿದರು. -ಶಾಸಕ ಸುನೀಲ್ ಕುಮಾರ್

ಯಾವುದೇ ಅರ್ಜಿಗಳನ್ನು ಇಲಾಖೆಯಿಂದ ಇಲಾಖೆಗೆ ವರ್ಗಾಯಿಸುವ ಕೆಲಸ ಅಧಿಕಾರಿಗಳು ಮಾಡಬಾರದು. ಸಾಮಾನ್ಯ ಜನ ನೀಡುವ ಅಹವಾಲುಗಳಿಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದನ ನೀಡಿ ಪರಿಹರಿಸಬೇಕು ಎಂದು ಹೇಳಿದರು.

'ಒಂದು ವಾರ ಮುಂಚಿತ ಅರ್ಜಿ ಸಲ್ಲಿಸಿ' ಸಾರ್ವಜನಿಕರು ಸಭೆ ನಡೆಯುವ ಒಂದು ವಾರದ ಮುಂಚಿತವಾಗಿ ಅರ್ಜಿಗಳನ್ನು ಗ್ರಾಮ ಪಂಚಾಯಿತಿಗಳಿಗೆ ಸಲ್ಲಿಸಿದ್ದಲ್ಲಿ, ಪಂಚಾಯಿತಿ ಸಿಬ್ಬಂದಿ ಟೋಕನ್ ಸಂಖ್ಯೆ ನೀಡುವರು. ಸಾರ್ವಜನಿಕರು ಸಭೆ ನಡೆಯುವ ದಿನದಂದು ಟೋಕನ್ ಸಲ್ಲಿಸಿದ್ದಲ್ಲಿ ಅಧಿಕಾರಿಗಳು ಮುಂಚಿತವಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅನುಕೂಲವಾಗಲಿದೆ ಎಂದು ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಹೇಳಿದರು. ಸಾರ್ವಜನಿಕರಿಂದ ಬರುವ ಅಹವಾಲುಗಳನ್ನು ಸರಿಯಾದ ರೀತಿಯಲ್ಲಿ ವರ್ಗೀಕರಣ ಮಾಡಬೇಕು. ಅಧಿಕಾರಿಗಳು ಸಾರ್ವಜನಿಕರಿಗೆ ನೀಡುವ ಉತ್ತರವನ್ನು ವೈಯಕ್ತಿಕವಾಗಿ ಪರಿಶೀಲಿಸಿದ್ದು, ಬಂದಂತಹ 2,400 ಕ್ಕೂ ಅಧಿಕ ಅರ್ಜಿಗಳಲ್ಲಿ 1,700 ಅರ್ಜಿಗಳನ್ನು ವಾಪಾಸ್ ಅಧಿಕಾರಿಗಳಿಗೆ ನೀಡಲಾಗಿದೆ ಎಂದರು.

ಉದಯ ವಾಹಿನಿ

ದೀಪಾವಳಿ ವಿಶೇಷಾಂಕ

ಸೋಮವಾರ 09 ನವೆಂಬರ್ 2026 | 05

ಮಿನಿ ನ್ಯೂಸ್

ಆಕ್ಷೇಪಾರ್ಹ ಪೋಸ್ಟರ್ ಅಂಟಿಸಿದ ಪ್ರಕರಣ, ಪೊಲೀಸರಿಗೆ ದೂರು


ಉದಯವಾಹಿನಿ ಚಿತ್ರ

• **ಉದಯವಾಹಿನಿ ಶಿವಮೊಗ್ಗ:**

ಜಿಲ್ಲಾ ಬಿಜೆಪಿ ಕಚೇರಿಗೆ ಪೋಸ್ಟರ್ ಅಂಟಿಸಿದ ಪ್ರಕರಣ ಸಂಬಂಧ ಬಿಜೆಪಿ ಜಿಲ್ಲಾಧ್ಯಕ್ಷ ಜಗದೀಶ್ ನೇತೃತ್ವದಲ್ಲಿ ದೊಡ್ಡಪೇಟೆ ಪೊಲೀಸರಿಗೆ ದೂರು ನೀಡಲಾಗಿದ್ದು, ಆರೋಪಿಗಳನ್ನು ತಕ್ಷಣವೇ ಬಂಧಿಸಬೇಕೆಂದು ಮನವಿ ಮಾಡಲಾಯಿತು. ಜಿಲ್ಲಾ ಬಿಜೆಪಿ ಕಚೇರಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರ ಶಿವಮೊಗ್ಗದ ಮನೆಗೆ ನಾವು ಗಾಂಧೀಜಿ ಮಕ್ಕಳು, ಬಿಜೆಪಿಯವರು ಕಳ್ಳ ನನ್ಮಕ್ಕಳು ಎಂಬ ಪೋಸ್ಟರ್ ಅಂಟಿಸಿರುವ ಘಟನೆಯನ್ನು ಜಿಲ್ಲಾ ಬಿಜೆಪಿ ಖಂಡಿಸಿದೆ. ಬಿಜೆಪಿ ಜಿಲ್ಲಾಧ್ಯಕ್ಷ ಜಗದೀಶ್ ಮಾತನಾಡಿ, ಇಂದು ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಚೇರಿಗೆ ಕಾಂಗ್ರೆಸ್ ಕಾರ್ಯಕರ್ತರು ಕರಪತ್ರ ಅಂಟಿಸಿರುವುದು ಖಂಡನೀಯ. ಶಿವಮೊಗ್ಗ ಜಿಲ್ಲೆ ಬಿಜೆಪಿ ಇದನ್ನು ಖಂಡಿಸುತ್ತದೆ. ಮುಖ್ಯಮಂತ್ರಿಗಳು ಹಾಗೂ ಗೃಹ ಮಂತ್ರಿಗಳು ಇದಕ್ಕೆ ಉತ್ತರ ಕೊಡಲೇಬೇಕು. ರಾಜ್ಯದಲ್ಲಿ ಕಾನೂನು ಸುವ್ಯಸ್ಥೆ ಹದಗೆಟ್ಟಿದೆ ಎಂಬುದಕ್ಕೆ ಇದೊಂದು ಉದಾಹರಣೆ. ಭಾರತೀಯ ಜನತಾ ಪಾರ್ಟಿ ಕಾರ್ಯಕರ್ತರು ಸುಮ್ಮನೆ ಇರೋದಿಲ್ಲ. ಇದಕ್ಕೆ ಉತ್ತರ ಕೊಡುವ ಪ್ರಯತ್ನ ನಾವು ಮಾಡಿಯೇ ಮಾಡುತ್ತೇವೆ ಎಂದರು.

ಕಳೆದ ಎರಡ್ಮೂರು ದಿನಗಳಿಂದ ಕಾಂಗ್ರೆಸ್ ಕಾರ್ಯಕರ್ತರು ಅರಾಜಕತೆಯನ್ನು ಸೃಷ್ಟಿಸುತ್ತಿದ್ದಾರೆ. ಮುಖ್ಯಮಂತ್ರಿಗಳು ಕೊತ್ವಾಲ ರಾಮಚಂದ್ರನ ಶಿಷ್ಯಂದಿರು ಇರಬಹುದು. ಅದೇ ರೀತಿ ಪಟಲಂ ಶಿಷ್ಯರನ್ನು ಸೃಷ್ಟಿ ಮಾಡುವ ಕೆಲಸವನ್ನು ಮುಖ್ಯಮಂತ್ರಿಗಳು ಹಾಗೂ ಗೃಹ ಮಂತ್ರಿಗಳು ಮಾಡುತ್ತಿದ್ದಾರೆ, ಇದು ಖಂಡನೀಯ. ರಾಜ್ಯದ ಜನತೆ ಇದನ್ನು ನೋಡ್ತಿದ್ದಾರೆ. ಇದಕ್ಕೆ ತಕ್ಕ ಉತ್ತರವನ್ನು ತಕ್ಕ ಸಮಯದಲ್ಲಿ ಕೊಡುತ್ತಾರೆ. ಪೋಸ್ಟರ್ ಅಂಟಿಸಿರುವ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು. ಯಾರು ಈ ಕೃತ್ಯ ಎಸಗಿದ್ದಾರೆಂದು ಇನ್ನೂ ತಿಳಿದುಬಂದಿಲ್ಲ ಎಂದು ಹೇಳಿದರು.

ಹಾಸನ ಡಿಸಿ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ಸ್ಫೋಟಕ ಆರೋಪ

• **ಉದಯವಾಹಿನಿ ಹಾಸನ:**

ದೀಪಾವಳಿ ಹಬ್ಬದ ನಡುವೆ ಹಾಸನ ಡಿಸಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶಿವಲಿಂಗೇಗೌಡ ವಿರುದ್ಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಇಂದು ಹಾಸನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ಡಿಸಿ ಪಿಎ ಶಶಿಕಿರಣ್ ಅವರದ್ದು ಎನ್ನಲಾದ ವಾಟ್ಸಾಪ್ ಚಾಟ್ ಪ್ರಿಂಟ್‌ನ ಓದಿದರು. ಹಾಸನಾಂಬಾ ದರ್ಶನ ಪಡೆದ ಬಳಿಕ ಮಾತಾಡಿದ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಡಿಸಿ ಲತಾ ಕುಮಾರಿ ಅವರ ಪಿಎ ಶಶಿಕಿರಣ್ ವಿರುದ್ಧ ಲಕ್ಷ-ಲಕ್ಷ ಲಂಚ ಪಡೆದ ಗಂಭೀರ ಆರೋಪ ಮಾಡಿದ್ದಾರೆ. ಮಧ್ಯವರ್ತಿ ಜೊತೆ ಕ್ರಷರ್‌ಗಳಿಗೆ ಪರವಾನಗಿ ಮತ್ತು ಇತರೆ ವಿಚಾರಕ್ಕೆ ಸಂಬಂಧಿಸಿದಂತೆ ಲಂಚ ಪಡೆದಿದ್ದಾರೆ ಎಂದು ದಾಖಲೆ ಬಿಡುಗಡೆ ಮಾಡಿ ಆರೋಪ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

ಡಿಸಿ ಲತಾ ಕುಮಾರಿ ಸೇರಿದಂತೆ ಹಾಸನ ಸಚಿವರು ಹಾಗೂ ಸಂಸದ ಶ್ರೇಯಸ್ ಪಟೇಲ್ ಹೆಸರುಗಳನ್ನು ಕುಮಾರಸ್ವಾಮಿ ಉಲ್ಲೇಖ ಮಾಡಿದ್ದಾರೆ. ಮೂರು ಕ್ರಷರ್ ಫೈಲ್ ಬಗ್ಗೆ ಚರ್ಚೆ ನಡೆದಿದೆ. ಕಳೆದ ಮೂರು ವರ್ಷದಿಂದ ನಿಮ್ ಹತ್ತಿರ ಎಷ್ಟು ಕೆಲಸ ಮಾಡಿಸಿದ್ದೇನೆ. ಕೇಳಿದ ಹಾಗೆ ಹಣ ಕೊಟ್ಟಿದ್ದೀನಿ, ಈಗ ಇಷ್ಟೊಂದು ಹಣ ಕೇಳ್ತಿದ್ದೀರಿ ಎಂದು ಇನ್ನೊಂದು ಕಡೆಯಿಂದ ಮೆಸೇಜ್ ಬಂದಿದೆ.

ಅದಕ್ಕೆ ಈ ಕಡೆಯಿಂದ, ನೀವು ಕೊಡವಷ್ಟು ದುಡ್ಡನ್ನು ನಾವು ಡಿಸಿಯವರಿಗೆ ಕೊಡಬೇಕು. ಮಿಕ್ಕಿದ ಸಣ್ಣ ಹಣದಲ್ಲಿ ನಾನು ನನ್ನ ಸೆಕ್ಷನ್‌ಗೆ ಹಂಚಬೇಕು. ಎಲ್ಲರಿಗೂ ಕೊಟ್ಟು ಮಿಕ್ಕೋದು ಮೂರು ನಾಮ ಮಾತ್ರ ಎಂದಿದ್ದಾರೆ.

ಕುದ್ರೋಳಿಯಲ್ಲಿ ಮೇಳೈಸಿದ ಕರಾವಳಿಯ 'ಗೂಡುದೀಪ' ಬೆರಗು

• **ಉದಯವಾಹಿನಿ ಮಂಗಳೂರು:**


ಉದಯವಾಹಿನಿ ಚಿತ್ರ

ಡಿಜಿಟಲ್ ತೆರೆಯೊಳಗೆ ಜಗತ್ತೇ ಮುಳುಗಿಹೋಗಿರುವ ಈ ಕಾಲಘಟ್ಟದಲ್ಲಿ, ಕತ್ತಲೆಯನ್ನು ಸೀಳಿ ಬಣ್ಣದ ಬೆಳಕು ಚೆಲ್ಲುವ ಪುಟ್ಟ ಗೂಡುದೀಪವೊಂದು ಇಡೀ ಕುಟುಂಬವನ್ನೇ ಒಟ್ಟಿಗೆ ಕೂಡಿಸಬಲ್ಲದೇ? ಹೌದು ಎನ್ನುತ್ತದೆ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಅಂಗಳ. ಇಲ್ಲಿ ಪ್ರದರ್ಶನಗೊಂಡಿರುವ ಪ್ರತಿಯೊಂದು ಗೂಡುದೀಪವೂ ಕೇವಲ ಬಿದಿರು, ಕಾಗದ ಇಲ್ಲವೇ ಬಲ್ಬ್‌ಗಳ ಜೋಡಣೆಯಲ್ಲ.

ಬದಲಿಗೆ ಮೊಬೈಲ್ ಗೀಳಿನಿಂದ ಹೊರಬಂದು ಅಪ್ಪ-ಅಮ್ಮ, ಮಕ್ಕಳು ಮತ್ತು ಅಜ್ಜ-ಅಜ್ಜಿ ಒಟ್ಟಾಗಿ ಕುಳಿತು ಬೆವರು ಸುರಿಸಿ ಹೆಣೆದ ಸಂಭ್ರಮದ ಕಥೆ. 'ನಮ್ಮ ಕುಡ್ಲ' ವಾಹಿನಿ ಕಳೆದ 26 ವರ್ಷದಿಂದ ಪೋಷಿಸಿಕೊಂಡು ಬಂದಿರುವ ಈ ಗೂಡುದೀಪ ಪಂಥ, ಈ ಬಾರಿ ಕರಾವಳಿಯ ಜನಪದೀಯ ಕಲೆ, ಆಧುನಿಕ ತಂತ್ರಜ್ಞಾನ ಮತ್ತು ಪಾರಂಪರಿಕ ಶ್ರದ್ಧೆಯ ಅದ್ಭುತ ತ್ರಿವೇಣಿ ಸಂಗಮಕ್ಕೆ ಸಾಕ್ಷಿಯಾಗಿದೆ.

26 ಗೂಡುದೀಪಗಳಿಂದ 800ರ

ವಿಸ್ಮಯದವರೆಗೆ: ಕಾಲು ಶತಮಾನದ ಹಿಂದೆ ಕರಾವಳಿಯ ಪಾರಂಪರಿಕ ಆಕಾಶಬುಟ್ಟಿ ಸಂಸ್ಕೃತಿ ಕಣ್ಮರೆಯಾಗುತ್ತಿದ್ದ ಹೊತ್ತಿನಲ್ಲಿ ಲೀಲಾಕ್ಷ ಕರ್ಕೇರ ಮಿತ್ರರು ಸೇರಿ ಹಚ್ಚಿದ ಪುಟ್ಟ ಕಿಡಿ ಇದು. ಮೊದಲ ವರ್ಷ ಕೇವಲ 26 ಗೂಡು ದೀಪಗಳಿಂದಶುರುವಾಗಿದ್ದ ಈ ಕಲಾ ಕಾಯಕಕ್ಕೆ, ಹಿರಿಯ ಮುಖಂಡ ಬಿ. ಜನಾರ್ದನ ಪೂಜಾರಿ ಯವರು ಕುದ್ರೋಳಿ ಕ್ಷೇತ್ರದ ಬಾಗಿಲು ತೆರೆದು ಕೊಟ್ಟರು.

ನೋಡನೋಡುತ್ತಿದ್ದಂತೆ ವರ್ಷದಿಂದ ವರ್ಷಕ್ಕೆ ಹೆಮ್ಮರವಾಗಿ ಬೆಳೆದ ಈ ಪಂಥದಲ್ಲಿ, ಇಂದು 700 ರಿಂದ 800ಕ್ಕೂ ಅಧಿಕ ಗೂಡುದೀಪಗಳು ಸಾಲುಗಟ್ಟಿ ನಿಂತು ದೀಪಾವಳಿಗೆ ಹೊಸ ಭಾಷ್ಯ ಬರೆದಿವೆ.

ಲಾಕರ್‌ನಲ್ಲಿದ್ದ 7.61 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

• **ಉದಯವಾಹಿನಿ ಮಂಗಳೂರು:**

ವಿವಾಹವಾಗಿ ಹೆಂಡತಿಯೊಂದಿಗೆ ಅಬುದಾಬಿಗೆ ತೆರಳಿ ಊರಿಗೆ ಮರಳಿದ ನವವಿವಾಹಿತನ ಮನೆಯ ಗಾಡ್ರೇಜ್‌ನಲ್ಲಿದ್ದ ಬರೋಬ್ಬರಿ 7.61 ಲಕ್ಷ ಮೌಲ್ಯದ ಚಿನ್ನಾಭರಣಗಳು ಕಳವಾಗಿರುವ ಘಟನೆ ಸುಳ್ಯ ತಾಲ್ಲೂಕಿನ ಗುತ್ತಿಗಾರು ಗ್ರಾಮದಲ್ಲಿ ಬೆಳಕಿಗೆ ಬಂದಿದೆ.

ಗುತ್ತಿಗಾರು ಗ್ರಾಮದ ತುಪ್ಪದಮನೆ ನಿವಾಸಿ, ದಿ. ದಾಮೋದರ ಗೌಡ ಅವರ ಪುತ್ರ ರಂಜಿತ್ ರಾಜ್ ಟಿ.ಡಿ. (31) ಎಂಬವರು ನೀಡಿದ ದೂರಿನ ಮೇರೆಗೆ ಸುಬ್ರಹ್ಮಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೂರುದಾರ ರಂಜಿತ್ ರಾಜ್ ಅವರಿಗೆ ಕಳೆದ ಏಪ್ರಿಲ್ 26, 2026 ರಂದು ವಿವಾಹವಾಗಿತ್ತು. ಬಳಿಕ ಮೇ 4 ರಂದು ಅವರು ಪತ್ನಿಯೊಂದಿಗೆ ಅಬುದಾಬಿಗೆ ಉದ್ಯೋಗಕ್ಕೆ ತೆರಳುವ ಮುನ್ನ, ಮದುವೆ ವೇಳೆ ಪತ್ನಿಯ ತವರು ಮನೆಯವರು ನೀಡಿದ್ದ ಚಿನ್ನಾಭರಣಗಳು ಹಾಗೂ 6,000 ನಗದನ್ನು ಮನೆಯ ಬೆಡ್‌ರೂಂನಲ್ಲಿದ್ದ ಗಾಡ್ರೇಜ್ ಅಲ್ಮೆರಾದಲ್ಲಿಟ್ಟು ಲಾಕ್ ಮಾಡಿದ್ದರು. ಬೀಗದ ಕೈಯನ್ನು ತಾಯಿ ಜಾನಕಿಯವರ ಸುಪರ್ದಿಗೆ ನೀಡಿ ಭದ್ರವಾಗಿಟ್ಟುಕೊಳ್ಳುವಂತೆ ತಿಳಿಸಿ ವಿದೇಶಕ್ಕೆ ತೆರಳಿದ್ದರು.



ಮರುದಿನ ನವೆಂಬರ್ 2 ರಂದು ಮಧ್ಯಾಹ್ನ 12:30ರ ಸುಮಾರಿಗೆ ತಾಯಿ ಹಣ ಕೇಳಿದಾಗ ಗಾಡ್ರೇಜ್‌ನ ಎಡಭಾಗದ ಬಾಗಿಲು ತೆರೆದು ಹಣ ನೀಡಿದ್ದಾರೆ. ಈ ವೇಳೆ ಪತ್ನಿ ಒಳಭಾಗದ ಲಾಕರ್ ತೆರೆದು ಪರಿಶೀಲಿಸಿದಾಗ, ಲಾಕರ್‌ನಲ್ಲಿದ್ದ 2 ಬೆಳ್ಳಿ ಬಳೆ, ಉಂಗುರ ಹಾಗೂ ನಗದು ಹಣ ಮಾತ್ರ ಉಳಿದುಕೊಂಡಿದ್ದು, ಉಳಿದ ಚಿನ್ನದ ಆಭರಣಗಳು ಮಾಯವಾಗಿರುವುದು ಕಂಡು ಬೆಚ್ಚಿಬಿದ್ದಿದ್ದಾರೆ.

ನವೆಂಬರ್ 1, 2026 ರಂದು ದಂಪತಿ ಅಬುದಾಬಿಯಿಂದ ಮರಳಿ ಮನೆಗೆ ಬಂದಾಗ, ಕೊಠಡಿಯ ಗಾಡ್ರೇಜ್‌ನ ಬಲಬದಿಯ ಬಾಗಿಲು ತೆರೆದಿರುವುದು ಕಂಡುಬಂದಿದೆ. ಈ ಬಗ್ಗೆ ವಿಚಾರಿಸಿದಾಗ, ಕೆಲಸಗಾರರಿಗೆ ಹಣ ನೀಡಲು ನಾನೇ ಬೀಗ ತೆಗೆದಿದ್ದೆ ಎಂದು ದೂರುದಾರರ ಅಣ್ಣ ನಿಶ್ಚಿತ್ ತಿಳಿಸಿದ್ದರು.

ಭರದಿಂದ ನಡೆದ ಚೆಂಡು ಹೂವುಗಳ ಮಾರಾಟ

• **ಉದಯವಾಹಿನಿ ಚನ್ನಗಿರಿ:**

ದೀಪಾವಳಿ ಹಬ್ಬದ ಅಂಗವಾಗಿ ನ. 8ರಂದು ಲಕ್ಷ್ಮಿ ಪೂಜೆ ನಡೆಯಲಿದ್ದು, ಶನಿವಾರ ಎಲ್ಲೆಡೆ ಚೆಂಡು ಹೂವುಗಳ ಮಾರಾಟ ಭರದಿಂದ ನಡೆಯಿತು. ವ್ಯಾಪಾರ ವಹಿವಾಟು ನಡೆಯುವ ಅಂಗಡಿಗಳಲ್ಲಿ ಕಡ್ಡಾಯವಾಗಿ ಲಕ್ಷ್ಮಿ ಪೂಜೆಯನ್ನು ಮಾಡುತ್ತಾರೆ. ಶನಿವಾರವೇ ಬಹುತೇಕರು ಹೂ ಖರೀದಿಸಿದರು. ವ್ಯಾಪಾರಿಗಳು ಪಟ್ಟಣ ಹಾಗೂ ದೊಡ್ಡ ಗ್ರಾಮಗಳಲ್ಲಿ ರಸ್ತೆ ಬದಿ ಹೂವುಗಳನ್ನು ರಾಶಿ ಹಾಕಿಕೊಂಡು ಮಾರಾಟ ಮಾಡುತ್ತಿರುವುದು ಕಂಡುಬಂದಿತು.

ಕಾರು ಡಿಕ್ಕಿಯಾಗಿ ಇಬ್ಬರು ಮಹಿಳೆಯರು ಸಾವು!

• **ಉದಯವಾಹಿನಿ ಹಾವೇರಿ:**

ರಾಣೇಬೆನ್ನೂರಿನ ದೇವರಗುಡ್ಡ ಗ್ರಾಮದ ಬಳಿ ರಸ್ತೆ ಕೆಲಸ ಮಾಡುತ್ತಿದ್ದ ವೇಳೆ ಕಾರು ಡಿಕ್ಕಿಯಾಗಿ ಇಬ್ಬರು ಮಹಿಳೆಯರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತ ಮಹಿಳೆಯರನ್ನ 30 ವರ್ಷದ ಮೇಘನಾ ಮತ್ತು 50 ವರ್ಷದ ಶೈಲಜಾ ಮೇಕಳಿ ಎಂದು ಗುರುತಿಸಲಾಗಿದೆ. ರಸ್ತೆ ಕೆಲಸ ಮಾಡುತ್ತಿದ್ದ ವೇಳೆ ವೇಗವಾಗಿ ಬಂದು ಕಾರು ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ. ಅಪಘಾತದ ಬಳಿಕ ಕಾರಿನ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಸ್ಥಳಕ್ಕೆ ರಾಣೆಬೆನ್ನೂರು ಗ್ರಾಮೀಣ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತ ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ರಾಣೆಬೆನ್ನೂರು ತಾಲ್ಲೂಕು ಆಸ್ಪತ್ರೆಗೆ ತರಲಾಗಿದೆ.

ಭಿಕ್ಷೆ ಹಣ ಕೊಡಲು ಬಿಜೆಪಿ ಕಾರ್ಯಕರ್ತರ ಹೈಡ್ರಾಮಾ!



• **ಉದಯವಾಹಿನಿ ದಾವಣಗೆರೆ:**

ಕೆಎಸ್‌ಆರ್‌ಟಿಸಿ ಬಸ್ ದರ ಏರಿಕೆ ಹಿನ್ನಲೆ ರಾಜ್ಯ ಸರ್ಕಾರದ ವಿರುದ್ಧ ದಾವಣಗೆರೆ ಜಿಲ್ಲಾ ಬಿಜೆಪಿ ಘಟಕದಿಂದ ಪ್ರತಿಭಟನೆ ನಡೆಸಲಾಯಿತು. ಜಿಲ್ಲಾ ಕಚೇರಿಯಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೂ ಪ್ರತಿಭಟನಾ ರ‍್ಯಾಲಿ ಮಾಡಿದ ಬಿಜೆಪಿ ಪಕ್ಷದವರು ಬೆಲೆ ಏರಿಕೆ ಮಾಡಿದ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು.

ಸಾರಿಗೆ ಸಚಿವ ಬೈರತಿ ಸುರೇಶ್ ಹಾಗೂ ಸಿಎಂ ಡಿಕೆಶಿ ಮುಖವಾಡ ಹಾಕಿಕೊಂಡು ಭಿಕ್ಷಾಟನೆಯನ್ನು ಮಾಡಿ ಕಾರ್ಯಕರ್ತರು ಅಣಕು ಪ್ರದರ್ಶನ ಮಾಡಿದರು. ರಾಜ್ಯ ಸರ್ಕಾರದ ಖಜಾನೆ ಖಾಲಿ ಆಗಿದೆ. ರಾಜ್ಯ ಸರ್ಕಾರಕ್ಕೆ ಭಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ. ಆದ್ದರಿಂದ ದರ ಏರಿಕೆ ಮಾಡಿ ಜನರ ರಕ್ತ ಹೀರುವ ಕೆಲಸ ಮಾಡಿದ್ದಾರೆ. ಕೂಡಲೇ ಏರಿಕೆ ಮಾಡಿದ ದರ ಕಡಿಮೆ ಮಾಡುವಂತೆ ಆಗ್ರಹಿಸಿದರು. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಪ್ರವೇಶ ದ್ವಾರವನ್ನು ಸಂಪೂರ್ಣ ಬಂದ್ ಮಾಡಿ ಆಕ್ರೋಶ ಹೊರಹಾಕಿದರು.

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಬಿಜೆಪಿ ಕಾರ್ಯಕರ್ತರು ಕೆಲಕಾಲ ಹೈಡ್ರಾಮ ಮಾಡಿದರು. ಮನವಿ ಸ್ವೀಕರಿಸಲು ಬಂದಿದ್ದ ಕೆಎಸ್‌ಆರ್‌ಟಿಸಿ ವಿಭಾಗೀಯ ಅಧಿಕಾರಿ ಹೇಮಂತ್ ಕುಮಾರ್ ಅವರಿಗೆ ಮನವಿ ನೀಡುವುದರ ಜೊತೆಗೆ ಬಿಜೆಪಿ ಕಾರ್ಯಕರ್ತರು ಭಿಕ್ಷೆ ಬೇಡಿದ ಹಣ ನೀಡಲು ಮುಂದಾದರು. ಆದರೆ, ಭಿಕ್ಷೆ ಹಣವನ್ನು ಪಡೆಯಲು ಕೆಎಸ್‌ಆರ್‌ಟಿಸಿ ವಿಭಾಗೀಯ ಅಧಿಕಾರಿ ನಿರಾಕರಿಸಿದರು. ಈ ಸಂದರ್ಭದಲ್ಲಿ ಕೆಎಸ್‌ಆರ್‌ಟಿಸಿ ವಿಭಾಗೀಯ ಅಧಿಕಾರಿ ಹಾಗೂ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು. ಕೆಟಿಜೆ ನಗರ ಠಾಣೆಯ ಪೊಲೀಸರು ಮಧ್ಯಪ್ರವೇಶಿ ಪರಿಸ್ಥಿತಿ ಶಾಂತಗೊಳಿಸಿದರು.

ವಿದ್ಯಾರ್ಥಿಗಳಿಗೆ ಕೌಶಲ ಕಲಿಸಿ: ಪ್ರಲ್ಹಾದ ಜೋಶಿ

• **ಉದಯವಾಹಿನಿ ಹುಬ್ಬಳ್ಳಿ:**

'ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಪಠ್ಯದಲ್ಲಿರುವ ವಿಷಯವನ್ನು ಮಾತ್ರ ಬೋಧಿಸದೆ ಅವರು ಮುಂದೆ ಉದ್ಯಮಿಗಳಾಗಿ, ಉದ್ಯೋಗದಾತರಾಗುವ ನಿಟ್ಟಿನಲ್ಲಿ ಕೌಶಲ ಕಲಿಸಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು. ದ್ಯಾವಪ್ಪನವರ ಕೊರವಿ ಸಿದ್ದಾಳ ಶಿಕ್ಷಣ ಸಂಸ್ಥೆಯ ಇಲ್ಲಿನ ಚೇತನ ಬಿಸಿನೆಸ್ ಸ್ಕೂಲ್ ಮತ್ತು ಚೇತನ ವಾಣಿಜ್ಯ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಸಿದ್ದೇಶ್ವರ ಸ್ವಾಮೀಜಿ ಸಭಾಭವನ ಉದ್ಘಾಟನೆ ಮತ್ತು 'ಚೇತನ ಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು. 'ಜಗತ್ತಿನ ಯಾವ ದೇಶದಲ್ಲಿಯೂ ಭಾರತದಲ್ಲಿರುವಷ್ಟು ಯುವ ಸಂಪನ್ಮೂಲ ಇಲ್ಲ. ಹೀಗಾಗಿ ಇಡೀ ಜಗತ್ತು ನಮ್ಮ ದೇಶದ ಕಡೆಗೆ ಆಶಾಭಾವದಿಂದ ನೋಡುತ್ತಿದ್ದು, ಭಾರತ ವಿಶ್ವಾಸಾರ್ಹತೆ ಹೆಚ್ಚುತ್ತಿದ. ಈ ಹಿಂದೆ ದೇಶದಲ್ಲಿ ರಕ್ಷಣಾ



ಉದಯವಾಹಿನಿ ಚಿತ್ರ

ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಈಗ 40 ಸಾವಿರ ಕೋಟಿ ಮೊತ್ತದ ರಕ್ಷಣಾ ಸಾಮಗ್ರಿಗಳನ್ನು ರಫ್ತು ಮಾಡಲಾಗುತ್ತಿದೆ. ಇದು ದೇಶ ಅಭಿವೃದ್ಧಿಯತ್ತ ಹೆಜ್ಜೆ ಹಾಕುತ್ತಿರುವುದಕ್ಕೆ ಸಾಕ್ಷಿ' ಎಂದು ಹೇಳಿದರು.

2014ರಲ್ಲಿ 240 ನವೋದ್ಯಮಗಳಿದ್ದವು. ಈಗ 2.51 ಲಕ್ಷ ಇವೆ. ಯುವ ಜನತೆ ನವೋದ್ಯಮ ಸ್ಥಾಪಿಸಲು ಕೇಂದ್ರ ಸರ್ಕಾರ ಅಗತ್ಯ ನೆರವು ನೀಡುತ್ತಿದೆ. ಹೀಗಾಗಿ ದೇಶವು ಎಐ ಇನೋವೇಷನ್ ಮತ್ತು ನವೋದ್ಯಮದಲ್ಲಿ ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿದೆ' ಎಂದರು.

ಕೃಷಿ ಪರಿಕರಗಳ ಉದ್ಯಮಿ ಅಬ್ದುಲ್ ಖಾದರ್ ನಡಕಟ್ಟಿನ ಮಾತನಾಡಿ, 'ನಾನು ಆವಿಷ್ಕರಿಸಿದ ಆಧುನಿಕ ಕೂರಿಗೆ ಆರಂಭದಲ್ಲಿ ನಾಲ್ಕೈದು ಬಾರಿ ವಿಫಲವಾಯಿತು. ಸೋಲೊಪ್ಪಿಕೊಳ್ಳದೆ ಮತ್ತೆ ಪ್ರಯತ್ನಿಸಿದ್ದರಿಂದ ಯಶಸ್ಸು ಸಿಕ್ಕಿತು. ನಮ್ಮದು ಕೃಷಿ ಪ್ರದಾನ ದೇಶ. ಯುವಕರು ಓದಿನ ನಂತರ ಕೆಲಸಕ್ಕಾಗಿ ಅಲೆಯದೆ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕು' ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪ್ರಗತಿಪರ ರೈತ ಮಹಿಳೆ ಕವಿತಾ ಮಿಶ್ರಾ, ಮಾತನಾಡಿ, 'ಯಾವುದೇ ಕೆಲಸವನ್ನು ಕೀಳು ಎಂದು ಭಾವಿಸಬಾರದು. ನಾವು ಮಾಡುವ ಕೆಲಸದ ಬಗ್ಗೆ ಗೌರವ ಇರಬೇಕು. ಪರಿಶ್ರಮಪಟ್ಟರೆ ಮಾತ್ರ ಫಲ ಸಿಗುತ್ತದೆ' ಎಂದು ಹೇಳಿದರು.

ಗುಣಮಟ್ಟದ ಬೋಧನೆಗೆ ನಿರಂತರ ಅಧ್ಯಯನ ಪೂರಕ

• **ಉದಯವಾಹಿನಿ ಧಾರವಾಡ:**

'ಬೋಧಕರು ಹೊಸ ತಂತ್ರಜ್ಞಾನ ಮತ್ತು ಕೌಶಲಗಳನ್ನು ಕಲಿಯಬೇಕು. ನಿರಂತರ ಅಧ್ಯಯನದಿಂದ ಗುಣಮಟ್ಟದ ಬೋಧನೆ ಸಾಧ್ಯ' ಎಂದು ಎಸ್‌ಡಿಎಂ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಐ. ಶ್ರೀಧರ್ ಹೇಳಿದರು. ಎಸ್‌ಡಿಎಂ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ 'ಗೂಗಲ್ ಕ್ರೌಡ್ ಡಾಟಾ ಅನಾಲಿಟಿಕ್ಸ್' ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ಬೋಧನಾ ವಿಷಯಕ್ಕೆ ಸಂಬಂಧಿಸಿದ ಹೊಸ ವಿಚಾರಗಳನ್ನು ತಿಳಿದುಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಪಠ್ಯವನ್ನು ಮನದಟ್ಟು ಮಾಡಿಸಬೇಕು' ಎಂದರು. ಸಿಎಸ್‌ಇ ವಿಭಾಗದ ಮುಖ್ಯಸ್ಥ ಎಸ್.ಎಂ.ಜೋಶಿ ಮಾತನಾಡಿ, 'ಜಾಗತಿಕವಾಗಿ ಪ್ರತಿ ಸೆಕೆಂಡಿಗೆ ಅಪಾರ ಪ್ರಮಾಣದ ಡಾಟಾ ಸೃಷ್ಟಿಯಾಗುತ್ತಿದೆ. ಕೌಡ್ ಮೂಲಸೌಕರ್ಯವನ್ನು ಬಳಸಿಕೊಂಡು ಅರ್ಥಪೂರ್ಣ ಮಾಹಿತಿಯನ್ನು ಹೊರತೆಗೆಯುವುದು ಹಾಗೂ ಡಾಟಾ ಆಧಾರಿತ ನಿರ್ಧಾರಗಳನ್ನು ಕೈಗೊಳ್ಳುವ ತಂತ್ರಜ್ಞಾನವನ್ನು ಕಲಿಯುವುದು ವೃತ್ತಿಪರರಿಗೆ ಮತ್ತು ಸಂಶೋಧಕರಿಗೆ ಅನಿವಾರ್ಯವಾಗಿದೆ' ಎಂದರು. ಭಾಗವಹಿಸಿದ ಅಧ್ಯಾಪಕರಿಗೆ ಪ್ರಮಾಣಪತ್ರ ವಿತರಿಸಲಾಯಿತು. ಐಸಿಟಿ ಸಂಯೋಜಕಿ ನೀತಾ ಜಿ.ಕುಲಕರ್ಣಿ, ಪ್ರೊ. ಚೈತಾಲಿ ಚಾಟೆ ಇದ್ದರು.

ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ

• **ಉದಯವಾಹಿನಿ ಹರಿಹರ:**

'ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದ್ದು, ಮಹಿಳಾ ಸಬಲೀಕರಣಕ್ಕೆ ಬಿಜೆಪಿ ಆದ್ಯತೆ ನೀಡುತ್ತಿದೆ' ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು. ನಗರದ ಬಿಜೆಪಿ ಕಚೇರಿಯಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಮಹಿಳಾ ಮೋರ್ಚಾದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು 'ನಾರಿ ಶಕ್ತಿ ವಂದನ್' ಅಧಿನಿಯಮದ ಮೂಲಕ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಶೇ 33ರಷ್ಟು ಮೀಸಲಾತಿ ಕಲ್ಪಿಸಿ ಐತಿಹಾಸಿಕ ಹೆಜ್ಜೆ ಇಟ್ಟಿದೆ' ಎಂದರು. 'ಕಾರ್ಯಕರ್ತೆಯರು ಚುನಾವಣಾ ಸಮಯದಲ್ಲಿ ಮಾತ್ರವಲ್ಲದೇ, ನಿರಂತರವಾಗಿ ಜನಕಲ್ಯಾಣ ಯೋಜನೆಗಳನ್ನು ತಳಮಟ್ಟದ ಜನರಿಗೆ ತಲುಪಿಸುವಲ್ಲಿ ಮುಂಚೂಣಿಯಲ್ಲಿರಬೇಕು. ಪದವಿ ಎಂಬುದು ಅಧಿಕಾರವಲ್ಲ, ಅದೊಂದು ಸಮಾಜ ಸೇವೆಗೆ ಸಿಕ್ಕ ಅವಕಾಶವಾಗಿದ್ದು, ನೂತನ ಪದಾಧಿಕಾರಿಗಳು ಪಕ್ಷದ ತತ್ವ ಸಿದ್ಧಾಂತಗಳನ್ನು ಮನೆಮನೆಗೆ ತಲುಪಿಸುವ ಮೂಲಕ ಸಂಘಟನೆಯನ್ನು ಮತ್ತಷ್ಟು ಬಲಪಡಿಸಬೇಕು' ಎಂದು ಸಲಹೆ ನೀಡಿದರು. ಮಹಿಳಾ ಮೋರ್ಚಾದ ಗ್ರಾಮಾಂತರ ಘಟಕದ ಅಧ್ಯಕ್ಷೆ ಸುನೀತಾ ಧನರಾಜ್, ಪ್ರಧಾನ ಕಾರ್ಯದರ್ಶಿ ಶಕುಂತಲಮ್ಮ, ಕಾರ್ಯದರ್ಶಿ ಮಮತಾ ಹಾಗೂ ನಗರ ಘಟಕದ ಅಧ್ಯಕ್ಷೆ ರೂಪಾ ಶಶಿಕಾಂತ್, ಪ್ರಧಾನ ಕಾರ್ಯದರ್ಶಿಗಳಾದ ನಳಿನಾ ಸಂತೋಷ್, ಅಂಬುಜಾ ಕಾಟ್ವೆ, ಅಶ್ವಿನಿ ಅರುಣ್‌ಕುಮಾರ್ ಸೇರಿದಂತೆ ಇತರ ಪದಾಧಿಕಾರಿಗಳಿಗೆ ಪಕ್ಷದ ಬಾವುಟ ನೀಡಿ ಶುಭ ಹಾರೈಸಲಾಯಿತು.

'ಮಹರ್ಷಿ ವಾಲ್ಮೀಕಿ ಶ್ರೇಷ್ಠ ದಾರ್ಶನಿಕ'

• **ಉದಯವಾಹಿನಿ ಧಾರವಾಡ:**


ಉದಯವಾಹಿನಿ ಚಿತ್ರ

'ರಾಮಾಯಣ ಕೇವಲ ಕಥೆಯಲ್ಲ, ಮಾನವ ಜೀವನಕ್ಕೆ ಮಾರ್ಗದರ್ಶನ ನೀಡುವ ಮಹಾನ್ ಗ್ರಂಥ' ಎಂದು ಜೆಎಸ್‌ಎಸ್ ಸಂಸ್ಥೆಯ ಕಾರ್ಯದರ್ಶಿ ಅಜಿತ ಪ್ರಸಾದ ಹೇಳಿದರು.

ವಿದ್ಯಾಗಿರಿಯ ಜನತಾ ಶಿಕ್ಷಣ ಸಮಿತಿಯ ಮಂಜುನಾಥೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಸಂಸ್ಥೆ, ಎಂ.ಸಿ.ಎ ಕಾಲೇಜು ಹಾಗೂ ಐಟಿಐ ಕಾಲೇಜುಗಳ ಸಹಯೋಗದಲ್ಲಿ ಆಯೋಜಿಸಿದ್ದ ವಾಲ್ಮೀಕಿ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

'ಧರ್ಮ ಅಧರ್ಮಗಳ ನಡುವೆ ಸಂಘರ್ಷವಾದಾಗ ಕೊನೆಯಲ್ಲಿ ಧರ್ಮಕ್ಕೆ ಜಯವಾಗುತ್ತದೆ ಎಂಬುದನ್ನು ರಾಮಾಯಣದ ಮೂಲಕ ಜಗತ್ತಿಗೆ ತೋರಿಸಿಕೊಟ್ಟ ಮಹರ್ಷಿ ವಾಲ್ಮೀಕಿ ಶ್ರೇಷ್ಠ ದಾರ್ಶನಿಕ ವ್ಯಕ್ತಿ' ಎಂದು ತಿಳಿಸಿದರು. 'ವಾಲ್ಮೀಕಿ ಅವರ ರಾಮಾಯಣವು ರಾಮನ ಸತ್ಯನಿಷ್ಠೆ, ಸೀತೆಯ ತಾಳ್ಮೆ, ಲಕ್ಷ್ಮಣನ ಸಹೋದರ ಪ್ರೀತಿ, ತ್ಯಾಗ, ಹನುಮಂತನ ಭಕ್ತಿ ನಮ್ಮ ಬದುಕಿಗೂ ಮಾದರಿ. ರಾಮಾಯಣ ಕುಟುಂಬದ ಮಹತ್ವ ತಿಳಿಸುತ್ತದೆ' ಎಂದರು. 'ತಂದೆ-ತಾಯಿ, ಗುರುಗಳನ್ನು ಗೌರವಿಸುವುದು, ಕಷ್ಟದಲ್ಲಿ ಧೈರ್ಯದಿಂದ ಮುನ್ನಡೆಯುವುದು, ನ್ಯಾಯದ ಪರ ನಿಲ್ಲುವ ಮೌಲ್ಯಗಳನ್ನು ಕಲಿಸುತ್ತದೆ. ಆಧುನಿಕ ಯುಗದಲ್ಲೂ ರಾಮಾಯಣ ಸಂದೇಶಗಳು ಪ್ರಸ್ತುತ, ವಿಜ್ಞಾನ, ತಂತ್ರಜ್ಞಾನದಲ್ಲಿ ಮುಂದುವರಿದರೂ ನೈತಿಕ ಮೌಲ್ಯ, ಮಾನವೀಯತೆ ಅತ್ಯಗತ್ಯ' ಎಂದು ಅಭಿಪ್ರಾಯಪಟ್ಟರು. ಆರ್.ವಿ. ಚಿಟಗುಪ್ಪಿ ಮಾತನಾಡಿ, 'ವಾಲ್ಮೀಕಿ ಸಾಹಿತ್ಯದ ಮೂಲಕ ಭಾರತೀಯ ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅವರ ಕಾವ್ಯ ಭಾರತೀಯ ಸಂಸ್ಕೃತಿ, ಕುಟುಂಬ ವ್ಯವಸ್ಥೆ, ನೈತಿಕ ಚಿಂತನೆ ಮೇಲೆ ಆಳವಾದ ಪ್ರಭಾವ ಬೀರಿದೆ' ಎಂದರು. ಜೆಎಸ್‌ಎಸ್ ಎಂ.ಸಿ.ಎ ನಿರ್ದೇಶಕ ಸೂರಜ್ ಜೈನ್, ಐಟಿಐ ಪ್ರಾಚಾರ್ಯ ಮಹಾವೀರ ಉಪಾಧ್ಯೆ. ವಿವೇಕ ಲಕ್ಷ್ಮೇಶ್ವರ ಸೇರಿದಂತೆ ವಿದ್ಯಾರ್ಥಿಗಳು, ಶಿಕ್ಷಕರು ಇದ್ದರು.

ಅರ್ಜಿ ತ್ವರಿತ ವಿಲೇವಾರಿ ಮಾಡಿ: ಸಂತೋಷ್ ಲಾಡ್ ಸೂಚನೆ

ಬಮ್ಮಿಗಟ್ಟಿ ಹೋಬಳಿಯಲ್ಲಿ 142 ಅರ್ಜಿಗಳು ಬಂದಿದ್ದು ಆಶ್ರಯ ಯೋಜನೆ, ಜಮೀನುಗಳಿಗೆ ರಸ್ತೆ, ದೇವಸ್ಥಾನ, ಶಾಲೆ ಅಭಿವೃದ್ಧಿ, ಹಾಗೂ ಇನ್ನಿತರ ಅರ್ಜಿಗಳು ಸ್ವೀಕರಿಸಲಾಗಿದೆ.

• **ಉದಯವಾಹಿನಿ ಕಲಘಟಗಿ**

'ಪ್ರಜಾಸೇವಾ ಆಂದೋಲನದಲ್ಲಿ ಸಾರ್ವಜನಿಕವಾಗಿ ಬಂದ ಅರ್ಜಿಗಳು ಸರ್ಕಾರದ ನಿಯಮಾವಳಿ ಹಾಗೂ ಕಾನೂನು ಬದ್ಧವಾಗಿದ್ದರೆ ತ್ವರಿತವಾಗಿ ವಿಲೇವಾರಿ ಮಾಡಬೇಕು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅಧಿಕಾರಿಗಳಿಗೆ ಸೂಚಿಸಿದರು.

1: ಹೋಬಳಿಯಲ್ಲಿ 91 ಅರ್ಜಿಗಳು ಬಂದಿದ್ದು

2: ಹಕ್ಕುಪತ್ರ, ಮನೆ ಮಂಜೂರಾತಿ ಆದೇಶ ಪತ್ರ

3: ಸಂಗೋಪನ ಇಲಾಖೆಯಿಂದ ರೈತರಿಗೆ ಕಿಟ್

ತಾಲ್ಲೂಕಿನ ಬಮ್ಮಿಗಟ್ಟಿ ಹಾಗೂ ಹಿರೇಹೊನ್ನಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಮ್ಮಿಗಟ್ಟಿ ಹೋಬಳಿಯಲ್ಲಿ 142 ಅರ್ಜಿಗಳು ಬಂದಿದ್ದು ಆಶ್ರಯ ಯೋಜನೆ, ಜಮೀನುಗಳಿಗೆ ರಸ್ತೆ, ದೇವಸ್ಥಾನ, ಶಾಲೆ ಅಭಿವೃದ್ಧಿ, ಬಗರ ಹುಕುಂ ಹಾಗೂ ಇನ್ನಿತರ ಅರ್ಜಿಗಳು ಸ್ವೀಕರಿಸಲಾಗಿದೆ. ಹಿರೇಹೊನ್ನಿಹಳ್ಳಿ ಹೋಬಳಿಯಲ್ಲಿ 91 ಅರ್ಜಿಗಳು ಬಂದಿದ್ದು, ಸಂಬಂಧಪಟ್ಟ ಇಲಾಖೆಗೆ ಕಳಿಸಿ ಕಾಲಮಿತಿಯಲ್ಲಿ ವಿಲೇವಾರಿ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಭೂ ಗ್ಯಾರಂಟಿ ಯೋಜನೆಯಡಿ ಫಲಾನುಭವಿಗಳಿಗೆ ಹಕ್ಕುಪತ್ರ, ಮನೆ ಮಂಜೂರಾತಿ ಆದೇಶ ಪತ್ರ ವಿಶೇಷವಾಗಿ ಪಶು ಸಂಗೋಪನ ಇಲಾಖೆಯಿಂದ ರೈತರಿಗೆ ಮೇವಿನ ಕಿಟ್, ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಿದರು. ಪ್ರಜಾ ಸೇವಾ ಆಂದೋಲನದಲ್ಲಿ ವಿಶೇಷವಾಗಿ ಮಹಿಳಾ ಸ್ವಸಹಾಯ ಸಂಘಗಳು ಮತ್ತು ಸ್ತ್ರೀಶಕ್ತಿ ಸಂಘಗಳ ಮಹಿಳಾ ಸಬಲೀಕರಣದ ಮಳಿಗೆಗಳಿಗೆ ಭೇಟಿ ನೀಡಿ ವೀಕ್ಷಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಕುಮಾರ್ ಟಿ.ಎಚ್.ಎಂ., ಜಿಲ್ಲಾಧಿಕಾರಿ ಸ್ನೇಹಲ್.ಆರ್, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ, ಜಿಲ್ಲಾ ಪಂಚಾಯಿತಿ ಸಿಇಒ ಭುವನೇಶ್ ಪಾಟೀಲ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಸ್.ಆರ್ ಪಾಟೀಲ, ತಹಶೀಲ್ದಾರ್ ಬಸವರಾಜ ಹೊಂಕಣ್ಣದವರ, ತಾಲ್ಲೂಕು ಪಂಚಾಯಿತಿ ಇಒ ಪಿ. ವೈ ಸಾವಂತ, ಸಿಪಿಐ ಶ್ರೀಶೈಲ್ ಕೌಜಲಗಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಮುರಳ್ಳಿ, ಮುಖಂಡರಾದ ಶಿವಲಿಂಗ ಮುಗಣ್ಣವರ, ವೆಂಕಟೇಶ ಬಂಡಿವಡ್ಡರ ಇದ್ದರು.


ಉದಯವಾಹಿನಿ ಚಿತ್ರ

'ಪ್ರಸಕ್ತ ವರ್ಷ ಮಳೆ ಅಭಾವದಿಂದ ನೀರಿನ ಸಮಸ್ಯೆ ತಲೆದೂರುವ ಸಾಧ್ಯತೆ ಇದೆ. ಈ ಕುರಿತು ಮುಂಜಾಗ್ರತ ಕ್ರಮ ಕೈಗೊಳ್ಳಬೇಕು. ಖಾಸಗಿ ಬೋರವೆಲ್ ಗುರುತಿಸಿ, ಬಾಡಿಗೆ ಪಡೆಯಲು ಸಿದ್ದತೆ ಮಾಡಿಕೊಳ್ಳಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.
-ಇಒ ಪ್ರಶಾಂತ ತುರ್ಕಾಣಿ

ಆಶ್ರಯ ಮನೆಗಳಿಗೆ ಬೇಡಿಕೆಯಿದ್ದ ಅರ್ಜಿಗಳೇ ಹೆಚ್ಚಾಗಿದ್ದವು. ಹಳೇ ಹುಬ್ಬಳ್ಳಿ, ಎಸ್.ಎಂ. ಕೃಷ್ಣನಗರ, ಆನಂದ ನಗರ, ಬೆಂಗೇರಿ ಭಾಗದ ನಿವೇಶನ ರಹಿತರಿಂದ ಅರ್ಜಿ ಸಲ್ಲಿಕೆಯಾಗಿದ್ದವು. ಪಾಲಿಕೆ ಅಧಿಕಾರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಇಲ್ಲಿಯ ಮಿನಿ ವಿಧಾನಸೌಧದ ತಾಲ್ಲೂಕು ಪಂಚಾಯಿತಿ ಸಭಾಭವನದಲ್ಲಿ ತಹಶೀಲ್ದಾರ್ ಮಹೇಶ ಗಸ್ತೆ ನೇತೃತ್ವದಲ್ಲಿ ಪ್ರಜಾಸೇವಾ ಆಂದೋಲನ ನಡೆಯಿತು.

ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಒಟ್ಟು 45 ಅರ್ಜಿಗಳು ಸ್ವೀಕೃತವಾದವು. ಅವುಗಳಲ್ಲಿ 16 ಅರ್ಜಿಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಲಾಯಿತು.

ನಾಗಶೆಟ್ಟಿಕೊಪ್ಪ, ಬೆಂಗೇರಿ ಭಾಗದ ಮುಸ್ಲಿಂ ಸಮುದಾಯದವರು ಪ್ರತ್ಯೇಕ ಸ್ಮಶಾನಕ್ಕೆ ಬೇಡಿಕೆ ಸಲ್ಲಿಸಿದರು. ಕಂದಾಯ ಇಲಾಖೆಗೆ ಸಂಬಂಧಿಸಿ 3, ನೀರು ಸರಬರಾಜಿಗೆ ಸಂಬಂಧಿಸಿ 1 ಹಾಗೂ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಸಂಬಂಧಿಸಿದ 4 ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ವೇಳೆ ಕಂದಾಯ ಇಲಾಖೆಗೆ 3, ಪಟ್ಟಣ ಪಂಚಾಯಿತಿಗೆ-2, ಪಿಡಬ್ಲ್ಯುಡಿ ಇಲಾಖೆಗೆ -2 ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದ ಒಂದು ಅರ್ಜಿ ಸಲ್ಲಿಕೆ ಆಗಿತ್ತು.

ಸಮಸ್ಯೆಗಳು: ಅಳ್ನಾವರ ನೂತನ ತಾಲ್ಲೂಕು ಕೇಂದ್ರವಾಗಿದ್ದು ಕಾಯಂ ತಹಶೀಲ್ದಾರ್ ನೇಮಕ ಆಗಬೇಕು, ಖಾಲಿ ಇರುವ ಹುದ್ದೆ ತುಂಬಬೇಕು. ಕಡಬಗಟ್ಟಿ ಕ್ರಾಸ್ ಬಳಿಯಿಂದ ಆರಂಭವಾದ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡುವ ಪೂರ್ವದಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಸಿಡಿ ಮತ್ತು ಚರಂಡಿ ನಿರ್ಮಾಣ ಮಾಡಬೇಕು. ಪಟ್ಟಣ ಪಂಚಾಯಿತಿಯಲ್ಲಿ ಅಭಿವೃದ್ಧಿ ಕಾರ್ಯ ನೋಡಿಕೊಳ್ಳಲು ಕಾಯಂ ಇಂಜಿನಿಯರ್ ನೇಮಿಸಬೇಕು ಮುಂತಾದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಿತು.

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	07:30 ರಿಂದ 09:00
ಗುಳಿಕ ಕಾಲ	ಮಧ್ಯಾಹ್ನ	01:30 ರಿಂದ 03:00
ಯಮಗಂಡ ಕಾಲ	ಬೆಳಿಗ್ಗೆ	10:30 ರಿಂದ 12:00

ಮೇಷ ಹೊರಾಂಗಣ ಚಟುವಟಿಕೆಗಳು ನಿಮಗೆ ಉಪಯುಕ್ತವಾಗುತ್ತವೆ. ಕೋಟೆಯೊಳಗಿನ ಜೀವನ ಶೈಲಿ ಮತ್ತು ಯಾವಾಗಲೂ ಭದ್ರತೆಯ ಬಗ್ಗೆ ಯೋಚಿಸುವುದು ನಿಮ್ಮ ದೈಹಿಕ ಹಾಗೂ ನಿಮ್ಮ ಮಾನಸಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಇದು ನಿಮ್ಮನ್ನು ಒಬ್ಬ ಗಾಬರಿಯ ವ್ಯಕ್ತಿಯನ್ನಾಗಿಯೂ ಮಾಡುತ್ತದೆ.

ವೃಷಭ ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯಪ್ರಜ್ಞೆಯಾಗಿದೆ ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು.

ಮಿಥುನ ನಿಮ್ಮ ಕಾಯಿಲೆ ಅತೃಪ್ತಿಯ ಕಾರಣವಾಗಿಬಹುದು. ಕುಟುಂಬದಲ್ಲಿಸಂತೋಷವನ್ನು ಪುನಃಸ್ಥಾಪಿಸಲು ನೀವು ಸಾಧ್ಯವಾದಷ್ಟೂ ಬೇಗ ಇದರಿಂದ ಹೊರಬರುವ ಅಗತ್ಯವಿದೆ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

ಕಟಕ ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ವಿದೇಶದಲ್ಲಿ ವ್ಯಾಪಾರ ಮಾಡುವ ಈ ರಾಶಿಚಕ್ರದ ಜನರಿಗೆ ಇಂದು ಸಾಕಷ್ಟು ಹಣದ ಲಾಭವನ್ನು ಪಡೆಯಬಹುದು. ದಿನದ ಉತ್ತರಾರ್ಧದಲ್ಲಿ ನೀವು ವಿಶ್ರಾಂತಿ ತೆಗೆದುಕೊಳ್ಳಬಯಸುತ್ತೀರಿ

ಸಿಂಹ ಒಂದು ಲಾಭಕರ ದಿನ ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ಹಣ ನಿಮಗೆ ಅಗತ್ಯವಾಗಿದೆ ಆದರೆ ನಿಮ್ಮ ಸಂಬಂಧಗಳನ್ನು ಹಾಳುಮಾಡುವಷ್ಟು ಹಣದ ಬಗ್ಗೆ ಗಂಭೀರವಾಗಬೇಡಿ. ಆಶ್ಚರ್ಯವಾಗುವ ಹಾಗೆ ನಿಮ್ಮ ಸಹೋದರ ನಿಮ್ಮನ್ನು ಪಾರು ಮಾಡುತ್ತಾರೆ.

ಕನ್ಯಾ ನಿಮ್ಮ ಮುಂಗೋಪ ನಿಮ್ಮನ್ನು ಇನ್ನೂ ಹೆಚ್ಚು ತೊಂದರೆಯಲ್ಲಿ ಸಿಲುಕಿಸಬಹುದು. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ಸ್ನೇಹಿತರು ಕುಟುಂಬದ ಸದಸ್ಯರೊಡನೆ ಒಂದು ಸಂಜೆಯನ್ನು ಆಯೋಜಿಸಿ. ನಿಮ್ಮ ಪ್ರೇಮಿಯನ್ನು ಭೇಟಿ ಮಾಡುತ್ತಿದ್ದ ಹಾಗೆ ಪ್ರಣಯ ಆವರಿಸಿಕೊಳ್ಳುತ್ತದೆ.

ತುಲಾ ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ಆದರೆ ವಿಪರೀತವಾಗಿ ತಿನ್ನುವುದು ನಿಮ್ಮ ಮರುದಿನದ ಮುಂಜಾನೆಗೆ ಅಸಮಾಧಾನವುಂಟುಮಾಡಬಹುದು. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

ವೃಶ್ಚಿಕ ಕುತ್ತಿಗೆ / ಬೆನ್ನಿನಲ್ಲಿ ನಿರಂತರ ನೋವಿನಿಂದ ಬಳಲುವ ಸಾಧ್ಯತೆಯಿದೆ. ವಿಶೇಷವಾಗಿ ಇದರ ಜೊತೆ ಸಾಮಾನ್ಯ ದೌರ್ಬಲ್ಯವಿದ್ದಾಗ ಇದನ್ನು ನಿರ್ಲಕ್ಷಿಸದಿರಿ. ಇಂದು ವಿಶ್ರಾಂತಿ ಬಹಳ ಪ್ರಮುಖವಾಗಿರುತ್ತದೆ. ಬಹಳ ಪ್ರಯೋಜನಕಾರಿ ದಿನವಲ್ಲ– ಆದ್ದರಿಂದ ನಿಮ್ಮ ಹಣದ ಪರಿಸ್ಥಿತಿಯನ್ನು ಪರಿಶೀಲಿಸಿ

ಧನಸ್ಸು ಈ ದಿನ ನಿಮ್ಮ ಪ್ರೀತಿ ಜೀವನದ ವಿಚಾರದಲ್ಲಿ ಅಸಾಧಾರಣವಾಗಿದೆ. ಪ್ರೀತಿ ಮಾಡುತ್ತಿರಿ. ನೀವು ತುರ್ತು ಅಗತ್ಯದ ಸಂದರ್ಭದಲ್ಲಿ ಬಲುಬೇಗನೆ ಕಾರ್ಯ ನಿರ್ವಹಿಸುವ ನಿಮ್ಮ ಸಾಮರ್ಥ್ಯಕ್ಕೆ ಮೆಚ್ಚುಗೆ ಪಡೆಯುತ್ತೀರಿ. ಆಯಸ್ಕಾಂತೀಯ ಎಲ್ಲರಲ್ಲೂ ಬೆರೆಯುವ ವ್ಯಕ್ತಿತ್ವ ಹೃದಯಗಳನ್ನು ಸೆರೆಹಿಡಿಯುತ್ತದೆ

ಮಕರ ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯೆಂದು ಸಾಬೀತುಪಡಿಸುತ್ತದೆ, ನಿಮಗೆ ಈ ಮಾತು ಅರ್ಥವಾಗಬಹುದು ಏಕೆಂದರೆ ಯಾವುದೇ ಹಳೆಯ ಹೂಡಿಕೆಯಿಂದ ನೀವು ಪ್ರಯೋಜನವನ್ನು ಪಡೆಯಬಹುದು

ಕುಂಭ ನಿಮ್ಮ ನಿರಂತರ ಸಕಾರಾತ್ಮಕ ಚಿಂತನೆಯನ್ನು ಪ್ರಶಂಸಿಸಲಾಗುತ್ತದೆ. ನಿಮ್ಮ ಪ್ರಯತ್ನದಲ್ಲಿ ನೀವು ಯಶಸ್ವಿಯಾಗಬಹುದು. ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಇಂದು ಹಣದ ನಷ್ಟವಾಗುವ ಸಾಧ್ಯತೆ ಇದೆ ಆದ್ದರಿಂದ ಇಂದು ಯೋಚಿಸಿ ಅರ್ಥಮಾಡಿಕೊಂಡು ನಡೆಯಿರಿ

ಮೀನ ಎಲ್ಲರಿಗೂ ಸಹಾಯ ಮಾಡುವ ನಿಮ್ಮನ್ನು ದಣಿಸುತ್ತದೆ. ಇಂದು ನೀವು ಅನಗತ್ಯವಾಗಿ ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಬೇಕು, ಇಲ್ಲದಿದ್ದರೆ ಅಗತ್ಯವಾದ ಸಮಯದಲ್ಲಿ ನಿಮ್ಮ ಹತ್ತಿರ ಹಣದ ಕೊರತೆ ಇರಬಹುದು. ಒಂದು ಕುಟುಂಬದ ಒಟ್ಟಾಗುವಿಕೆಯಲ್ಲಿ ನೀವೇ ಕೇಂದ್ರಬಿಂದುವಾಗಿರುತ್ತೀರಿ.

ನೀರಿಗಾಗಿ ಹೋರಾಡಿದ್ದೇ ತಪ್ಪಾಯಿತೇ? ರಸ್ತೆ ತಡೆದು ಪ್ರತಿಭಟನೆ ನಡೆಸಿದ 30ಕ್ಕೂ ಅಧಿಕ ರೈತರ ವಿರುದ್ಧ ಎಫ್‌ಐಆರ್!

ನೀರು ಕೇಳಿದ ಅನ್ನದಾತರಿಗೆ ಸರ್ಕಾರದ ಹಬ್ಬದ ಗಿಫ್ಟ್.. ಇದೇನಾ..?

• ಇಲಿಯಾಸ್ ಪಟೇಲ್. ಬಳಗಾನೂರ ರಾಜ್ಯ ವಿಶೇಷ ವರದಿಗಾರರು

• **ಉದಯವಾಹಿನಿ, ಯಾದಗಿರಿ:**

ಹಬ್ಬದ ಸಂಭ್ರಮದಲ್ಲಿರಬೇಕಾದ ಅನ್ನದಾತರಿಗೆ ಪೊಲೀಸ್ ಪ್ರಕರಣದ ಬರೆ ಬಿದ್ದಿದೆ. ಬಸವಸಾಗರ ಜಲಾಶಯದ ಎಡ ಮತ್ತು ಬಲದಂಡೆ ಕಾಲುವೆಗಳಿಗೆ ಸಮರ್ಪಕವಾಗಿ ಹಾಗೂ ನಿರಂತರವಾಗಿ ನೀರು ಹರಿಸುವಂತೆ ಆಗ್ರಹಿಸಿ ಹೋರಾಟ ನಡೆಸಿದ 30ಕ್ಕೂ ಅಧಿಕ ರೈತರ ವಿರುದ್ಧ ಹುಣಸಗಿ ಪೊಲೀಸರು ಎಫ್‌ಐಆರ್ ದಾಖಲಿಸಿರುವುದು ಜಿಲ್ಲೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಹುಣಸಗಿ ಕೆಂಭಾವಿ ಮುಖ್ಯರಸ್ತೆಯ ಅರಕೇರಾ (ಜೆ) ಗ್ರಾಮದ ಸಮೀಪ ರೈತರು ರಸ್ತೆ ತಡೆದು ಪ್ರತಿಭಟನೆ ನಡೆಸಿದ್ದರು. ಈ ವೇಳೆ ರಸ್ತೆಗೆ ಕಲ್ಲು ಹಾಗೂ ಮುಳ್ಳುಗಳನ್ನು ಹಾಕಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ. ಪ್ರತಿಭಟನೆಗೆ ಪೂರ್ವಾನುಮತಿ ಪಡೆಯದಿರುವುದು ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟುಮಾಡಿದ ಆರೋಪದಡಿ ಬಿಜೆಪಿ ಮುಖಂಡ ಕೃಷ್ಣಾರೆಡ್ಡಿ ಮುದನೂರು ಸೇರಿದಂತೆ 30ಕ್ಕೂ ಅಧಿಕ ಜನರ ವಿರುದ್ಧ ಹುಣಸಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪಿಎಸ್‌ಐ ರಾಹುಲ್ ಪವಾಡೆ ನೀಡಿದ ದೂರಿನ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ.

ನೀರಿಗಾಗಿ ಹೋರಾಟ, ರೈತರ ಮೇಲೆ ಕೇಸ್!

ಬೆಳೆ ಉಳಿಸಿಕೊಳ್ಳಲು ಕಾಲುವೆಗಳಿಗೆ ನಿರಂತರ ನೀರು ಹರಿಸುವಂತೆ ರೈತರು ಆಗ್ರಹಿಸಿದ್ದರು. ಆದರೆ, ನೀರಿನ ಬೇಡಿಕೆ ಮುಂದಿಟ್ಟುಕೊಂಡು ನಡೆಸಿದ ಪ್ರತಿಭಟನೆ ಇದೀಗ ಪೊಲೀಸ್ ಪ್ರಕರಣಕ್ಕೆ ಕಾರಣವಾಗಿದೆ. ಈ ಬೆಳವಣಿಗೆ ರೈತ ವಲಯದಲ್ಲಿ ಅಸಮಾಧಾನ ಮೂಡಿಸಿದೆ.

ಪ್ರಕರಣ ರದ್ದತಿಗೆ ರಾಜೂಗೌಡ ಆಗ್ರಹ

ರೈತರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಕೂಡಲೇ ರದ್ದುಗೊಳಿಸಬೇಕು ಎಂದು ಮಾಜಿ ಸಚಿವ ರಾಜೂಗೌಡ ಒತ್ತಾಯಿಸಿದ್ದಾರೆ. ನೀರು ಕೇಳಿದ ರೈತರ ಮೇಲೆ ಪ್ರಕರಣ ದಾಖಲಿಸುವುದು ಸರಿಯಲ್ಲ. ರೈತರ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ನಡೆಯಬಾರದು. ಪ್ರಕರಣ ದಾಖಲಿಸಿದ ಪಿಎಸ್‌ಐ ವಿರುದ್ಧವೂ ತನಿಖೆಯಾಗಬೇಕು ಎಂದು ಆಗ್ರಹಿಸಿದ್ದಾರೆ.

ಒಂದೆಡೆ ಕಾಲುವೆ ನೀರಿಗಾಗಿ ರೈತರ ಹೋರಾಟ, ಮತ್ತೊಂದೆಡೆ ಹೋರಾಟಗಾರರ ವಿರುದ್ಧ ಪೊಲೀಸ್ ಪ್ರಕರಣ. ಹಬ್ಬದ ಸಂಭ್ರಮದ ನಡುವೆಯೇ ರೈತರನ್ನು ಕಾಡುತ್ತಿರುವ ಈ ಬೆಳವಣಿಗೆ ಜಿಲ್ಲೆಯಲ್ಲಿ ಹೊಸ ವಿವಾದಕ್ಕೆ ಕಾರಣವಾಗಿದ್ದು, ರೈತರ ಬೇಡಿಕೆಗೆ ಸರ್ಕಾರ ಹಾಗೂ ಸಂಬಂಧಿಸಿದ ಅಧಿಕಾರಿಗಳು ಯಾವಾಗ ಸ್ಪಂದಿಸಲಿದ್ದಾರೆ ಎಂಬ ಪ್ರಶ್ನೆ ಎದುರಾಗಿದೆ.

ಜನರ ಸಮಸ್ಯೆಗಳನ್ನು ಸಕಾಲದಲ್ಲಿ ಪರಿಹರಿಸಿ: ಟಿ.ರಘುಮೂರ್ತಿ

ಬಿತ್ತನೆ ಮಾಡದವರಿಗೂ ವಿಮೆ ದೊರೆಯಲಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಸುಮಾರು 207 ಕೋಟಿ ಅನುದಾನ ಬಿಡುಗಡೆಯಾಗಿದೆ

• **ಉದಯವಾಹಿನಿ, ಹೊಸದುರ್ಗ:**

'ಪ್ರಜಾ ಸೇವಾ ಅಭಿಯಾನದ ಮೂಲಕ ಅರ್ಜಿ ವಿಲೇವಾರಿ ಮಾಡುವುದು ಮಾತ್ರವಲ್ಲ, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರ ಒದಗಿಸಬೇಕು. ಕಾನೂನು ತೊಡಕುಗಳಿರುವ ಪ್ರಕರಣಗಳನ್ನು ಬಿಟ್ಟು, ಉಳಿದವುಗಳನ್ನು ಕಾಲಮಿತಿಯಲ್ಲಿ ಇತ್ಯರ್ಥಪಡಿಸಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಟಿ.ರಘುಮೂರ್ತಿ ಅಧಿಕಾರಿಗಳಿಗೆ ಸೂಚಿಸಿದರು.

1: ಒಟ್ಟು 66 ಅರ್ಜಿಗಳು ಸಲ್ಲಿಕೆಯಾಗಿದ್ದು

2: ಯಶಸ್ವಿಯಾಗಿ ವಿಲೇವಾರಿ ಮಾಡಲಾಗಿದೆ

3: 207 ಕೋಟಿ ಅನುದಾನ ಬಿಡುಗಡೆಯಾಗಿದೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹೊಸದುರ್ಗ ತಾಲ್ಲೂಕು ಆಡಳಿತದ ವತಿಯಿಂದ ಪಟ್ಟಣದ ಅಶೋಕ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ 'ಪ್ರಜಾ ಸೇವಾ' ಅಭಿಯಾನದ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

'ಹಿರಿಯೂರು ಹಾಗೂ ಹೊಳಲ್ಕೆರೆ ತಾಲ್ಲೂಕಿನಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರಜಾ ಸೇವಾ ಸಭೆಯಲ್ಲಿ, ಹಿರಿಯೂರಿಗೆ ಸಂಬಂಧಿಸಿದಂತೆ ಒಟ್ಟು 287 ಅರ್ಜಿಗಳು ಬಂದಿದ್ದು, ಅದರಲ್ಲಿ 282 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಒಟ್ಟು 66 ಅರ್ಜಿಗಳು ಸಲ್ಲಿಕೆಯಾಗಿದ್ದು, ಎಲ್ಲವನ್ನೂ ಯಶಸ್ವಿಯಾಗಿ ವಿಲೇವಾರಿ ಮಾಡಲಾಗಿದೆ. ಜಿಲ್ಲಾ ಹಾಗೂ



ತಾಲ್ಲೂಕು ಮಟ್ಟದ ಕೆಡಿಪಿ ಸಭೆಗಳಲ್ಲಿ ಈ ಅರ್ಜಿಗಳ ವಿಲೇವಾರಿ ಕುರಿತು ವಿಸ್ತ್ರತವಾಗಿ ಚರ್ಚಿಸಲಾಗುವುದು' ಎಂದು ಹೇಳಿದರು.

'ಬಿತ್ತನೆ ಮಾಡದವರಿಗೂ ವಿಮೆ ದೊರೆಯಲಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಸುಮಾರು 207 ಕೋಟಿ ಅನುದಾನ ಬಿಡುಗಡೆಯಾಗಿದೆ. ಮುಂದಿನ ದಿನಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಡಿ ಪ್ರತಿ ವರ್ಷ 29.9 ಟಿಎಂಸಿ ಅಡಿ ನೀರು ಪಡೆದುಕೊಳ್ಳುವಂತೆ ಮಾಡಲಾಗುವುದು. ಮೋಟಾರ್ ಅಥವಾ ನಾಲೆ ಮೂಲಕ ನೀರು ಪಡೆಯುವ ಯೋಜನೆಗೆ ಯಾವುದೇ ರೀತಿಯಲ್ಲೂ ಅಡ್ಡಿ ಉಂಟು ಮಾಡಬಾರದು' ಎಂದು ಎಚ್ಚರಿಸಿದರು.

ಸಾರ್ವಜನಿಕರಿಂದ ಸ್ವೀಕರಿಸಿದ ಯಾವುದೇ ಅರ್ಜಿಯನ್ನು ಬಾಕಿ ಉಳಿಸಿಕೊಳ್ಳದೆ, ನಿಗದಿತ ಸಮಯದಲ್ಲಿ ಸೂಕ್ತ ಪರಿಹಾರ ಒದಗಿಸುವ ಜವಾಬ್ದಾರಿ ಅಧಿಕಾರಿಗಳದ್ದು' ಎಂದು ಶಾಸಕ ಬಿ.ಜಿ. ಗೋವಿಂದಪ್ಪ ತಿಳಿಸಿದರು. 'ಪ್ರಜಾ ಸೇವಾ ಅಭಿಯಾನದ ಸಭೆಯು ಸಾರ್ವಜನಿಕರಿಂದ

> ಹಿಂದೆ ಜನಸ್ಪಂದನ ಸಭೆಗಳು ಮಾಮೂಲಿಯಂತೆ ನಡೆಯುತ್ತಿದ್ದವು. ಆದರೆ ಪ್ರಜಾ ಸೇವಾ ಕಾರ್ಯಕ್ರಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲಾಗಿದೆ. ಯಾವ ವಿಚಾರದಲ್ಲೂ ನಿರ್ಲಕ್ಷ್ಯ ವಹಿಸಬಾರದೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಎಚ್ಚರಿಕೆ ನೀಡಲಾಗಿದೆ' ಎಂದರು. –ಸಚಿವ ಟಿ.ರಘುಮೂರ್ತಿ

ಅಹವಾಲುಗಳನ್ನು ಸ್ವೀಕರಿಸಿ, ಅವುಗಳಿಗೆ ಸೂಕ್ತ ಸ್ಪಂದನೆ ನೀಡುವ ಸತ್ಕಾರ್ಯವಾಗಿದೆ' ಎಂದು ಜಿ.ಪಂ. ಸಿಇಒ ಡಾ.ಎಸ್.ಆಕಾಶ್ ಹೇಳಿದರು. ಇದೇ ವೇಳೆ ವಿವಿಧ ಇಲಾಖೆಗಳ ಯೋಜನೆಯ ಪ್ರಚಾರಕ್ಕಾಗಿ ಮಳಿಗೆಗಳನ್ನು ತೆರೆಯಲಾಗಿತ್ತು. ಹೊಸದುರ್ಗ ಪಟ್ಟಣದ ಪ್ರದೇಶಗಳಲ್ಲಿ ಮನೆ ಕಟ್ಟಿಕೊಂಡವರಿಗೆ ಹಕ್ಕುಪತ್ರಗಳನ್ನು ವಿತರಿಸಲಾಯಿತು. ಸಮಾಜ ಕಲ್ಯಾಣ ಇಲಾಖೆ ವತಿಯಿಂದ

> 'ಸಾರ್ವಜನಿಕರು ಖಾತೆ ಬದಲಾವಣೆ, ನಿವೇಶನ, ಹಕ್ಕುಪತ್ರಗಳು, ಪಿಂಚಣಿ ಅಥವಾ ಇತರೆ ಆಡಳಿತಾತ್ಮಕ ಕೆಲಸಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸಲ್ಲಿಸಬಹುದು. ಎಲ್ಲಾ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದು ಅರ್ಜಿಗಳನ್ನು ಪಡೆದುಕೊಂಡು, ಅವುಗಳಿಗೆ ಶೀಘ್ರ ಪರಿಹಾರ ಒದಗಿಸಲಿದ್ದಾರೆ.

ಅಂತರ್ಜಾತಿ ವಿವಾಹವಾದ ಜೋಡಿಗಳಿಗೆ ಪ್ರೋತ್ಸಾಹ ಧನ ಮಂಜೂರಾಗಿದ್ದು, ಎಫ್.ಡಿ. ಬಾಂಡ್ ವಿತರಿಸಲಾಯಿತು. 'ಗಡಿ ಅಹಮ್ಮದ್ ನಗರದಲ್ಲಿ ಸರ್ಕಾರಿ ಜಮೀನುಗಳಲ್ಲಿ ಕೆಲವರು ಅನಧಿಕೃತವಾಗಿ ಬೇಲಿ ಹಾಕಿ, ಶಾಲಾ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ತೊಂದರೆ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿವೆ. ತಹಶೀಲ್ದಾರ್ ಅಂತಹ ಜಮೀನುಗಳನ್ನು ಪರಿಶೀಲಿಸಿ, ಅನಧಿಕೃತವಾಗಿ ಹಾಕಿರುವ ಬೇಲಿಯನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು' ಎಂದು ಶಾಸಕ ಬಿ.ಜಿ. ಗೋವಿಂದಪ್ಪ ಸೂಚಿಸಿದರು.

ಗೋಮಾಳ ಕಲ್ಪಿಸುವುದು, ಕೆರೆಗಳ ಒತ್ತುವರಿ ತೆರವುಗೊಳಿಸುವುದು, ಭದ್ರಾ ಮೇಲ್ದಂಡೆ ಯೋಜನೆಯಡಿ ಕೈಬಿಟ್ಟಿರುವ ಕೆರೆಗಳಿಗೂ ನೀರು ಹರಿಸುವುದು, ಪಿಂಚಣಿ ಸೌಲಭ್ಯ, ಸಂಧ್ಯಾ ಸುರಕ್ಷಾ, ಗೃಹಲಕ್ಷ್ಮಿ ಯೋಜನೆ, ಹಕ್ಕುಪತ್ರ ವಿತರಣೆ, ಕುಡಿಯುವ ನೀರಿನ ಘಟಕ ದುರಸ್ತಿ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ 73 ಅರ್ಜಿಗಳನ್ನು ಸ್ವೀಕರಿಸಲಾಯಿತು.


ಜನರ ಮನೆ ಬಾಗಿಲಿಗೆ ತೆರಳಿ ಸಮಸ್ಯೆ ಆಲಿಸಿ ಪರಿಹರಿಸಲು ಅಧಿಕಾರಿಗಳಿಗೆ ಶಾಸಕ ಬಸನಗೌಡ ತುರವಿಹಾಳ ಸೂಚನೆ

• **ಉದಯವಾಹಿನಿ, ಮಸ್ಕಿ:**

ಜನರ ಮೂಲಭೂತ ಸಮಸ್ಯೆಗಳನ್ನು ಅರಿತುಕೊಂಡಾಗ ಮಾತ್ರ ಅವುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಜನರ ಮನೆ ಬಾಗಿಲಿಗೆ ತೆರಳಿ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಕೆಲಸ ಮಾಡಬೇಕು ಎಂದು ಶಾಸಕ ಆರ್. ಬಸನಗೌಡ ತುರವಿಹಾಳ ಹೇಳಿದರು.

ಪಟ್ಟಣದ ಗ್ರೀನ್ ಸಿಟಿಯಲ್ಲಿ ಹಮ್ಮಿಕೊಂಡಿದ್ದ 'ಅನ್ವೇಷಣೆ ಪ್ರಜಾಸೇವಾ ವಾಹನ' ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಎರಡನೇ ಮತ್ತು ನಾಲ್ಕನೇ ಶನಿವಾರದಂದು ಕಚೇರಿಗಳಿಗೆ ಬರಲು ಸಾಧ್ಯವಾಗದ ಸಾರ್ವಜನಿಕರ ಬಳಿಗೆ ಅಧಿಕಾರಿಗಳೇ ತೆರಳಿ ಸೇವೆ ಒದಗಿಸುವ ಉದ್ದೇಶದಿಂದ ಈ ಯೋಜನೆ ಜಾರಿಗೆ ತರಲಾಗಿದೆ. ಜನರ ಮೂಲ ಸಮಸ್ಯೆಗಳ ಅಧ್ಯಯನ ಮಾಡಿದಾಗ ಮಾತ್ರ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂಬ ಉದ್ದೇಶದಿಂದ ಸರ್ಕಾರ ಅನ್ವೇಷಣೆ ಕಾರ್ಯಕ್ರಮ ರೂಪಿಸಿದೆ ಎಂದರು.



ಮರ ಹೆಮ್ಮರವಾಗಿ ಬೆಳೆಯಬೇಕಾದರೆ ಅದರ ಬೇರುಗಳು ಗಟ್ಟಿಯಾಗಿರಬೇಕು. ಅದೇ ರೀತಿ ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವ ಮೂಲಕ ಆಡಳಿತ ವ್ಯವಸ್ಥೆಯನ್ನು ಬಲಪಡಿಸಬೇಕು. ಈ ವಾಹನ ಜನರು ಮತ್ತು ಅಧಿಕಾರಿಗಳ ನಡುವಿನ ಸಂಪರ್ಕ ಸೇತುವೆಯಾಗಲಿ ಎಂದು ಆಶಿಸಿದರು.

ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಪರಸ್ಪರ ಸಹಕಾರದಿಂದ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಗ್ರಾಮಗಳಲ್ಲಿ ಶೇ.20ರಷ್ಟು ಕಾರ್ಯಕರ್ತರಿದ್ದರೆ, ಶೇ.80ರಷ್ಟು ಸಾಮಾನ್ಯ ಮತದಾರರಿದ್ದಾರೆ. ಪ್ರತಿಯೊಬ್ಬರ ಸಮಸ್ಯೆಗಳನ್ನು ಸಮಾನವಾಗಿ ಪರಿಗಣಿಸಿ ಜನರ ಕಣ್ಣೀರು ಒರೆಸುವ ಕೆಲಸ ಮಾಡಬೇಕು. ಜನರೊಂದಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡು ಸೇವೆ ಸಲ್ಲಿಸಿದಾಗ ಮಾತ್ರ ನಿಜವಾದ ನೆಮ್ಮದಿ ದೊರೆಯುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಮಂಜುನಾಥ ಬೋಗಾವತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ ಯದ್ದಲದಿನ್ನಿ, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ಮೈಬುಸಾಬ ಮುದ್ದಾಪೂರ, ಎಪಿಎಂಸಿ ಅಧ್ಯಕ್ಷ ಸಿದ್ದನಗೌಡ ಮಾಟೂರು, ಗ್ರಾಮೀಣ ಘಟಕದ ಅಧ್ಯಕ್ಷ ಹನುಮಂತಪ್ಪ ಮುದ್ದಾಪೂರ, ನಿರುಪಾದೆಪ್ಪ ವಕೀಲರು, ಅಂದಾನೆಪ್ಪ ಗುಂಡಳ್ಳಿ, ಎಚ್.ಬಿ. ಮುರಾರಿ, ಬಸನಗೌಡ ಪೊಲೀಸ್ ಪಾಟೀಲ, ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ, ಗ್ರಾಮೀಣ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ನಾಗಭೂಷಣ ಬಾರಕೇರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ತೋಟಿ ಏತ ನೀರಾವರಿ ಯೋಜನೆಗೆ 5.50 ಕೋಟಿ ಪರಿಹಾರ



• **ಉದಯವಾಹಿನಿ, ನುಗ್ಗೇಹಳ್ಳಿ:**


ತೋಟಿ ಏತ ನೀರಾವರಿ ಯೋಜನೆಗೆ ಭೂಮಿ ನೀಡಿರುವ ರೈತರಿಗೆ ಭೂ ಸ್ವಾಧೀನ ಇಲಾಖೆ ವತಿಯಿಂದ 11.50 ಕೋಟಿ ಪರಿಹಾರದ ಪೈಕಿ 5.50 ಕೋಟಿ ಹಣ ಬಿಡುಗಡೆಯಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಹೋಬಳಿಯ ಬಸವನಪುರ ಗ್ರಾಮದಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ವತಿಯಿಂದ 7.7 ಕಿಲೋ ಮೀಟರ್ ರಸ್ತೆಯ ಮರು ಡಾಂಬರೀಕರಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

> ಕಲ್ಲೇ ಸೋಮನಹಳ್ಳಿ ಏತ ನೀರಾವರಿ ಯೋಜನೆಗೆ ಭೂಮಿ ನೀಡಿರುವ ರೈತರಿಗೂ 4 ಕೋಟಿ ಬಿಡುಗಡೆಯಾಗಿದ್ದು ಬಾಕಿ ಹಣ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು. –ಸಿ.ಎನ್. ಬಾಲಕೃಷ್ಣ, ಶಾಸಕ

ಮುಂಬರುವ ಹಂಗಾಮಿನಲ್ಲಿ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡುವ ಮೂಲಕ ನುಗ್ಗೇಹಳ್ಳಿ ಹಿರೀಸಾವೆ ಹೋಬಳಿಗಳ ಸುಮಾರು 25 ಕೆರೆಗಳಿಗೆ ನೀರು ಹರಿಸಲಾಗುತ್ತದೆ ಎಂದರು. ಗ್ರಾಮದ ಸಮುದಾಯ ಭವನ ನಿರ್ಮಾಣಕ್ಕೆ ಮುಂಬರುವ ಆರ್ಥಿಕ ವರ್ಷದಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಭರವಸೆ ನೀಡಿದರು. ತಾಲ್ಲೂಕಿನಲ್ಲಿ ಸುಮಾರು 6 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು ಸದ್ಯ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆಗೆ ಹೊಸ ಕೊಳವೆಬಾವಿ ಕೊರೆಸಲಾಗಿದೆ. ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡ ನಂತರ ಗ್ರಾಮದಲ್ಲಿ ನೀರಿನ ಸಮಸ್ಯೆ ಬಗೆಯಲಿದೆ ಎಂದರು. ಚನ್ನರಾಯಪಟ್ಟಣ ತಾಲ್ಲೂಕು ಟಿಎಪಿಎಂಎಸ್ ಅಧ್ಯಕ್ಷ ತೋಟಿ ನಾಗರಾಜ್, ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಹುಲಿಕೆರೆ ಸಂಪತ್ ಕುಮಾರ್, ವಿಕ್ಟರ್, ಬಸವನಪುರ ಸ್ವಾಮಿ, ರಾಮಲಿಂಗಣ್ಣ, ಗುತ್ತಿಗೆದಾರ ಆಸಿಫ್ ಹಾಜರಿದ್ದರು.

ಪಟಾಕಿ ಅಂಗಡಿ (ಬಂಡಿಗೆ) ಆಕಸ್ಮಿಕ ಬೆಂಕಿ ತಗುಲಿ ಸುಟ್ಟು ಭಸ್ಮ



• **ಉದಯವಾಹಿನಿ,ಚಿಂಚೋಳಿ:**

ತಾಲ್ಲೂಕಿನ ಸುಲೇಪೇಟ ಗ್ರಾಮದ ಬಸವೇಶ್ವರ ವೃತ್ತದ ಪಕ್ಕದಲ್ಲೇ ಪಟಾಕಿ ಅಂಗಡಿಯೊಂದಕ್ಕೆ (ಬಂಡಿ) ಗೆ ಏಕಾಏಕಿ ಬೆಂಕಿ ತಗುಲಿ ಸುಟ್ಟು ಭಸ್ಮವಾದ ಘಟನೆ ರವಿವಾರ ಜರುಗಿದೆ.

ಸುಲೇಪೇಟ ಬಸವೇಶ್ವರ ವೃತ್ತದ ಪಕ್ಕದಲ್ಲೇ ವೆಂಕಟೇಶ ರಾಗಂ ಎನ್ನುವ ವ್ಯಾಪಾರಿ ಅಂಗಡಿ (ಬಂಡಿ)ಯೊಂದು ಇಟ್ಟಿಕೊಂಡು ವ್ಯಾಪಾರ ಮಾಡುತ್ತಾ ಜೀವನ ಕಳೆಯುತ್ತಿದ್ದ ಆದರೆ ಏಕಾಏಕಿ ಆಕಸ್ಮಿಕವಾಗಿ ಬೆಂಕಿ ತಗುಲಿ ಸಂಪೂರ್ಣ ಪಟಾಕಿ ಅಂಗಡಿ (ಬಂಡಿ) ಸುಟ್ಟು ಭಸ್ಮವಾಗಿದೆ ಅಂದಾಜು 1ಲಕ್ಷದವರೆಗೆ ನಷ್ಟವಾಗಿದೆ ಎಂಬ ಮಾಹಿತಿ ಪ್ರತ್ಯಕ್ಷರು ಮತ್ತು ನೊಂದ ವ್ಯಾಪಾರಿ ತಿಳಿಸಿದ್ದಾರೆ.

ಯಾವುದೇ ದೊಡ್ಡ ಅನಾಹುತ ಆಗದೆ ಸಣ್ಣಪುಟ್ಟ ಘಾಯ ಅನಾಹುತ ಬಿಟ್ಟರೆ ಯಾವುದೇ ದೊಡ್ಡ ಪ್ರಮಾಣದ ಘಟನೆ ಆಗದಂತೆ ಸ್ಥಳದಲ್ಲಿದ್ದ ಗ್ರಾಮಸ್ಥರು ಸುದ್ದಿ ತಿಳಿದಕ್ಷಣ ಪೋಲೀಸರು ಬೆಂಕಿ ನಂದಿಸಿ ಪರಿಸ್ಥಿತಿ ನಿಯಂತ್ರಣಕ್ಕೆ ತಂದರು.



